
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

01 ಫೆಬ್ರವರಿ 2017 ಪುಟ 16 ರೂ. 15/-

ಮೋದಿ ಸರ್ಕಾರದ




'ಸಾಧನೆ'ಗಳು




ರಾಯಣ್ಣನ ಹೆಸರು ಮನುವಾದಿಗಳ ಬಸಿರು

ತಲೆತಪ್ಪಿಸಿಕೊಂಡಿದ್ದಾನೆ ಸಂಸದ ಅನಂತ್ಮಾಣಿ





ಚಿತ್ರದುರ್ಗ ತಿಪ್ಪಾರೆಡ್ಡಿ ಸೀಟಿಗೆ ಸಿದ್ದೇಶ್ವರನ ಟವೆಲ್ಲು!






ನಾಗಮಂಗಲ ಅಪ್ಪ-ಮಗನಿಗೆ ಗುಮ್ಮಿದ 'ಚೆಲುವಾ'ದ ಗೂಳಿ




ಬಳ್ಳಾರಿ ಗೋನಾಳದ ದಲಿತರ ಮೇಲೆ ಅಮಾನುಷ ಹಲ್ಲೆ!

ಮೈಸೂರು ಪ್ರಸಾದ್‌ಗೆ ಸೆಡ್ಡು ಹೊಡೆಯಲು ಕಳಲೆ ಕಾಂಗ್ರೆಸ್‌ಗೆ



ನೋಟು ರದ್ದತಿ ವಿಶ್ಲೇಷಣೆಗೆ ಮುಂಚೆ ಮೋದಿ ಸರ್ಕಾರದ 2 ವರ್ಷಗಳ 'ಸಾಧನೆ' ಮರೆಯಬಾರದು



ಕಳೆದ ವಾರ ಈ ಅಂಕಣದಲ್ಲಿ ನೋಟು ರದ್ದತಿ ವಿಡಾಗಿ - 1 ಎಂಬ ಲೇಖನವಿತ್ತು, ಅದರಲ್ಲಿ ನಗದುರಹಿತ ಆರ್ಥಿಕತೆಯಿಂದ ಭ್ರಷ್ಟಾಚಾರವನ್ನು ತಡೆಗಟ್ಟುವುದು ಸಾಧ್ಯವೇ ಎಂಬುದು ಮುಂದಿನ ವಾರ ಬರೆಯಲಾಗುತ್ತದೆಂದು ಹೇಳಲಾಗಿತ್ತು, ಆದರೆ ಒಂದು ವಾಸ್ತವ ಎದ್ದು ಕಾಣುತ್ತಿದೆ. ತಮ್ಮ ಮೇಲೆ ನಡೆದ ಭಾರೀ ದಾಳಿಯ ಹೊರತಾಗಿಯೂ, ದೇಶದ ಗಣನೀಯ ಪ್ರಮಾಣದ ಜನರಿಗೆ ಇದರಿಂದ ಒಳ್ಳೆಯದೇನೋ ಆಗಲಿಕ್ಕಿದೆ ಅಥವಾ ಆಗಲಿಕ್ಕಿತ್ತು, ಅದನ್ನು ಬ್ಯಾಂಕ್‌ನವರು ಸರಿಯಾಗಿ ಜಾರಿ ಮಾಡದೇ ಹಳ್ಳ ಹಿಡಿಸಿದರು ಎಂಬ ಭಾವನೆಯೇ ಇದೆ. ಈ ಹಿನ್ನೆಲೆಯಲ್ಲಿ, ಮೋದಿ ಸರ್ಕಾರವು ತನ್ನ ಆಡಳಿತಾವಧಿಯಲ್ಲಿ ಕೈಗೊಂಡ ಕೆಲವು ಆರ್ಥಿಕ ಕ್ರಮಗಳ ಕುರಿತಾಗಿ ಮೊದಲಿಗೇ ಚರ್ಚಿಸುವುದು ಅಗತ್ಯವೆನ್ನಿಸುತ್ತಿದೆ. ಪುಣೆಯ ಲೋಕಾಯುತದವರು ಹೊರತಂದಿರುವ ಪುಸ್ತಕದಲ್ಲಿನ ಮಾಹಿತಿಯನ್ನು ಇಲ್ಲಿ ಮುಂದಿಡಲಾಗಿದೆ. ಅದರ ಜೊತೆಗೆ ಕಳೆದೆರಡು ವರ್ಷಗಳ ಸರ್ಕಾರದ ಆರ್ಥಿಕನೀತಿಯ ಕೆಲವು ಅಂಶಗಳನ್ನು ಒರೆಗೆ ಹಚ್ಚುವ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯ ಅರಿವಿನ ಜೊತೆಗೇ ನಾವು ಮೋದಿ ಸರ್ಕಾರ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮವನ್ನಾದರೂ ನೋಡುವ ಅಗತ್ಯವಿದೆ.

ಈ ನೆಲೆಯ ಚರ್ಚೆಯ ಅಗತ್ಯವಿದೆಯೇ? ಖಂಡಿತಾ ಇದೆ. ಏಕೆಂದರೆ, ಮೋದಿ ಎಂಬ ವ್ಯಕ್ತಿಯನ್ನು ಸೂಪರ್‌ಮ್ಯಾನ್ ಆಗಿ ಬಿಂಬಿಸಲು ಪ್ರಯತ್ನಿಸಿದ ಮಾಧ್ಯಮಗಳು ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿವೆ. ಮೋದಿ ಒಬ್ಬ ಅವತಾರ ಪುರುಷ ಎಂಬ ಕಾರ್ಯಕ್ರಮಗಳನ್ನು ಅವು ಪ್ರಸಾರ ಮಾಡುತ್ತಿವೆ. ಸೂಪರ್‌ಮ್ಯಾನ್ ತಪ್ಪು ಮಾಡಬಹುದು; ಅವತಾರ ಪುರುಷ ಮಾಡುವುದು ಸಾಧ್ಯವಿಲ್ಲ, ಹೀಗಾಗಿ, ಏನೇ ನಡೆದರೂ ಅದು ಅಂತಿಮವಾಗಿ ಒಳ್ಳೆಯದಕ್ಕೇ ಆಗಿರುತ್ತದೆ ಎಂಬಂತೆ ನೋಡುವುದು ಭಾರತೀಯರ ಪಾಲಿಗೆ ಕಷ್ಟವೇನಲ್ಲ, ಪುರಾಣಗಳು ಮಾತ್ರವಲ್ಲದೇ ಭಾರತೀಯ ಸಿನಿಮಾ ಸಹ ಜನರಿಗೆ ಅಂತಹ ಪವಾಡ ಪುರುಷರ ಚಿತ್ರಣವನ್ನು ಸೊಗಸಾಗಿಯೇ ಕಟ್ಟಿಕೊಟ್ಟು ಅಭ್ಯಾಸ ಮಾಡಿಸಿವೆ. ಪವಾಡ ಪುರುಷರು ಕಳೆದ ಎರಡೂವರೆ ವರ್ಷಗಳಲ್ಲಿ ನಡೆಸಿದ ಪವಾಡಗಳ ಸರಿಯಾದ ಚಿತ್ರಣವಿಲ್ಲದೇ, 'ನವೆಂಬರ್ 8ರಂದು ಇದ್ದಕ್ಕಿದ್ದಂತೆ ಉದ್ಭವಿಸಿದ' ಹೊಸ ವಿದ್ಯಮಾನವನ್ನು ಅರ್ಥಮಾಡಿಕೊಳ್ಳಲಾಗದು.

ವಾಸ್ತವದಲ್ಲಿ ಹಿಂದಿನ ಭ್ರಷ್ಟ ಯುಪಿಎ ಸರ್ಕಾರಕ್ಕಿಂತ ಹೆಚ್ಚು ಜನವಿರೋಧಿಯೂ, ಕಾರ್ಪೊರೇಟ್‌ಪರವೂ ಆದ ಸರ್ಕಾರ ಇದಾಗಿದೆ ಎನ್ನಲು ಸಾಕಷ್ಟು ಪುರಾವೆಗಳಿವೆ. 2014-15ರಲ್ಲಿ ಮೋದಿ ಸರ್ಕಾರವು ಬಜೆಟ್‌ನಲ್ಲೇ ಕಾರ್ಪೊರೇಟ್ ಕಂಪೆನಿಗಳಿಗೆ ನೀಡಲಾದ ತೆರಿಗೆ ವಿನಾಯಿತಿ/ಕಡಿತ/ಪ್ರೋತ್ಸಾಹದಾಯಕ ಕ್ರಮಗಳೆಂದು ಘೋಷಿಸಿದ್ದುದರ ಒಟ್ಟು ಮೊತ್ತ 5.49 ಲಕ್ಷ ಕೋಟಿಗಳಾಗಿತ್ತು, ಅದು 2015-16ರಲ್ಲಿ 5.51 ಲಕ್ಷ ಕೋಟಿಗಳಷ್ಟು ಪ್ರಮಾಣಕ್ಕೆ ಸ್ವಲ್ಪವೇ ಸ್ವಲ್ಪ ಏರಿತು. ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವರು ರಾಜ್ಯಸಭೆಯಲ್ಲೇ ಕಳೆದೆರಡು ವರ್ಷಗಳಲ್ಲಿ ಸಾರ್ವಜನಿಕ ಸ್ವಾಮ್ಯದ ಬ್ಯಾಂಕುಗಳಿಂದ ಕಾರ್ಪೊರೇಟ್



ಉದ್ದಿಮೆದಾರರಿಗೆ 1.05 ಲಕ್ಷ ಕೋಟಿಗಳಷ್ಟು ಸಾಲಮನ್ನಾ ಮಾಡಲಾಗಿದೆ ಎಂದು ಘೋಷಿಸಿದರು. ರೈತರ ಸಾಲಮನ್ನಾ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ನಿರಾಕರಿಸುತ್ತಿರುವ ಸಂದರ್ಭದಲ್ಲಿ ಇದು ನಡೆದಿದೆ ಎಂಬುದನ್ನು ಮರೆಯಲಾಗದು. ಇದಲ್ಲದೇ 2015ರ ಮಾರ್ಚ್‌ವರೆಗೆ 4.03 ಲಕ್ಷ ಕೋಟಿಗಳಷ್ಟು ಸಾಲ ಮರುಹೊಂದಾಣಿಕೆಯನ್ನೂ ಈ ಬ್ಯಾಂಕುಗಳು ಮಾಡಿದ್ದವು. ನಂತರದ ಒಂದು ವರ್ಷದಲ್ಲಿ ಒಟ್ಟಾರೆ ತೀರಿಸದೇ ಹೋದ ಸಾಲಗಳ ಬಾಬ್ತು 6 ಲಕ್ಷ ಕೋಟಿಗಳಿಗೇರಿತ್ತು.

ದೊಡ್ಡ ಕುಳಗಳಿಗೆ ಕೊಟ್ಟಿದ್ದು ಇಷ್ಟೇ ಎಂದು ಭಾವಿಸಬೇಕಿಲ್ಲ, 2016-17ರಲ್ಲಿ ಹಣಕಾಸು ಸಚಿವ ಅರುಣ್ ಜೇಟ್ಲಿಯವರು 55,000 ಕೋಟಿ ರೂ.ಗಳಷ್ಟು ಹಣವನ್ನು ರಸ್ತೆ ಮತ್ತು ಹೆದ್ದಾರಿಗಳ ನಿರ್ಮಾಣಕ್ಕಾಗಿ ತೆಗೆದಿಟ್ಟರು. ಆದರೆ ಆ ಯಾವ ರಸ್ತೆಯನ್ನೂ ಸರ್ಕಾರ ಕಟ್ಟಲಿಲ್ಲ. ಬದಲಿಗೆ ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ರಸ್ತೆ ಕಟ್ಟಲು ಖಾಸಗಿಯವರಿಗೆ ನೀಡಿದ ಸಬ್ಸಿಡಿ ಅದಾಗಿತ್ತು, ಕಳೆದ ವರ್ಷವೇ ಆ ಹಣದಲ್ಲಿ 43,000 ಕೋಟಿ ರೂ.ಗಳಷ್ಟನ್ನು ಖಾಸಗಿ ಕಂಪೆನಿಗಳ ಅಕೌಂಟಿಗೆ ವರ್ಗಾಯಿಸಲಾಯಿತು. ಈ ಎರಡೂವರೆ ವರ್ಷಗಳಲ್ಲಿ ಭಾರತದ ಜನಸಾಮಾನ್ಯರಿಗೆ ತಲುಪಬೇಕಾದ ಕಲ್ಯಾಣ ಕಾರ್ಯಕ್ರಮಗಳ ಕಥೆಯೇನಾಗಿದೆ ಎಂಬುದನ್ನೂ ನೋಡೋಣ. ಶಾಲಾ ಶಿಕ್ಷಣಕ್ಕೆ ಮೋದಿ ಸರ್ಕಾರವು ಮೀಸಲಿಟ್ಟ ಹಣವನ್ನು 2014-15ಕ್ಕೆ ಹೋಲಿಸಿದರೆ 2016-17ರಲ್ಲಿ ಶೇ.32ರಷ್ಟನ್ನು ಕಡಿತಗೊಳಿಸಿತು. ಇನ್ನು ಆರೋಗ್ಯ ಕ್ಷೇತ್ರಕ್ಕೆ ನೀಡಿದ ಹಣವನ್ನು ಅವಲೋಕಿಸಿದರೆ, ಈ ಎರಡು ವರ್ಷಗಳಲ್ಲಿ ಒಂದೇ ಮೊತ್ತದ ಹಣ ಕೊಟ್ಟಂತೆ ಕಾಣುತ್ತದೆ. ವಾಸ್ತವದಲ್ಲಿ ಹಣದುಬ್ಬರವನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ, ಸರ್ಕಾರವು ಶೇ.13ರಷ್ಟನ್ನು ಕಡಿತಗೊಳಿಸಿದಂತೆ ಆಗುತ್ತದೆ. ದೇಶದ ದೊಡ್ಡ ಜನಸಂಖ್ಯೆಯ ಜನರು ಅಗಾಧವಾಗಿ ಹೆಚ್ಚುತ್ತಿರುವ ವೈದ್ಯಕೀಯ ವೆಚ್ಚವನ್ನು ಭರಿಸಲಾಗದಿರುವ ಸಂದರ್ಭದಲ್ಲಿ, ಪ್ರಪಂಚದಲ್ಲಿ ಇಂದಿಗೂ ಸಾಂಕ್ರಾಮಿಕ ರೋಗಗಳಿಂದ ಸಾಯುತ್ತಿರುವ ಗಣನೀಯ ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿಯೂ ಈ ಕಡಿತ ಆಗಿದೆ.

ಇನ್ನು ಮಹಿಳೆಯರಿಗೆ ಮೀಸಲಿಟ್ಟ ಹಣದ ವಿಚಾರ ಗಮನಿಸಿದರೆ, ಜೆಂಡರ್ ಬಜೆಟ್ (ವಿವಿಧ ಇಲಾಖೆಗಳು ಮಹಿಳೆಯರಿಗಾಗಿ ಎತ್ತಿಡುವ ಬಜೆಟ್ ಸಂಪನ್ಮೂಲದ ಪ್ರಮಾಣ) ಹಿಂದೆ ಇದ್ದುದಕ್ಕಿಂತ ಶೇ.7.6ರಷ್ಟು ಕಡಿಮೆಯಾಗಿದೆ. ಹಾಗೆಯೇ ದೇಶದ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರಿಗೆ ಮೀಸಲಿಡುವ ಹಣದ ಪ್ರಮಾಣದಲ್ಲಿ ಆಗಿರುವ ಬದಲಾವಣೆ ಇದೆಲ್ಲಕ್ಕಿಂತ ಹೆಚ್ಚು. 2014-15ಕ್ಕೆ ಹೋಲಿಸಿದರೆ, 2016-17ರಲ್ಲಿ ಈ ಹಣವನ್ನು (ಎಸ್‌ಸಿಎಸ್‌ಪಿ -ಟಿಎಸ್‌ಪಿ) ಶೇ.35ರಷ್ಟು ಕಡಿತಗೊಳಿಸಲಾಯಿತು.

ತಾನೇ ಈ ಹಿಂದೆ ವಿರೋಧಿಸುತ್ತಿದ್ದ ನರೇಗಾ ಯೋಜನೆಯನ್ನು ಬಜೆಟ್‌ನ ಹೊತ್ತಿಗೆ ಎನ್‌ಡಿಎ ಶ್ಲಾಘಿಸಲು ಆರಂಭಿಸಿತ್ತು, ಇದುವರೆಗೆ ನೀಡಲಾದ ಅತ್ಯಂತ ಹೆಚ್ಚು ವಾರ್ಷಿಕ ಅನುದಾನವನ್ನು ತಾವೇ ಈ ಸಾರಿ (38,500 ಕೋಟಿ ರೂ.ಗಳು) ನೀಡಿದ್ದೇವೆಂದು ಜೇಟ್ಲಿ ಹೇಳಿದರು. ಇದು ಹಸೀ ಸುಳ್ಳಾಗಿತ್ತು, ಏಕೆಂದರೆ, 2010ರಲ್ಲಿ 40,100 ಕೋಟಿ ರೂ.ಗಳನ್ನು ಘೋಷಿಸಲಾಗಿತ್ತು, ಇದೇ ಬಾಬ್ತಿಗೆ ಕಳೆದೆರಡು ವರ್ಷಗಳಲ್ಲಿ ನೀಡಿದ ಹಣದ ಗಣನೀಯ ಭಾಗವನ್ನು ಖರ್ಚು ಮಾಡಿಲ್ಲದ ಇತಿಹಾಸವನ್ನೂ ಈ ಸರ್ಕಾರ ಹೊಂದಿದೆ. ಅಂದಮೇಲೆ ಈ ವರ್ಷದ ಕಥೆ ಏನಾಗಬಹುದೆಂದು ಊಹಿಸುವುದು ಕಷ್ಟವೇನಲ್ಲ, ವರ್ಷಕ್ಕೆ 4.8% ಅಷ್ಟು ಹಣದುಬ್ಬರದ ಲೆಕ್ಕವನ್ನೂ ಹಿಡಿಯುವುದಾದಲ್ಲಿ 2010ರಿಂದ ಇಲ್ಲಿಯವರೆಗೆ ಪ್ರತೀ ವರ್ಷದ ಏರಿಕೆಯನ್ನು ಸೇರಿಸಿ ಸುಮಾರು 65,000 ಕೋಟಿ ರೂ.ಗಳನ್ನು ನೀಡಬೇಕಿತ್ತು, ಹಾಗೆಯೇ ರಸಗೊಬ್ಬರ ಸಬ್ಸಿಡಿಯನ್ನು 2015-16ರ ಪರಿಷ್ಕೃತ ಅಂದಾಜಾದ 73,437 ಕೋಟಿ ರೂ.ಗಳಿಗಿಂತ 2,000 ಕೋಟಿ ರೂ. ಕಡಿಮೆಗೆ (70,000 ಕೋಟಿ ರೂ) ಬಜೆಟ್‌ನಲ್ಲಿ ನಿಗದಿಪಡಿಸಿದರು.

ಮೋದಿಯವರು ಅಧಿಕಾರಕ್ಕೆ ಬರುವ ಮುಂಚೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಪ್ರಪಂಚದಲ್ಲಿ 78ನೇ ಸ್ಥಾನದಲ್ಲಿದ್ದ ಭಾರತವು, ಅವರ ಅಧಿಕಾರಾವಧಿಯ ಎರಡು ವರ್ಷದ ನಂತರ 105ನೇ ಸ್ಥಾನಕ್ಕೆ ಕುಸಿಯಿತು. ಈ ಲೆಕ್ಕಾಚಾರ ಹಾಕುವುದು ಬೇರಿನ್ನಾರೋ ಅಲ್ಲ, ಉದ್ದಿಮೆಪತಿಗಳ ಕೂಟವೇ ಆದ ವಿಶ್ವ ಆರ್ಥಿಕ ವೇದಿಕೆಯು 130 ದೇಶಗಳ ಪರಿಸ್ಥಿತಿ ಲೆಕ್ಕ ಹಾಕಿ ತೂಗಿದರೆ, ಭಾರತದ್ದು 105ನೇ ಸ್ಥಾನ. 2014ರವರೆಗೂ ಭಾರತವನ್ನು 78ನೇ ಸ್ಥಾನದಲ್ಲಿಟ್ಟಿದ್ದುದರಲ್ಲಿ ಈ ದೇಶವನ್ನಾಳಿದ ಎಲ್ಲಾ ರಾಜಕೀಯ ಪಕ್ಷಗಳು, ಅದರಲ್ಲೂ ಪ್ರಮುಖವಾಗಿ ಕಾಂಗ್ರೆಸ್ಸಿನ ಪಾತ್ರವಿದೆ. ಅದನ್ನು 105ನೇ ಸ್ಥಾನಕ್ಕೆ ಕುಸಿಯುವಂತೆ ಮಾಡಿದ್ದರಲ್ಲಿ ಮೋದಿಯವರ ಪಾತ್ರವೂ ಇದೆ. ಕೇವಲ ಎರಡು ವರ್ಷಗಳಲ್ಲಿ ಏನು ಕ್ರಮ ತೆಗೆದುಕೊಳ್ಳಲು ಸಾಧ್ಯವಿತ್ತು ಎಂದು ಮೋದಿಯವರ ಭಕ್ತರು ಕೇಳಬಹುದು.

ಹೌದು, ಮಾನವ ಅಭಿವೃದ್ಧಿ ಸೂಚ್ಯಂಕದಂತಹ ಸಂಗತಿಗಳಲ್ಲಿ ಎರಡೇ ವರ್ಷದಲ್ಲಿ ಅಂತಹ ದೊಡ್ಡ ಸಾಧನೆ ಸಾಧ್ಯವಿಲ್ಲ, ಆದರೆ, ಈ ಸರ್ಕಾರವು ಅದನ್ನು ಸರಿಮಾಡುವ ಕಡೆಗೆ ಸಾಗುತ್ತಿದೆಯೋ, ಇನ್ನೂ ಕೆಳಕ್ಕೆ ತೆಗೆದುಕೊಂಡು ಹೋಗುವ ಕೆಲಸ ಮಾಡುತ್ತಿದೆಯೋ ಎಂಬುದನ್ನು ತಿಳಿಯಲು ಮೇಲೆ ವಿವರಿಸಲಾಗಿರುವ ವಿವಿಧ ಕ್ಷೇತ್ರಗಳಿಗೆ ಮೀಸಲಿರಿಸಿರುವ ಬಜೆಟ್‌ಅನ್ನು ನೋಡಿದರೆ ಸಾಕು. ಎಲ್ಲೆಲ್ಲಿಯೂ ಜನರ ಪರವಾದ ಯಾವ ಕ್ರಮಕ್ಕೂ ಮುಂದಾಗದ ಮೋದಿ, ತನ್ನ ಆಪ್ತಮಿತ್ರರಾದ ಕೆಲವು ಕುಬೇರರ ಹಿತಾಸಕ್ತಿಗಾಗಿ ದೇಶದ ಬೊಕ್ಕಸದಿಂದಲೇ ಹಣವನ್ನು ಹರಿಸಿದ ಪ್ರಧಾನಿ ಇದ್ದಕ್ಕಿದ್ದಂತೆ ಕಪ್ಪುಹಣದ ವಿರುದ್ಧದ ಯೋಧ ಹೇಗಾಗಿ ಬಿಡಲು ಸಾಧ್ಯ?

ಮೋದಿ ಸರ್ಕಾರದ ವಿರುದ್ಧ ಕಳೆದೆರಡು ವರ್ಷಗಳ ಅವಧಿಯಲ್ಲಿ ನಡೆದ ಎರಡು ದೊಡ್ಡ ಹೋರಾಟಗಳನ್ನು ನೆನಪಿಸಿಕೊಳ್ಳಬೇಕು. ಅದರಲ್ಲಿ ಒಂದು, ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ, ಎರಡನೆಯದ್ದು ಕಾರ್ಮಿಕರ ಪಿಎಫ್‌ಗೆ ಕೈ ಹಾಕಿದ್ದು. ಬ್ರಿಟಿಷರ ಕಾಲದಿಂದಲೂ ಇದ್ದು ಜ ಸಾಕಷ್ಟು ತೊಂದರೆ ಕೊಡುತ್ತಿದ್ದ ಭೂಸ್ವಾಧೀನ ಕಾಯ್ದೆ ಹಿಂದಿನ ಯುಪಿಎ ಸರ್ಕಾರ ಬದಲಿಸಬೇಕಾಗಿ ಬಂ ದೇಶದ ಬೇರೆ ಬೇರೆ ಭಾಗಗಳಲ್ಲಿ ಜನರು ಭೂಮಿಯನ್ನು ಸರ್ಕಾರ ಸ್ವಾಧೀನ ಮಾಡಿಕೊಳ್ಳುವು ವಿರೋಧಿಸುತ್ತಾ ಬಹಳ ದೊಡ್ಡ ಪ್ರಮಾಣದ ಹೋ ನಡೆಸುತ್ತಲಿದ್ದರು. ಈ ಹಿನ್ನೆಲೆಯಲ್ಲಿ ಭೂಸ್ವಾ ಕಾಯ್ದೆಯನ್ನು ಗುಣಾತ್ಮಕವಾದ ರೀತಿಯಲ್ಲಿ ಬದ ಇದ್ದುದರಲ್ಲಿ ಜನಪರವಾದ ಕಾಯ್ದೆಯನ್ನಾಗಿಸಿದ್ದರು. ಇ ಒಂದೇ ಏಟಿಗೆ ಜನವಿರೋಧಿ ಕಾಯ್ದೆಯನ್ನಾಗಿ ತಿದ್ದುಪಡಿಗಳನ್ನು ಮೋದಿಯವರ ನೇತೃತ್ವದ ಎನ್ ಸರ್ಕಾರ ತರಲು ಬಯಸಿತು. ಅದನ್ನು ಸಂಸತ್ತಿನಲ್ಲಿ ತರು ಕಷ್ಟವಾಗಿದ್ದರಿಂದ, ಸುಗ್ರೀವಾಜ್ಞೆಯ ಮುಖಾಂತರ ತಂ

ದೇಶದೆಲ್ಲೆಡೆ ಇದಕ್ಕೆ ವಿರೋಧ ಭುಗಿಲೆದ್ದಿತು. ಆ ಬಿಜೆಪಿಯು ತನ್ನ ಪಡೆಯನ್ನು ಮುಂದೆ ಬಿ ಜನಾಭಿಪ್ರಾಯವನ್ನು ತನ್ನೆಡೆಗೆ ತಿರುಗಿಸುವ ವಿಫಲ ಯತ್ನ ನಡೆಸಿತು. ಕಡೆಗೆ ಈ ಸುಗ್ರೀವಾಜ್ಞೆಯನ್ನು ಮುಂದುವರ ಅಥವಾ ಅದನ್ನು ಕಾಯ್ದೆಯನ್ನಾಗಿಸುವ ತನ್ನ ಪ್ರಯ ತಿಲಾಂಜಲಿ ಹಾಕಿ ಸುಮ್ಮನಾಯಿತು. ಆ ಪ್ರಮಾ ವಿರೋಧ ದೇಶಾದ್ಯಂತ ಮೋದಿ ಸರ್ಕಾರವು ತನ್ನ ಆರ ದಿನಗಳಲ್ಲೇ ಎದುರಿಸಬೇಕಾಗಿ ಬಂದಿತ್ತು.


ಇದೇ ರೀತಿಯ ಮತ್ತೊಂದು ಹಿನ್ನಡೆಯ ಅನುಭವಿಸಿದ್ದು ಪಿಎಫ್‌ನ ವಿಚಾರದಲ್ಲಿ, ಕಾಮಿ ಪಿಎಫ್‌ಗೆ ಬಜೆಟ್‌ನಲ್ಲೇ ಜೇಟ್ಲಿ ಕೈಹಾಕಿದ್ದರು. ದುಡಿ ಜನರ ಪಿಎಫ್‌ಅನ್ನು ನಿವೃತ್ತಿಯ ನಂತರ ಒಮ್ ಹಿಂತೆಗೆದುಕೊಂಡರೆ ಅದರ ಶೇ.60ರಷ್ಟು ಭಾಗಕ್ಕೆ ಹಾಕಲಾಗುತ್ತದೆ ಎಂದು 2016ರ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಇದಕ್ಕೆ ವಿರೋಧ ಬಂದಾಗ ಏನೇ ತಿಪ್ಪೆ ಸಾರಿಸುವ ಸ್ಪಷ್ಟೀಕರಣಗಳನ್ನು ನೀಡಿ, ಅದನ್ ಹಿಂದೆ ಸರಿದಿದ್ದರು. ಆ ನಂತರ ಕೆಲವು ತಿಂಗಳು ಬಿಟ್ಟು ಇನ್ನೊಂದು ಆಟ ಹಾಕಿದರು. ಅದೇನೆ ಕಾರ್ಮಿಕರು ನಿವೃತ್ತಿಯ ವಯಸ್ಸಿನ ತನಕ ಮಧ್ಯೆ ಪಿ ಹಣವನ್ನು ತೆಗೆದುಕೊಳ್ಳುವಂತಿಲ್ಲ, ಒಂದು ವೇಳೆ ತೆಗೆದುಕೊಂಡಿದ್ದೇ ಆದಲ್ಲಿ ಅದರಲ್ಲಿ ತಮ್ಮ ಪಾಲಿನ ಮಾತ್ರ ಸಿಗುತ್ತದೆ ಎಂಬ ನಿಯಮವನ್ನು ತರಲು ಹೊರ

ಈ ನಿಯಮದ ಸುದ್ದಿ ಗಾರ್ಮೆಂಟ್ಸ್ ಕಾರ್ಮಿಕ ತಲುಪುತ್ತಿದ್ದಂತೆಯೇ ಕಾರ್ಖಾನೆಗಳ ಬಳಿಯ ಹೆದ್ದಾರಿ ಜನಪ್ರವಾಹ ಹರಿದಿತ್ತು, ಸರ್ಕಾರವು ಅದೇ ದಿನ 3 ತಿಂಗಳ ಕಾಲ ಇದನ್ನು ಅಮಾನತ್ತಿನಲ್ಲಿಡುತ್ತೇನ ಪ್ರಕಟಿಸಿತು. ಮಾರನೆಯ ದಿನ ಇನ್ನೂ ಹೆಚ್ಚಿನ ಸಂಖ್ಯೆ ಕಾರ್ಮಿಕರು ಬೀದಿಗೆ ಇಳಿದರು. ಅನಿವಾರ್ಯವಾಗಿ ನಿಯಮವನ್ನೇ ಹಿಂಪಡೆಯುವುದಾಗಿ ಸರ್ಕಾರ ಘೋಷಿ

ಇವೆಲ್ಲವನ್ನೂ ನೋಟು ರದ್ದತಿಯ ಈ ಸಂದರ್ಭ ಏಕೆ ನೆನಪಿಸಿಕೊಳ್ಳಬೇಕಿದೆ? ಈ ಪಿಎಫ್‌ನ ಹಣ ಲಕ್ಷ ಕೋಟಿ ರೂ.ಗಳಾಗುತ್ತವೆ ಮತ್ತು ಅವು ಅಲ್ಲಿಯೇ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪೆನಿಗಳಿಗೆ ಸಾಲ ನೀಡಲು ಸಾಧ್ಯವಾಗುತ್ತದೆ ಎಂಬ ಹುನ್ನಾರ ಸರ್ಕಾರದ್ದು ಕಳೆದೆರಡು ವರ್ಷಗಳಿಂದ ಮೇಲೆ ಹೇಳಲಾದ ಉದಾಹರಣೆಗಳಲ್ಲೂ ದೇಶದ ಭೂ ಸಂಪತ್ತನ್ನು ತಿಜೋರಿಯನ್ನು ಕಾರ್ಪೊರೇಟ್ ಕಂಪೆನಿಗಳಿಗೆ ಧಾರೆ ಯುತ್ತಾ ಬಂದಿದೆ ಮೋದಿ ಸರ್ಕಾರ. ಅದೇ ಸಂದರ್ಭ ಹಿಂದಿಗಿಂತ ಜನಸಾಮಾನ್ಯರ ಪಾಲನ್ನು ಕಡಿಮೆ ಮಾಡ ಬಂದಿದೆ. ಈ ಹಿನ್ನೆಲೆಯನ್ನು ಮರೆಯಲಾಗದು. ಅಂತಹ ಕಾರಣದಿಂದಲೇ ನೋಟು ರದ್ದತಿಯ ತೀರ್ಮಾ ಹೊರಟಿದೆ ಅಷ್ಟೇ. ಜನಸಾಮಾನ್ಯರ ಬವಣೆಗೆ ಇಲ್ಲಿ ಕಾಸಿನ ಕಿಮ್ಮತ್ತಿಲ್ಲ, ಮೊಸಳೆ ಕಣ್ಣೀರು, ಆಕ್ರೋಶ ಭಾಷಣ ಹಾಗೂ ದೇಶಪ್ರೇಮದ ಉಪದೇಶ ಜನರಿಗೆ.

ಈ ಹಿನ್ನೆಲೆಯಲ್ಲಿಯೇ ನೋಟು ರದ್ದತಿಯ ಕ್ರಮ ನೋಡಬೇಕು. ಮೋದಿ ಸರ್ಕಾರಕ್ಕೆ ನಿರ್ದಿಷ್ಟವಾದ ಅಜೆ ಇದೆ. ಆ ಅಜೆಂಡಾವನ್ನು ಅವರು ಎರಡು ವರ್ಷ ನಿಷ್ಕರುಣೆಯಿಂದ ಜಾರಿ ಮಾಡುತ್ತಿದ್ದಾರೆ. ಅದರ ಸೂಚನೆ ಗಳನ್ನು ಅವರ ಬಜೆಟ್ ಭಾಷಣದಿಂ ಹೆಕ್ಕಿಕೊಳ್ಳಬಹುದು. ಬೇರಿನ್ನಾವ ಅಂಕಿ-ಅಂಶಗಳ ಹೋಗುವ ಅಗತ್ಯವಿಲ್ಲ. ಫೆಬ್ರವರಿ 1ಕ್ಕೆ ಇನ್ನೊಂದು ಬ ಮಂಡಿಸುವ ಎಲ್ಲಾ ತಯಾರಿ ನಡೆದಿದೆ. ಬಜೆಟ್ಟುಗಳಾಗಲೀ, ನೋಟು ರದ್ದತಿಯಂತಹ ಕ್ರಮಗ ಮೋದಿ ಸರ್ಕಾರದ ಕಾರ್ಪೊರೇಟ್ ಪರ ನೀತಿಯ ಸರ ಬೇರೆ ಬೇರೆ ಕೊಂಡಿಗಳಷ್ಟೇ ಆಗಿರುತ್ತವೆ ಎಂಬುದ ಅನುಮಾನವಿಲ್ಲ, ಇದನ್ನೂ ಮನಸ್ಸಿನಲ್ಲಿಟ್ಟುಕೊಂಡೇ ನೋ ರದ್ದತಿಯ ಉಳಿದ ಆಯಾಮಗಳನ್ನು ಮುಂದಿನ ಸಂಚಿಕೆ ವಿಶ್ಲೇಷಿಸೋಣ.

ಚರಕ ಮತ್ತು ಚಹಾ...!



ಚರಕದ ಮೇಲೆ ಚಹಾ ಬಿತ್ತಲ್ಲೋ
ಕಲೆಯಾಯ್ತೋ ನೆತ್ತರ ಕಲೆಯಾಯ್ತೋ
ಬಲಿಯಾಯ್ತೋ ಖಾದಿ ಬಲಿಯಾಯ್ತೋ

ಗಾಂಧಿ ಸುತ್ತಿದ ನೂಲಿನ ಚರಕ
ಸತ್ಯ ಅಹಿಂಸೆಯ ಬಾಳಿನ ಚರಕ
ಸತ್ತ ಮನಸಿನ ಚಹಾ ಬಿತ್ತಲ್ಲೋ /ಕಲೆಯಾಯ್ತೋ/

ಸರಳ ಜೀವದ ಸುಂದರ ಚರಕ
ಮರಳ ರಾಶಿಲಿ ಉಪ್ಪಿನ ಚರಕ
ದುರುಳ ರಾಜನ ಚಹಾ ಬಿತ್ತಲ್ಲೋ /ಕಲೆಯಾಯ್ತೋ/

ರಾಷ್ಟ್ರಪಿತನ ಪ್ರೀತಿಯ ಚರಕ
ಮಾನವಂತರ ಮಾನದ ಚರಕ
ಮನುಮನೆಯ ಕಹಿ ಚಹಾ ಬಿತ್ತಲ್ಲೋ/ಕಲೆಯಾಯ್ತೋ /

ಸ್ವಚ್ಛ ಕೈಗಳು ಮುಟ್ಟಿದ ಚರಕ
ಕಿಚ್ಚು ಕಾಣದ ಮೆಚ್ಚಿನ ಚರಕ
ಹುಚ್ಚ ಮಾರಿದ ಚಹಾ ಬಿತ್ತಲ್ಲೋ/ಕಲೆಯಾಯ್ತೋ /

ಬಡವನೆದೆಯಲಿ ತಿರುಗುವ ಚರಕ
ಬಡಿವ ಸೋವಿಗೆ ಮಿಡಿಯುವ ಚರಕ
ಸಿಡಿವ ಸಿಹಿಸುಳ್ಳಿನ ಚಹಾ ಬಿತ್ತಲ್ಲೋ/ಕಲೆಯಾಯ್ತೋ/

■ ವರದ

ರೋಹಿತ್ ನೆನಪಿನ ನಡುವೆ ಕನ್ಹಯ್ಯ ಮತ್ತು ಜಿಗ್ನೇಶ್ ಮೂಡಿಸಿರುವ ಭರವಸೆ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯದಲ್ಲಿ ...ರೇಟ್ ಪದವಿಗಾಗಿ ಓದುತ್ತಿದ್ದ ಪ್ರತಿಭಾವಂತ ದಲಿತ ...ರ್ಥಿ ರೋಹಿತ್ ವೇಮುಲ ಸಾಂಸ್ಥಿಕ ಕೊಲೆಗೆ ...ಯಾಗಿ ನಿನ್ನೆಗೆ ಒಂದು ವರ್ಷವೇ ಕಳೆದುಹೋಯಿತು. ...ಒಂದು ವರ್ಷದಲ್ಲಿ ಏನೇನಾಯಿತು ಎಂದು ನೋಡಿದರೆ ... ದೇಶ ಎಂತಹ ದುರಂತದತ್ತ ಸಾಗುತ್ತಿದೆ ಎಂಬುದೂ ...ದ್ರ ಸರ್ಕಾರದ ದುಷ್ಟತನದ ವಿರುದ್ಧ ಗಟ್ಟಿಯಾಗಿ ...ರುವ ಯುವ ನಾಯಕರ ದಿಟ್ಟತನವೂ ಅರ್ಥವಾಗುತ್ತದೆ.

ನಮ್ಮ ಸರ್ಕಾರಗಳು ಅದೆಷ್ಟು ಭಂಡಗೆಟ್ಟುಹೋಗಿವೆ ...ರೆ ಇತ್ತ ದೇಶದಾದ್ಯಂತ ವಿದ್ಯಾರ್ಥಿಗಳು ಜನವರಿ ...ಂದು ರೋಹಿತ್ ವೇಮುಲ ನೆನಪಿನಾರ್ಥ ಎಲ್ಲೆಡೆ ...ರ್ಯಕ್ರಮಗಳನ್ನು ರೂಪಿಸುತ್ತಿರುವಾಗ ಆಂಧ್ರ ಪ್ರದೇಶದ ...ರ ಜನವರಿ 13 ರಂದು ರೋಹಿತ್‌ನನ್ನು ಕುರಿತು ...ದ್ರ ಸರ್ಕಾರಕ್ಕೆ ಒಂದು ವರದಿಯನ್ನು ತಯಾರು ...ತು. ಆ ವರದಿಯು ರೋಹಿತ್‌ನನ್ನು ಸಾವಿಗೆ ದೂಡಿದ ...ಗಳೇನು? ಆತನಿಗೆ ವಿಶ್ವವಿದ್ಯಾಲಯ ಕೊಟ್ಟಿದ್ದ ...ಳಗಳೇನು? ಆರೆಸ್ಸೆಸ್‌ನ ವಿದ್ಯಾರ್ಥಿ ಸಂಘಟನೆಯಾದ ...ಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಗೂಂಡಾಗಳು ...ಹಿತ್ ವಿರುದ್ಧ ಹೇರಿದ್ದ ದೂರುಗಳ ಸತ್ಯಾಸತ್ಯತೆ ...?... ಇಂತಹ ಮುಖ್ಯವಾದ ವಿಷಯಗಳನ್ನು ...ಸಿರಲಿಲ್ಲ. ಬದಲಾಗಿ, ರೋಹಿತ್ ವೇಮುಲ




...ನಾಗಿರದೇ ಆತ ಇತರೆ ಹಿಂದುಳಿದ ವರ್ಗದ ಜಾತಿಗೆ ...ದವನಾಗಿದ್ದ ಎಂದು ಮತ್ತೊಮ್ಮೆ ಹೇಳುವ ...ಯಾಗಿತ್ತು. ಅಂದರೆ ತನ್ನ ನೀಚತನದಿಂದಾಗಿ ಆತನನ್ನು ... ತೆಗೆದುಕೊಂಡಿದ್ದಲ್ಲದೆ ಈಗಲೂ ಆತ ದಲಿತನಲ್ಲ ...ು ಸಾಬೀತುಪಡಿಸುವುದೇ ಆಂಧ್ರ ಮತ್ತು ಕೇಂದ್ರ ...ರಗಳಿಗೆ ಪ್ರಮುಖ ವಿಷಯವಾಗಿದೆ. ಯಾಕೆಂದರೆ ...ದಲಿತ ಎಂದು ಒಪ್ಪಿಕೊಂಡರೆ ಚೆಡ್ಡಿಗಳ ಹಿಂದೂತ್ವ ...ತ ಅದೆಷ್ಟು ದಲಿತ ವಿರೋಧಿಯಾಗಿದೆ ಎಂಬುದನ್ನು ...ಕೊಂಡಂತಾಗುತ್ತದೆ.

...ವಾಸ್ತವ ಏನೆಂದರೆ ರೋಹಿತ್‌ನ ತಂದೆ ಅದ್ಯಾವ ...ಗೆ ಸೇರಿದವನಾಗಿದ್ದರೂ ಆತ ತನ್ನ ಜವಾಬ್ದಾರಿಯನ್ನು ...ಹಿಸದೆ ಇದ್ದದ್ದು ಮಾತ್ರವಲ್ಲ, ತನ್ನ ಮಡದಿ ದಲಿತ ...ಗೆ ಸೇರಿದವಳು ಎಂಬ ಕಾರಣಕ್ಕೆ ಆಕೆಯನ್ನು ತೊರೆದಿದ್ದ ...ಎಂದು ಈಗ ಎಲ್ಲರಿಗೂ ಗೊತ್ತಿರುವ ಸತ್ಯ. ಆನಂತರ ...ತಾಯಿಯ ಪಾಲನೆಯಲ್ಲಿ ಬೆಳೆದ ರೋಹಿತ್ ತನ್ನನ್ನು ... ಎಂದೇ ಗುರುತಿಸಿಕೊಂಡಿದ್ದ. ಅಷ್ಟೇ ಅಲ್ಲ, ದೇಶದ ...ೇಚ್ಚ ನ್ಯಾಯಾಲಯವೂ ವಿಚ್ಛೇದಿತ ದಲಿತ ತಾಯಿಯ ...ತೆ ಬೆಳೆದ ಮಕ್ಕಳನ್ನು ದಲಿತರು ಎಂದೇ ...ತಿಸಬೇಕೆಂದು ತೀರ್ಪನ್ನೂ ನೀಡಿದೆ. ಇದೆಲ್ಲಕ್ಕಿಂತ ...ವಾಗಿ ರೋಹಿತ್ ಬರೆದ ಕಟ್ಟಕಡೆಯ 'ಆತ್ಮಹತ್ಯಾ ...ಲ್ಲಿ' ಹೀಗೆ ದಾಖಲಿಸಿದ್ದ: "ಕೆಲವರಿಗೆ ಬದುಕೇ ...ು ಶಾಪ. ನನಗೆ, ನನ್ನ ಹುಟ್ಟೇ ಮಾರಣಾಂತಿಕ ...ಘಾತ". ಜೊತೆಗೆ ಅದಕ್ಕೂ ಒಂದು ವರ್ಷ ಮುಂಚೆ ...ವಿವಿಯ ಉಪಕುಲಪತಿಗೆ ಬರೆದ ಪತ್ರದಲ್ಲಿ 'ದಲಿತ ...ರ್ಥಿಗಳಿಗೆ ವಿಷ, ನೇಣುಹಗ್ಗ ವಿತರಿಸಿ', ಆಗ ತನ್ನಂತಹ ...ರ್ಥಿಗಳಿಗೆ 'ದಯಾಮರಣ'ದ ಸೌಲಭ್ಯವನ್ನು ...ಸಿದಂತಾಗುತ್ತದೆ ಎಂದು ವ್ಯಂಗ್ಯಭರಿತ ಪದಗಳನ್ನು ...ಯೋಗಿಸಿದ್ದ. ಇದೆಲ್ಲದರಿಂದ ರೋಹಿತ್ ...ನಾಗಿದ್ದನೇ ಹೊರತು ಬೇರೆ ಜಾತಿಯಲ್ಲ ಎಂಬುದು ...ದ್ದರೂ ಯಾಕೆ ಆಂಧ್ರ ಮತ್ತು ಕೇಂದ್ರ ಸರ್ಕಾರ ಹಠ ...ದೆ ಗೊತ್ತಾ? ಯಾಕೆಂದರೆ ಆತ ದಲಿತ ಎಂದು ...ಕೊಂಡರೆ ಆತನನ್ನು ಸಾವಿಗೆ ದೂಡಿದ ಅಪ್ಪಾರಾವ್ ... ದಲಿತ ದ್ರೋಹಿ ಉಪಕುಲಪತಿಯ ವಿರುದ್ಧ ...ಂದಣಿ ಕೇಸು ಗಟ್ಟಿಯಾಗಿ ಆತ ಜೈಲು ಪಾಲಾಗುತ್ತಾನೆ. ...ಳಿಗೆ ಹತ್ತಿರವಾಗಿರುವ ಅಪ್ಪಾರಾವ್‌ನನ್ನು ಮೋದಿ ...ವಾಗಲೀ, ಮೋದಿಗೆ ಬೆಂಬಲವಾಗಿ ನಿಂತಿರುವ ...ಡು ನಾಯ್ಡು ಸರ್ಕಾರವಾಗಲಿ ಕೈಬಿಡುವುದುಂಟೆ.

ನಿನ್ನೆ ತನ್ನ ಮಗನ ಸಾವಿಗಾಗಿ ವಿಶ್ವವಿದ್ಯಾಲಯಕ್ಕೆ ಬಂದಿದ್ದ ರೋಹಿತನ ತಾಯಿ ರಾಧಿಕಾ, ಆತನ ಸಹೋದರ ರಾಜಾ ವೇಮುಲ, ಸ್ನೇಹಿತ ರಿಯಾಜ್ ಮತ್ತು ವಿವಿಯ ಇತರೆ ವಿದ್ಯಾರ್ಥಿಗಳನ್ನು ಪೊಲೀಸರು ವಿನಾಕಾರಣ ಬಂಧಿಸಿದರು. ವಿವಿಯಲ್ಲಿನ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ವರದಿ ಮಾಡಲು ಬಂದಿದ್ದ ವರದಿಗಾರರನ್ನೂ ಪೊಲೀಸ್ ಠಾಣೆಗೆ ಒಯ್ದಿದ್ದರು. ಹಾಗೆಯೇ ದೆಹಲಿಯಲ್ಲಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಜೆಎನ್‌ಯು, ಜಾಮಿಯಾ ಮಿಲಿಯಾ ಮತ್ತು ಇತರೆ ಸಂಸ್ಥೆಗಳ 3,000 ವಿದ್ಯಾರ್ಥಿಗಳನ್ನು ತಡೆದು ಅವರೆಲ್ಲರ ಮೇಲೆ ಕೇಸು ಜಡಿದಿದ್ದಾರೆ ದೆಹಲಿ ಪೊಲೀಸರು. ಒಂದು ವರ್ಷದ ಹಿಂದೆ ರೋಹಿತ್ ಬದುಕನ್ನೇ ನಾಶ ಮಾಡಿದ ದುರುಳರು ಈಗ ಆತನ ನೆನಪನ್ನೂ ನಿರ್ನಾಮ ಮಾಡಲು ಯತ್ನಿಸುತ್ತಿದ್ದಾರೆ. ಆದರೇನಂತೆ ಇವತ್ತಿಗೂ ದೇಶದ ದಲಿತ, ಹಿಂದುಳಿದ, ಶೂದ್ರ ವರ್ಗಗಳ ಯುವಕರು ರೋಹಿತನ ಹೋರಾಟವನ್ನಾಗಲಿ, ಆತನ ನೆನಪನ್ನಾಗಲಿ ಬಿಟ್ಟುಕೊಡುತ್ತಿಲ್ಲ. ಅದಕ್ಕೆ ಉದಾಹರಣೆಗಳು ಕನ್ಹಯ್ಯ ಕುಮಾರ್ ಮತ್ತು ಜಿಗ್ನೇಶ್ ಮೆವಾನಿ.

ಜೆಎನ್‌ಯು ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷ ಕನ್ಹಯ್ಯ ಕುಮಾರ್ ರೋಹಿತ್‌ನಂತೆ ದಲಿತನಲ್ಲ, ಆದರೆ ಆತ ಕೂಡ ರೋಹಿತ್‌ನಂತೆ ಬಡತನದಲ್ಲಿ ಬೆಳೆದವನು,



ರೋಹಿತ್‌ನಂತೆ ಶೋಷಣೆಗೆ ತುತ್ತಾದವನು, ರೋಹಿತ್‌ನಂತೆ ತನ್ನ ಪ್ರತಿಭೆಯಿಂದಲೇ ಜೆಎನ್‌ಯು ತರಹದ ಪ್ರತಿಷ್ಠಿತ ವಿಶ್ವವಿದ್ಯಾಲಯವನ್ನು ಪ್ರವೇಶಿಸಿದವನು. ರೋಹಿತ್‌ಗೆ ಬರೆಯುವ ಕಲೆ ಕರಗತವಾಗಿದ್ದರೆ ಕನ್ಹಯ್ಯನಿಗೆ ಭಾಷಣದ ಕಲೆ ಕರಗತವಾಗಿದೆ. ರೋಹಿತ್ ಬರೆದಿಟ್ಟ ಡೆತ್‌ನೋಟ್ ಹೇಗೆ ಇಡೀ ದೇಶವನ್ನೇ ಬಡಿದೆಬ್ಬಿಸಿತೋ ಹಾಗೆಯೇ ಕನ್ಹಯ್ಯ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆ ಪಡೆದು ಕಳೆದ ಮಾರ್ಚ್ 3ರಂದು ಮಾಡಿದ ಭಾಷಣ ದೇಶದಾದ್ಯಂತ ಸಂಚಲನವನ್ನು ಮೂಡಿಸಿತು. ರೋಹಿತ್‌ನ ಸಾವಿನಿಂದಾಗಿ ಎಲ್ಲೆಡೆ ಕಾರ್ಮೋಡಗಳು ಮೂಡಿದ್ದಾಗ ಕನ್ಹಯ್ಯನ ಆಗಮನ ಎಲ್ಲರಲ್ಲಿ ಹೊಸ ಭರವಸೆಯನ್ನು ಮೂಡಿಸಿದ್ದು ಸುಳ್ಳಲ್ಲ.

ಎಲ್ಲೋ ಎಲೆಮರೆಕಾಯಿಯಂತಿದ್ದ ಬಿಹಾರದ ಈ ಯುವಕ ಭಾರತೀಯರ ಗಮನಕ್ಕೆ ಬರುವಂತೆ ಮಾಡಿದ್ದು ಮೋದಿ ಸರ್ಕಾರವೇ ಎಂಬುದನ್ನು ಮರೆಯುವಂತಿಲ್ಲ. ರೋಹಿತ್ ವೇಮುಲನ ಸಾಂಸ್ಥಿಕ ಕೊಲೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧ ಎದ್ದಾಗ ಎಲ್ಲರ ಗಮನವನ್ನು ಬೇರೆಡೆ ಸೆಳೆಯಲು ಮೋದಿ ಸರ್ಕಾರ ಎಡಪಂಥೀಯರ ಕೋಟೆಯಂತಿರುವ ಜೆಎನ್‌ಯು ಮೇಲೆ ದಾಳಿ ಮಾಡಿತು. ಆ ವಿವಿಯ ವಿದ್ಯಾರ್ಥಿಗಳು ದೇಶದ್ರೋಹಿಗಳು, ಅವರು ದೇಶದ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ. ಅದಕ್ಕೆ ವೀಡಿಯೋ ಸಾಕ್ಷಿಗಳಿವೆ ಎಂದು ಬೊಬ್ಬಿರಿದ ಚೆಡ್ಡಿಗಳು ಕನ್ಹಯ್ಯ, ಉಮರ್ ಖಾಲಿದ್ ಮತ್ತು ಅನಿರ್ಬನ್ ಭಟ್ಟಾಚಾರ್ಯ ಎಂಬ ವಿದ್ಯಾರ್ಥಿಗಳನ್ನು ಬಂಧಿಸಿದರು. ಅಷ್ಟೇ ಅಲ್ಲ, ಕನ್ಹಯ್ಯನನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ ದೇಶಪ್ರೇಮದ ಹೆಸರಲ್ಲಿ ಚೆಡ್ಡಿ ವಕೀಲರು ಆತನ ಮೇಲೆ ದಾಳಿಯನ್ನೂ ಮಾಡಿದ್ದರು. ಆದರೆ ಕೆಲವೇ ದಿನಗಳಲ್ಲಿ ಕನ್ಹಯ್ಯನ ವಿರುದ್ಧ 'ಸಾಕ್ಷಿ' ಆಗಿದ್ದ ವೀಡಿಯೋ ನಕಲಿ ಎಂಬುದು ಗೊತ್ತಾಯಿತಲ್ಲದೆ ಕನ್ಹಯ್ಯ ಮತ್ತು ಆತನ ಮಿತ್ರರು ಮೋದಿ ವಿರೋಧಿಗಳೇ ಹೊರತು ದೇಶದ್ರೋಹಿಗಳಲ್ಲ ಎಂಬುದೂ ಸಾಬೀತಾಯಿತು.

ಇದೆಲ್ಲ ಆದ ಕೆಲತಿಂಗಳುಗಳ ನಂತರ ಸಂಭವಿಸಿದ್ದು ಉನಾ ಪ್ರಕರಣ. ಸತ್ತ ದನದ ಚರ್ಮ ಸುಲಿದಿದ್ದಕ್ಕೆ ಚೆಡ್ಡಿಗಳು ದಲಿತ ಯುವಕರನ್ನು ಥಳಿಸುತ್ತಿದ್ದ ವೀಡಿಯೋ ದೇಶವನ್ನೇ ನಡುಗಿಸಿತು. ಆಗ ಮುನ್ನೆಲೆಗೆ ಬಂದದ್ದು ಜಿಗ್ನೇಶ್ ಮೆವಾನಿ ಎಂಬ ಮತ್ತೊಬ್ಬ ದಿಟ್ಟ ಯುವ ನಾಯಕ. ರೋಹಿತ್‌ನಂತೆ ದಲಿತ ಕುಟುಂಬದಲ್ಲಿ, ಕನ್ಹಯ್ಯನಂತೆ ಬಡ ಕುಟುಂಬದಲ್ಲಿ ಜನಿಸಿದ ಜಿಗ್ನೇಶ್ ಕಷ್ಟಪಟ್ಟು ಓದಿ ವಕೀಲನಾದ, ಪತ್ರಕರ್ತನಾದ. ಅದು ಸಾಲದ್ದು ಎನಿಸಿದಾಗ ಭೂಮಿರಹಿತರ ಪರ ಹೋರಾಟಗಳಿಗೆ ಧುಮುಕಿದ. ಆತ ಉನಾ ಪ್ರಕರಣದ ವಿರುದ್ಧ ಗುಜರಾತಿನಲ್ಲಿ ನಡೆಸಿದ ಹೋರಾಟ ಅದ್ಭುತವಾಗಿತ್ತು, ನೂತನವಾಗಿತ್ತು, ಹಿಂದೆಂದೂ ಈ ನಾಡು ಕಂಡರಿಯದಂತಿತ್ತು. ಅದು ದೇಶದಾದ್ಯಂತ ದಲಿತರಲ್ಲಿ ಹೋರಾಡುವ ಕೆಚ್ಚನ್ನು ಹತ್ತಿಸಿತು.

ಕಳೆದ ಒಂದು ವರ್ಷದಲ್ಲಿ ಕನ್ಹಯ್ಯ ದೇಶದ ವಿವಿಧ ಭಾಗಗಳಿಗೆ ಭೇಟಿ ನೀಡಿದ್ದಾನೆ, ಭಾಷಣ ಮಾಡಿದ್ದಾನೆ, ಯುವ ಜನಾಂಗದಲ್ಲಿ ಸ್ಫೂರ್ತಿ ಮೂಡಿಸಿದ್ದಾನೆ, ತನ್ನ ಬದುಕನ್ನು ಕುರಿತು 'ಬಿಹಾರದಿಂದ ತಿಹಾರ್ ತನಕ' ಎಂಬ ಪುಸ್ತಕವನ್ನೂ ಬರೆದಿದ್ದಾನೆ. ಹಾಗೆಯೇ ಜಿಗ್ನೇಶ್ ಕೂಡ ಕಾಲಿಗೆ ಚಕ್ರ ಕಟ್ಟಿಕೊಂಡಿರುವವನಂತೆ ದೇಶ ಸುತ್ತುತ್ತಿದ್ದಾನೆ, ದಲಿತರಲ್ಲಿ ಭರವಸೆ ಮೂಡಿಸುತ್ತಿದ್ದಾನೆ. ಇವರಿಬ್ಬರೂ ಪ್ರಜ್ಞಾವಂತ ಭಾರತೀಯರಲ್ಲಿ ಭರವಸೆ ಮೂಡಿಸುವ ವ್ಯಕ್ತಿಗಳಾಗಿ ಹೊರಹೊಮ್ಮಿದ್ದಾರೆ.

ಅದೆಲ್ಲ ಒಂದೆಡೆ ಆಯಿತು. ಆದರೆ ಅದೇ ಹೊತ್ತಿನಲ್ಲಿ ದೇಶದಾದ್ಯಂತ ಮೋದಿಯ ದುಷ್ಟ ಸರ್ಕಾರದ ಕೃಪೆಯಿಂದಾಗಿ ಇವತ್ತಿಗೂ ದುಷ್ಟರ ತಾಂಡವ ನೃತ್ಯ ಎಲ್ಲೆಡೆ ಮುಂದುವರೆಯುತ್ತಿದೆ. ಯಾವ ರೋಹಿತ್‌ನನ್ನು ಅಪ್ಪಾರಾವ್ ಎಂಬಾತ ಬಲಿ ತೆಗೆದುಕೊಂಡನೋ ಅದೇ ಅಪ್ಪಾರಾವ್‌ಗೆ ಇತ್ತೀಚೆಗೆ ಕೇಂದ್ರ ಸರ್ಕಾರ 'ಮಿಲೇನಿಯಂ ಅವಾರ್ಡ್' ಒಂದನ್ನು ದಯಪಾಲಿಸಿದೆ. ಜೈವಿಕ ತಂತ್ರಜ್ಞಾನದ ಕ್ಷೇತ್ರದಲ್ಲಿ ಆತನ ಸಾಧನೆ ಮತ್ತು ಉನ್ನತ ಶಿಕ್ಷಣವಲಯದಲ್ಲಿ ಆತನ ಕೊಡುಗೆಯನ್ನು ಪರಿಗಣಿಸಿ ಈ ಅವಾರ್ಡ್ ಆತನಿಗೆ ಕೊಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ವಾಸ್ತವವಾಗಿ ಈ ಅಪ್ಪಾರಾವ್ ಈ ಹಿಂದೆ ಬೇರೆಯವರ ಸಂಶೋಧನೆಗಳನ್ನು ಕದ್ದು ಅವು ತನ್ನ ಸಂಶೋಧನೆಗಳು ಎಂದು ಪ್ರಕಟಿಸಿ ಸಿಕ್ಕಿಬಿದ್ದಿದ್ದ. ಮಾತ್ರವಲ್ಲ ಆತ ಇವತ್ತಿಗೂ ಹೈದರಾಬಾದ್ ಕೇಂದ್ರ ವಿವಿಯಲ್ಲಿ ದಲಿತ ವಿದ್ಯಾರ್ಥಿಗಳ ವಿರುದ್ಧ ಕತ್ತಿ ಮಸೆಯುವುದನ್ನು ನಿಲ್ಲಿಸಿಲ್ಲ. ಅಂತಹ ಅಪ್ಪಾರಾವ್‌ಗೆ 'ಮಿಲೇನಿಯಂ ಅವಾರ್ಡ್'ನ್ನು ತನ್ನ ಕೈಯಾರೆ ದಯಪಾಲಿಸಿದ್ದು ಸ್ವತಃ ಮೋದಿ. ಈ ಹಿಂದೆ ರೋಹಿತ್ ಸಾವಿನ ಬಗ್ಗೆ 'ಭಾರತ ಮಾತೆ ಒಬ್ಬ ಮಗನನ್ನು ಕಳೆದುಕೊಂಡಿದ್ದಾಳೆ' ಎನ್ನುತ್ತಾ ಮೊಸಳೆ ಕಣ್ಣೀರು ಹರಿಸಿದ್ದ ಮೋದಿಯಲ್ಲಿ ತಾನು ಅಪ್ಪಾರಾವ್‌ಗೆ ಪ್ರಶಸ್ತಿ ನೀಡಬಾರದು ಎಂಬ ಮಾನವೀಯತೆಯಾಗಲಿ, ಸೂಕ್ಷ್ಮತೆಯಾಗಲಿ ಇಲ್ಲದಿರುವುದು ಇದರಿಂದಲೇ ಸಾಬೀತಾಗುತ್ತದೆ.

ಹಾಗೆಯೇ ಯಾವ ಜಗದೀಶ್ ಕುಮಾರ್ ಎಂಬ ಉಪಕುಲಪತಿ ಕನ್ಹಯ್ಯ ಮತ್ತು ಇತರೆ ಜೆಎನ್‌ಯು ವಿದ್ಯಾರ್ಥಿಗಳನ್ನು ಮಟ್ಟಹಾಕಲು ಯತ್ನಿಸಿದ್ದನೋ ಆತನೇ ಇವತ್ತಿಗೂ ತನ್ನ ಹುದ್ದೆಯಲ್ಲಿ ಮುಂದುವರೆದಿದ್ದಾನೆ. ಮಾತ್ರವಲ್ಲ ಇತ್ತೀಚೆಗೆ ತನ್ನ ನೀತಿಗಳನ್ನು ವಿರೋಧಿಸುವ, ಸ್ವತಂತ್ರವಾಗಿ ಚಿಂತಿಸುವ, ಶೋಷಣೆಯ ವಿರುದ್ಧ ದನಿ ಎತ್ತುವ ಪ್ರತಿಭಾವಂತ ವಿದ್ಯಾರ್ಥಿಗಳು ಜೆಎನ್‌ಯುಗೆ ಪ್ರವೇಶ ಪಡೆಯದಂತೆ ಹೊಸ ನಿಯಮಗಳನ್ನು ಜಾರಿಗೆ ತಂದಿದ್ದಾನೆ.


ಇದೆಲ್ಲದರ ಜೊತೆಗೆ ಇನ್ನೊಂದು ಬೆಳವಣಿಗೆಯೂ ಮುಂದುವರೆದಿದೆ. ಅತ್ತ ಜಿಗ್ನೇಶ್ ದಲಿತರಲ್ಲಿ, ಹಿಂದುಳಿದ ವರ್ಗಗಳಲ್ಲಿ ಭರವಸೆ ಮೂಡಿಸುತ್ತಿದ್ದರೆ ಇತ್ತ ಮೋದಿ ಸರ್ಕಾರ ಅದೇ ದಲಿತರ, ಹಿಂದುಳಿದವರ, ಮಹಿಳೆಯರ ವಿರುದ್ಧದ ನಿಲುವುಗಳನ್ನು ತಳೆಯುತ್ತಾ ಸಾಗಿದೆ. ಈ ಸಂಚಿಕೆಯಲ್ಲಿ ವಾಸು ತನ್ನ ಅಂಕಣದಲ್ಲಿ ಗುರುತಿಸಿರುವಂತೆ ಈ ವರ್ಷ ಶಾಲಾ ಶಿಕ್ಷಣಕ್ಕೆ ಮೀಸಲಿಟ್ಟ ಹಣದಲ್ಲಿ ಶೇ. 32ರಷ್ಟನ್ನು ಕಡಿತಗೊಳಿಸಿದೆ. ಆರೋಗ್ಯ ಕ್ಷೇತ್ರಕ್ಕೆ ಇಟ್ಟಿದ್ದ ಹಣದಲ್ಲಿ ಶೇ. 12ಕ್ಕೆ ಕತ್ತರಿ ಬಿದ್ದಿದೆ. ಮಹಿಳೆಯರಿಗೆ ಮೀಸಲಿಟ್ಟ ಹಣದಲ್ಲಿ ಶೇ. 7.6 ಕಡಿಮೆಯಾಗಿದೆ. ದೇಶದ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರಿಗೆ ಇಟ್ಟಿದ್ದ ಹಣದಲ್ಲಿ ಬರೋಬ್ಬರಿ ಶೇ. 35ಕ್ಕೆ ಕೊಕ್ಕೆ ಹಾಕಿದೆ.

ರೋಹಿತ್ ಇನ್ನಿಲ್ಲದಿದ್ದ ಈ ವರ್ಷದಲ್ಲಿ ಇನ್ನೊಂದು ಪ್ರಮುಖ ಬೆಳವಣಿಗೆಯೂ ಆಗಿದೆ. ಅದೇ ರೂ. 500 ಮತ್ತು ರೂ. 1,000 ನೋಟುಗಳ ಅನಾಣ್ಯೀಕರಣ. 'ಮಗ ಎಲ್ಲ ಬಿಟ್ಟು ಭಂಗಿ ನೆಟ್ಟ' ಎಂಬಂತೆ ಅಧಿಕಾರದ ಚುಕ್ಕಾಣಿ ಹಿಡಿದ ಕಳೆದ ಎರಡೂವರೆ ವರ್ಷಗಳಲ್ಲಿ ಏನನ್ನೂ ಸಾಧಿಸದ ಮೋದಿ ಅನಾಣ್ಯೀಕರಣದ ಮೂಲಕ ಕಪ್ಪುಹಣವನ್ನು ನಿರ್ನಾಮ ಮಾಡುತ್ತೇನೆ, ಖೋಟಾನೋಟುಗಳನ್ನು ಬಡಿದು ಹಾಕುತ್ತೇನೆ, ಭಯೋತ್ಪಾದನೆಯನ್ನು ಮಟ್ಟಹಾಕುತ್ತೇನೆ ಎಂಬ 'ಭಂಗಿ' ನೆಟ್ಟ. ಆರಂಭದಲ್ಲಿ ಆತನ ಈ 'ಭಂಗಿ'ಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರು 'ಟೈಟ್' ಆಗಿದ್ದೇ ಹೆಚ್ಚು. ಆದರೆ ನಿಧಾನವಾಗಿಯಾದರೂ ಮೋದಿ ಬಿಡುತ್ತಿರುವುದೆಲ್ಲ 'ಬೂಸ' ಎಂಬ ಅರಿವು ಅವರಿಗಾಗುತ್ತಿದೆ. ಉದಾಹರಣೆಗೆ ಹೆಚ್ಚಾಗಿ ಮೋದಿ ಭಕ್ತರೇ ಇರುವ ನನ್ನ ಮಾಜಿ ಕಾಲೇಜು ಮಿತ್ರರ ಒಂದು ವಾಟ್ಸ್ ಆಪ್ ಗುಂಪಿನಲ್ಲಿ ಮೊದಲು ಮೋದಿಯ ಈ ಕ್ರಮವನ್ನು ಕೊಂಡಾಡಿದವರೇ ಹೆಚ್ಚು. ಅವರು ನನ್ನನ್ನು ಟೀಕಿಸಿದ್ದು ಅಷ್ಟಿಷ್ಟಲ್ಲ. ಆದರೀಗ ಅವರೇ ಮೋದಿಯನ್ನು ಗೇಲಿ ಮಾಡುವ ಎಮೋಜಿಗಳನ್ನು ಈ ಗುಂಪಿನಲ್ಲಿ ಹಂಚಿಕೊಳ್ಳಲಾರಂಭಿಸಿದ್ದಾರೆ. ಈ ವೃತ್ತಾಂತ ದೇಶದಾದ್ಯಂತ ನಡೆಯುತ್ತಿದೆ.

ಒಂದೆಡೆ ಇವತ್ತಿಗೂ ಗಾಢವಾಗಿ ಕಾಡುತ್ತಲೇ ಇರುವ ರೋಹಿತ್ ನೆನಪು, ಮುಂದುವರೆಯುತ್ತಿರುವ ಕನ್ಹಯ್ಯನ ಸ್ಫೂರ್ತಿದಾಯಕ ಭಾಷಣಗಳು, ಹಬ್ಬುತ್ತಿರುವ ಜಿಗ್ನೇಶನ ದಿಟ್ಟ ಹೋರಾಟ... ಇನ್ನೊಂದೆಡೆ ಮೋದಿ ಮತ್ತು ಆತನ ಚೆಡ್ಡಿಗಳ ಟೊಳ್ಳುತನ ಬಯಲಾಗುತ್ತಿದೆ... ರೋಹಿತ್ ನೆನಪಿನಲ್ಲಿ ಇಷ್ಟು ಹೇಳಬೇಕೆನಿಸಿತು.

ಕೊನೆಯದಾಗಿ ಎರಡು ವಿಚಾರಗಳು. ಒಂದು, ನಾಳೆ ಬೆಂಗಳೂರಿಗೆ ನನ್ನ 'ಮಗ' ಕನ್ಹಯ್ಯ ಬರುತ್ತಿದ್ದಾನೆ. ಆತನನ್ನು ಮೊದಲ ಬಾರಿಗೆ ಭೇಟಿಯಾಗುವ ಸಂತೋಷದಲ್ಲಿ ನಾನಿದ್ದೇನೆ. ಎರಡು, ಎಸ್.ಎಲ್.ಭೈರಪ್ಪನವರ ಹೊಸ ಕಾದಂಬರಿ 'ಉತ್ತರಕಾಂಡದ' ಪ್ರತಿ ಇವತ್ತು ನನಗೆ ಸಿಕ್ಕಿದೆ. ಇವೆರಡೂ ಕುರಿತು ಮುಂದಿನ ವಾರ ಬರೆಯುತ್ತೇನೆ. ●

ಎಚ್ಚರ!! ತಲೆ ತಪ್ಪಿಸಿಕೊಂಡಿದ್ದಾನೆ ತಲೆತಿರುಕ ಬಿಜೆಪಿ ಸಂಸದ ಅನಂತ್ಮಾಣಿ



ಅನಂತಕುಮಾರ್ ಹೆಗಡೆ

"ಎಲ್ಲಿಯವರೆಗೆ ಅನಾಹುತಕಾರಿ ಅನಂತ್ಮಾಣಿ ಉತ್ತರ ಕನ್ನಡದ ಸಂಸದನಾಗಿರುತ್ತಾನೋ ಅಲ್ಲಿಯವರೆಗೆ ಜಿಲ್ಲೆಯ ಮಾನ-ಮರ್ಯಾದೆ ಹರಾಜಾಗುತ್ತಲೇ ಇರುತ್ತದೆ....! .....ಎಲ್ಲಿಯತನಕ ಸಂಘ ಪರಿವಾರದ ಸರದಾರರು ಪಾತಕಿ ಅನಂತ್ಮಾಣಿಯ ಅನಾಚಾರಕ್ಕೆಲ್ಲಿ ಹಿಂದೂತ್ವದ ಸಿಂಧುತ್ವ ಕೊಡುತ್ತಾರೋ ಅಲ್ಲಿಯತನಕ ಅಮಾಯಕರ ನೆತ್ತರು ಹರಿಯುತ್ತಲೇ ಇರುತ್ತದೆ.... ಬಿಜೆಪಿ ಬಣ್ಣ ಬಯಲಾಗುತ್ತಲೇ ಇರುತ್ತದೆ....!!" ಹಾಗಂತ ಉತ್ತರ ಕನ್ನಡ ಉದ್ದಗಲಕ್ಕೆ ಪಕ್ಷ-ಪಂಗಡ, ಜಾತಿ-ಧರ್ಮ ಮೀರಿ ಭೀಭತ್ಸ ಚರ್ಚೆಗಳು ನಡೆಯುತ್ತಲೇ ಇವೆ. ಬಿಜೆಪಿಯ ಭಯೋತ್ಪಾದಕ ಸಂಸದ ಸಾಹೇಬನೆಂದೇ ಸುಪ್ರಸಿದ್ಧನಾಗಿರುವ ಅನಂತಕುಮಾರ್ ಹೆಗಡೆ, ಉರುಫ್ ಅನಂತ್ಮಾಣಿ, ಶಿರಸಿಯ ಇಬ್ಬರು ಪಾಪದ ವೈದ್ಯರು, ಮತ್ತೊಬ್ಬ ರಿಸೆಪ್ಷನಿಸ್ಟ್ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ವಾರಗಳೆರಡು ಕಳೆದರೂ ಉತ್ತರ ಕನ್ನಡವಿನ್ನೂ ಆಘಾತದಿಂದ ಹೊರಬರಲಾಗಿಲ್ಲ...

ಅನಂತ್ಮಾಣಿಯದು ಥೇಟ್ ಮರ್ಕಟ ಬುದ್ಧಿ! ಸಂಸದಗಿರಿ ಅಧಿಕಾರ ಸಿಕ್ಕಿರುವುದು ಮಂಗನಿಗೆ ಹೆಂಡ ಕುಡಿಸಿದಂತಾಗಿದೆ. ಹೊಡಿ-ಬಡಿ-ಕಡಿ-ಕೊಚ್ಚು-ಸಂಸ್ಕೃತಿ-ಸಂಸ್ಕಾರದ ಹರಿಕಾರ ಅನಂತ್ಮಾಣಿ ಮನೆಯಿಂದ ಹೊರಬಿದ್ದನೆಂದರೆ ಯಾರದೋ ಗ್ರಹಚಾರ ಕೆಟ್ಟಿದೆ ಎಂದೇ ಅರ್ಥ. ಆತ ಬಾಯಿಬಿಟ್ಟನೆಂದರೆ ಅಪದ್ಧವೇ ಹೊರಬೀಳುತ್ತದೆ. ಸಂಘಪರಿವಾರದ ಬೈಠಕ್‌ನಲ್ಲಿ ಉರು ಹೊಡೆದ ಮತಾಂಧ ಮಾತುಗಾರಿಕೆಯ ಅನಂತ್ಮಾಣಿ ಹದಿನೈದು ವರ್ಷ ಎಂಪಿಯಾಗಿ ಜಿಲ್ಲೆಗೇನೂ ಮಾಡಿಲ್ಲ, ಸದಾ ಜನರಿಗೆ ನಾಟ್ ರಿಚೇಬಲ್ ಆಗಿರುವ ಈತ ತನಗೆ ಬೇಕಾದ-ಬೇಡವಾದ ಸಿರಿ-ಸಂಪತ್ತೆಲ್ಲ ಮಾಡಿಕೊಂಡಿದ್ದಾನೆ. ಒಂದು ಕಾಲದಲ್ಲಿ ಕಂಡ-ಕಂಡಲ್ಲಿ ಹಿಂದೂತ್ವದ ಪ್ರಚಾರದ ನೆಪದಿಂದ ವಾರಾನ್ನದ ಪೋರನಾಗಿದ್ದ ಅನಂತ್ಮಾಣಿ ಇವತ್ತು ಕೋಟ್ಯಾಧೀಶ. ಪ್ರಜಾತಂತ್ರದ ದುರಂತವೆಂದರೆ- ಈ ಎಡವಟ್ಟು ಮಾಣಿ ಸಂಸದ ಬೇರೆ!!

ಜಿಲ್ಲೆಯಲ್ಲಿ ಎಂತೆಂಥ ಅನಾಹುತವಾದರೂ- ಸಮಸ್ಯೆ ಸಂಕಟ ಬಾಧಿಸಿದರೂ ಅವೆಲ್ಲ ಈ ಖಾಲಿ ಬುರುಡೆ ಭೂಪನಿಗೆ ಅರ್ಥವೇ ಆಗಲ್ಲ, ಜಿಲ್ಲೆಯ ಭೌಗೋಳಿಕ ಪರಿಸರದ ಪರಿಚಯವೇ ಇಲ್ಲದ ಅನಂತ್ಮಾಣಿ ಎಲೆಕ್ಷನ್ ಹೊತ್ತಲ್ಲಷ್ಟೇ ಹಿಂದೂತ್ವದ ಹುತ್ತದಿಂದ ಹೊರಬಂದು ಗೆದ್ದ ನಂತರ ಅದೃಶ್ಯವಾಗೋದನ್ನ ಅನುಚಾನವಾಗಿ ಪಾಲಿಸಿಕೊಂಡು ಬಂದಾತ. ಇತ್ತೀಚಿನ ವರ್ಷಗಳಲ್ಲಂತೂ ತನಗೆ ಅನಾರೋಗ್ಯ ಅನ್ನುತ್ತ ಜನರಿಂದ ತಲೆತಪ್ಪಿಸಿಕೊಳ್ಳುತ್ತಿದ್ದ ಅನಂತ್ಮಾಣಿ ಅದೆಂಥ ಕೃತಘ್ನ ಜನ ಪ್ರತಿನಿಧಿ ಎಂದರೆ, ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ತುಂಬಿದ ಗ್ಯಾಸ್ ಟ್ಯಾಂಕರ್ ಕುಮಟಾದ 'ಬರ್ಗಿ' ಎಂಬಲ್ಲಿ ಉರುಳಿ ಊರು ಸುಟ್ಟು ಕರಕಲಾಗಿ, ಹತ್ತಾರು ಜನ ಸಾವು-ನೋವಿಗೀಡಾದರೂ ಈತ ಮಾತ್ರ ನಾಲ್ಕು ಸಾಂತ್ವನದ ಮಾತಾಡಲಿಕ್ಕೂ ಬರಲಿಲ್ಲ!! ತೈಲ ವ್ಯವಹಾರದ ಸಂಸದ ಸಮಿತಿ ಅಧ್ಯಕ್ಷ ಅಂದು ರಾಜ್ಯ ಬಿಜೆಪಿ ಅಧ್ಯಕ್ಷನೂ ಆಗಿದ್ದ ಪ್ರಹ್ಲಾದ ಜೋಷಿ ಹುಬ್ಬಳ್ಳಿಯಿಂದ ಬಂದರೂ ಈ ಮಾಣಿಯ ಕಲ್ಲು ಹೃದಯ ಮಾತ್ರ ಕರಗಲೇ ಇಲ್ಲ! ತನ್ನನ್ನು ಸಂಸದನಾಗಿ ಮಾಡಿದ ಜಿಲ್ಲೆಯ ಎಲ್ಲ ಭಾಗದ ಜನರನ್ನೂ ಮಾಣಿ ಇದೇ 'ನೀತಿ'ಯಿಂದ ನೋಡಿಕೊಳ್ಳುತ್ತ ಬಂದಿದ್ದಾನೆ.

ಜಿಲ್ಲೆ ಎಂದರೆ ತಾತ್ಸಾರ- ಜನರೆಂದರೆ ಉದಾಸೀನ ಭಾವನೆಯ ಅನಂತ್ಮಾಣಿ ತನ್ನ ನಿಗೂಢ-ರಹಸ್ಯ ವ್ಯವಹಾರ-ಉದ್ಯಮ-ತೋಟಗಾರಿಕೆ-ಬಂಗ್ಲೆ ಕಟ್ಟೋಣ-ಕದಂಬ ಚಾರಿಟೇಬಲ್ ಟ್ರಸ್ಟ್ ಪೋಷಣೆ-ಪಾಲನೆ ತುಂಬ ಮುತುವರ್ಜಿಯಲ್ಲೇ ಮಾಡಿಕೊಂಡಿದ್ದಾನೆ. ಇದ್ದೂ ಸತ್ತಂತಾಗಿದ್ದ ಈ ಸಂಸದ ಅಮಾತ್ಯ ರಾಕ್ಷಸನಂತೆ ಎದ್ದು ಕುಂತಿದ್ದು, ಜಿಲ್ಲೆಯಾದ್ಯಂತ ಗಿರಗಿಟ್ಲೆ ಹೊಡೆಯಲು ಶುರು ಮಾಡಿದ್ದು ಯಡ್ಡಿ ಆತನನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷ ಮಾಡಿದ ನಂತರವೇ. ಏನಾದರೂ ಮಾಡಿ, ಹೇಗಾದರೂ ಮಾಡಿ ಆಜನ್ಮ ವೈರಿ ಕಾಗೇರಿ ಮಾಣಿಯ ಹೆಡೆಮುರಿ ಕಟ್ಟಿ ರಾಜ್ಯದಲ್ಲಿ ಮಂತ್ರಿ ಆಗುವ ತೀವ್ರ ತೆವಲಿಗೆ ಬಿದ್ದಿರುವ ಅನಂತ್ಮಾಣಿ ಈಗ ತನ್ನ ತಲೆ ಮೇಲೆ ತಾನೇ ಕಲ್ಲು ಚಪ್ಪಡಿ ಎಳೆದುಕೊಂಡು ಬಿಟ್ಟಿದ್ದಾನೆ. ಶಿರಸಿಯ ಟಿಎಸ್‌ಎಸ್ ಆಸ್ಪತ್ರೆಯ ಪಾಪ ಡಾಕ್ಟರ್‌ಗಳಾದ ಮಧುಕೇಶ್ವರ, ಬಾಲಚಂದ್ರ



ಭಟ್ಟ ಮತ್ತು ರಿಸೆಪ್ಷನಿಸ್ಟ್ ರಾಹುಲ್‌ಗಳ ಕೊರಳಪಟ್ಟಿ ಹಿಡಿದೆಳೆದು ಬೈಯ್ಯುತ್ತ ಬಡಿಯುತ್ತ ರಕ್ತ ಹರಿಸಿ ನೆಲಕ್ಕೆ ಕೆಡವಿ ಕೇಕೆ ಹಾಕಿದ ಸಂಸದ ಅನಂತ್ಮಾಣಿ ಈಗ ಕ್ರಿಮಿನಲ್ ಕೇಸಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ.


ಇಂಥ ಕೇಸು-ಕೋರ್ಟು-ಪೊಲೀಸು ನಿರ್ಲಜ್ಜ ಮಾಣಿಗೆ ಹೊಸತೇನೂ ಅಲ್ಲ. ಆತನ ಅಕೌಂಟ್‌ನಲ್ಲಿ ಹಲವು ಕ್ರಿಮಿನಲ್ ಪ್ರಕರಣ, ಕೊಲೆ ಕೇಸುಗಳೂ ಇದ್ದವು. ಹಾಗಾಗಿ ಡಾಕ್ಟರ್‌ಗಳ ಹೊಡೆದ ಭಾನ್ಗಡಿ ದಕ್ಕಿಸಿಕೊಳ್ಳುವ ಧರತಿಯಲ್ಲೇ ಇದ್ದ. ಯಾವಾಗ ಪೆಟ್ಟು ತಿಂದ ವೈದ್ಯರು ರಾತ್ರೋರಾತ್ರಿ ಪೊಲೀಸ್ ಕಂಪ್ಲೇಂಟು ಕೊಡಲು ಸಿದ್ಧರಾದರೋ ಆಗಾತ ಒಂಚೂರು ಕಂಗಾಲಾಗಿದ್ದ. ತನ್ನ ರೌಡಿಗಿರಿ ಪರಾಕ್ರಮದ ಸಿಸಿ ಕ್ಯಾಮರಾ ಫುಟೇಜ್‌ಗಳು ಮಾಧ್ಯಮದವರ ಕೈಸೇರಿದ್ದು ಕೇಳಿದಾಗ ಸಣ್ಣ ಸಂಧಾನಕ್ಕೆ ಮುಂದಾಗಿದ್ದ. ಆಸ್ಪತ್ರೆಯ ಅಡ್ನಾಡಿ ಅಧ್ಯಕ್ಷ ಶಾಂತಾರಾಮ ಹೆಗಡೆ ಬೆಳಗಿನಜಾವದ ತನಕ ನಡೆಸಿದ ರಾಜಿ ಪಂಚಾಯ್ತಿಕೆಯಲ್ಲಿ ಬೆದರಿಕೆ ತಂತ್ರಗಾರಿಕೆಯಿಂದಲೇ ವೈದ್ಯರ ಬಗ್ಗುಬಡಿಯಲು ಹವಣಿಸಿದ್ದ. ಆ ಸಭೆಯಲ್ಲಿ ಅನಂತ್ಮಾಣಿ "ನಾನು ಇರೋದೆ ಹೀಗೆ.... ಹೊಡೆದೇ ಪಾಠ ಕಲಿಸೋದು ನನ್ನ ಸ್ವಭಾವ..." ಎಂದೆಲ್ಲ ತನ್ನ ಪಾತಕವನ್ನು ಸಮರ್ಥಿಸಿಕೊಂಡು ಹಾರಾಡಿದ್ದ. ಆತನ ಪರವಾಗೇ ಟಿಎಸ್‌ಎಸ್‌ನ ನಾಲಾಯಕ್ ಅಧ್ಯಕ್ಷ ವಕಾಲತ್ತು ಮಾಡಿ ತನ್ನ ಸಿಬ್ಬಂದಿಯನ್ನು ಬಲಿ ಹಾಕಿದ್ದ. ಹೀಗಾಗಿ ವೈದ್ಯರು ಈ ರೌಡಿ ಮತ್ತು ಹೇತ್ಲಾಂಡಿಗಳ ಸಹವಾಸವೇ ಬೇಡವೆಂದು ಪೊಲೀಸು ದೂರು ಕೊಡೋದಕ್ಕೂ ಹೆದರಿಕೊಂಡಿದ್ದರು.

ಇದು ಅನಂತ್ಮಾಣಿ ಭಂಡ ಬಡಿವಾರ ಹೆಚ್ಚಿಸಿತ್ತು. ಕ್ರಿಮಿನಲ್ ಪಾತಕ ಮಾಡಿದರೂ ಕಾನೂನಿನ-ನೈತಿಕತೆಯ ಕನಿಷ್ಠ ಹೆದರಿಕೆ-ನಾಚಿಕೆ ಇಲ್ಲದೆ ಆತ ತನ್ನ ಕಚೇರಿಯಲ್ಲಿ ವಿರಾಜಮಾನವಾಗಿದ್ದ. ದೃಶ್ಯ ಮಾಧ್ಯಮಗಳಲ್ಲಿ ಆತನ ಗೂಂಡಾಗಿರಿಯ ಸಚಿತ್ರ ವರದಿಗಳು ಬರುತ್ತಿದ್ದವು. ಮೊಬೈಲ್‌ಗಳಲ್ಲಿ ಸಿಸಿ ಕ್ಯಾಮರಾದ ಫುಟೇಜ್‌ಗಳು ವೈರಲ್ ಆಗಿತ್ತು, ಆದರೂ ಅನಂತ್ಮಾಣಿ ಧೀರೋದಾತ್ತ ನಾಯಕನ ಗೆಟಪ್‌ನಲ್ಲಿ 'ಸಂಸದಗಿರಿ' ಚಲಾಯಿಸುತ್ತ ನಿರಾತಂಕವಾಗಿದ್ದ.

ಟಿವಿ-ಪತ್ರಿಕೆಗಳಲ್ಲಿ ಏನೇ ಬರಲಿ, ಜನರು ಏನೇ ಹೇಳಲಿ, ಯಾರ ಮೊಬೈಲ್‌ನಲ್ಲಿ ತನ್ನ ಕರ್ಮದ ಚಿತ್ತಾರ ಬಿಚ್ಚಿಕೊಳ್ಳಲಿ ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳುವ ಪೈಕಿ ಈ ಕಾನೂನುಭಂಜಕನಲ್ಲ, ಹೇಗಿದ್ದರೂ ಹೊಡೆತ ತಿಂದ ಡಾಕ್ಟರ್‌ಗಳು ತನ್ನ ವಿರುದ್ಧ ಕಂಪ್ಲೇಂಟು ಕೊಡುವ ಛಾತಿಯವರಲ್ಲ ಎಂಬುದು ಆತನಿಗೆ ಖಾತ್ರಿಯಾಗಿತ್ತು. ಅಂಥದೊಂದು ಭಯಾನಕ ಬ್ಲಾಕ್‌ಮೇಲ್ ಡಾಕ್ಟರ್ ಮೇಲಾತ ಪ್ರಯೋಗಿಸಿದ್ದ. ಈ ದಾದಾಗಿರಿಯಿಂದಾಗಿಯೇ ತನಗ್ಯಾರೂ ಏನೂ ಮಾಡಲಾಗುವುದಿಲ್ಲ ಎಂಬ ನಂಬಿಕೆಯಲ್ಲಿದ್ದ ಮಾಣಿ ಹಲ್ಲೆ ನಂತರದ ಮೂರು ಹಗಲು-ಮೂರು ರಾತ್ರಿ ಶಿರಸಿಯಲ್ಲಿ ಹಾಯಾಗಿ ಓಡಾಡಿಕೊಂಡಿದ್ದ. ಆತನ ಕಂಡವರೆಲ್ಲ ಇಸ್ಲಾಮ್ ಭಯೋತ್ಪಾದಕ ಯಾಸಿನ್ ಭಟ್ಕಳ್‌ನ ಹಿಂದೂತ್ವದ ಅಪರಾವತಾರ ಕಂಡಂತೆ ಬೆಚ್ಚಿಬೀಳುತ್ತಿದ್ದರು.

ಅಧಿಕಾರಿಗಳು, ಜನಸಾಮಾನ್ಯರು, ಸ್ವ-ಪಕ್ಷದ ಶಾಸಕ-ಮಂತ್ರಿ-ಕಾರ್ಯಕರ್ತರು ಎನ್ನದೆ ಯಾರನ್ನು ಬೇಕಿದ್ದರೂ ಹೊಡೆದು-ಬಡಿದು ಮೃಗೀಯ ಆಟ ಆಡಿ ದಕ್ಕಿಸಿಕೊಳ್ಳುತ್ತ ಬಂದಿದ್ದ ಅನಂತ್ಮಾಣಿಯ ಈ ಅನಾಚಾರ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿ ಬಿಟ್ಟಿತು. ಭಾರತೀಯ ವೈದ್ಯಕೀಯ ಸಂಘ, ಮಾನವ ಹಕ್ಕು ಆಯೋಗ ಗಂಭೀರವಾಗಿ ಪರಿಗಣಿಸಿತ್ತು ಅನಂತ್ಮಾಣಿ ಪುಂಡಾಟ. ಗೃಹಮಂತ್ರಿ ಪರಮ್ ಮೇಲೆ ಒತ್ತಡಗಳು ಜೋರಾಯಿತು. ಬಡಪಾಯಿ ವೈದ್ಯರು ಕಂಪ್ಲೇಂಟು ಕೊಡಲು ಸಾಧ್ಯವಾಗದ ಭಯದ ವಾತಾವರಣ ಸಂಸದ ಸಾಹೇಬ ಸೃಷ್ಟಿಸಿದ್ದಾನೆ. ಹಾಗಾಗಿ ಪೊಲೀಸ್ ಇಲಾಖೆಯೇ ಸ್ವಯಂಪ್ರೇರಿತ ಕೇಸು ಮಾಣಿ ಮೇಲೆ ಜಡಿಯಬೇಕೆಂಬ ಆಗ್ರಹಗಳು ಆರಂಭವಾಯ್ತು.


ಆಗ ಅನಿವಾರ್ಯವಾಗಿ ಗೃಹ ಇಲಾಖೆ ಎಚ್ಚೆತ್ತುಕೊಳ್ಳಲೇಬೇಕಾಯ್ತು. ಎಲ್ಲಿವರೆಗೆ ಇಸ್ಲಾಮ್ ಇರುತ್ತದೋ ಅಲ್ಲಿಯವರೆಗೆ ಭಯೋತ್ಪಾದನೆ ಇರುತ್ತದೆ, ಜಾತ್ಯತೀತರು ಅಪ್ಪನಿಲ್ಲದೆ ಹುಟ್ಟಿರೋರು, ನೋಟ್ ಬ್ಯಾನ್‌ನಿಂದ ಕಳ್ಳ ಮುಸ್ಲಿಮ್ ವ್ಯಾಪಾರಿಗಳಿಗಷ್ಟೇ ತೊಂದರೆ ಆಗಿದೆ, ಇದು ಹಿಂದೂ ರಾಷ್ಟ್ರ- ಉಳಿದೋರು ಹೊರಹೋಗಲಿ ಎಂಬಿತ್ಯಾದಿ ಜೀವ ವಿರೋಧಿ- ಕಲಹ ಪ್ರಚೋದಕ ಅಣಿ ಮುತ್ತು ಮಾಣಿ ಬಿತ್ತರಿಸಿದಾಗಲೂ ಕೇಳಿಸದಂತಿದ್ದ ಗೃಹಮಂತ್ರಿ ಪರಮ್ ಗಡಿಬಿಡಿಗೆ ಬಿದ್ದರು.



ಮಾಣಿ ಮೇಲೆ ಸುಮೊ ಮೋಟೋ ಪ್ರ[...] ದಾಖಲಿಸುವಂತೆ ಪೊಲೀಸ್ ಮಹಾ ನಿರೀಕ್ಷಕರಿಗೆ ಪ[...] ಆರ್ಡರ್ ಮಾಡಬೇಕಾಗಿ ಬಂತು.

ಆಗ ಶುರುವಾಯ್ತು ನೋಡಿ, ಮಾಣಿಗೆ ಪೀಕ[...] ಜನವರಿ 2ರ ನಡುರಾತ್ರಿ ಮಾಣಿಯ ಗುದುಮ[...] ಶೋ ನಡೆದಿತ್ತು, 5ರ ರಾತ್ರಿ ಹೊತ್ತಿಗೆ ಪೊಲೀ[...] ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡರು. ಮುಂಜಾನೆಯ ನಸುಕು ಹರಿಯುತ್ತಿದ್ದಂತೆಯೇ ಮ[...] ಶಿರಸಿಯಿಂದ ನಾಪತ್ತೆಯಾಗಿ ಹೋದ. ಸಂಸದ ಮ[...] ಜತೆ ಆತನ ಕ್ರಿಮಿನಲ್ ಕಾರ್ಯಾಚರಣೆಗಳ ಲಾಗಾ[...] ಒಡನಾಡಿ ಎಸಳೆ ಕೃಷ್ಣನ ಮೇಲೂ ಕೇಸ್ ಆಗಿತ್ತು. ತಾ.ಪಂ ಸದಸ್ಯನೂ ಜಿಲ್ಲಾ ಬಿಜೆಪಿ ಪ್ರ[...] ಕಾರ್ಯದರ್ಶಿಯೂ ಆಗಿರುವ ಈ ಎಸಳೆ ಕೃಷ್ಣನ ಸ[...] ಅನಂತ್ಮಾಣಿ ಶಿರಸಿಯಿಂದ ತಲೆ ಮರೆಸಿಕೊಂ[...] ಹೋದವನು ಈಗೆಲ್ಲಿದ್ದಾನೆಂಬುದು ಪೊಲೀಸರಿಗೂ ಹಚ್ಚಲಾಗಿಲ್ಲ. ಒಂದು ಮೂಲದ ಪ್ರಕಾರ ಮಾಣಿ ಗೆಳ[...] ಕರೆದುಕೊಂಡು ದಿಲ್ಲಿ ಸೇರಿದ್ದಾನೆ. ಅಲ್ಲಿ ಸಂಸದ ಬಂಗ್ಲೆ[...] ಹಾಯಾಗಿದ್ದಾನಂತೆ. ಮತ್ತೊಂದು ಊಹಾಪೋಹದ ಪ[...] ಬೆಂಗಳೂರಿನ ಚೆಡ್ಡಿ ನಾಯಕನೊಬ್ಬನ ಅಡ್ಡೆ[...] ಅಡಗಿದ್ದನಂತೆ. ಕೆಲವರು ಆತ ಮುಂಬೈ ಅ[...] ಚೆನ್ನೈನಲ್ಲಿದ್ದಾನೆ ಎನ್ನುತ್ತಿದ್ದಾರೆ. ಅಲ್ಲಾತನ ವ್ಯವಹಾ[...] ಬೇರುಗಳಿವೆ ಎಂಬ ಸುದ್ದಿಗಳೂ ಹಬ್ಬಿವೆ.

ಪಾಪದ ಕೆಲಸ ಮಾಡಿಯೂ ಹುಲಿಯ ಪೋ[...] ಕೊಡುತ್ತಿದ್ದ ಅನಂತ್ಮಾಣಿ ಇಲಿಯಂತೆ ಶಿರಸಿ ಬಿಟ್ಟೋಡಿ[...] ಮಾಣಿ ಮತ್ತವನ ಸಹಚರ ಎಸಳೆ ಕೃಷ್ಣನ ಮೇ[...] ವೈದ್ಯೋಪಚಾರ ಸಿಬ್ಬಂದಿಗೆ ಹಲ್ಲೆ ಮತ್ತು ವೈದ್ಯೋಪ[...] ಆಸ್ತಿಗೆ ಹಾನಿ ನಿಷೇಧ ಅಧಿನಿಯಮ 2009 ([...] 4)ರಂತೆ ಕೇಸ್ ದಾಖಲಿಸಲಾಗಿದೆ. ಐಪಿಸಿ ಸೆಕ್ಷನ್ [...] 341 ಹಾಗು 504ರಂತೆ ಅಪರಾಧ ಮಾಡಿರುವ ಆರೋ[...]


ಎಸಳೆ ಕೃಷ್ಣ ಜೊತೆ ಅನಂತ್ಮಾಣಿ


ವೈದ್ಯರಿಗೆ ಅನಂತ್ಮಾಣಿ ಹೊಡೆಯುತ್ತಿರುವ ಫುಟೇಜ್


ಮಾಣಿ ಮೇಲೆ ಬಂದಿದೆ. ಇದು 3 ವರ್ಷ ಜ[...] ಮತ್ತು 50 ಸಾವಿರ ದಂಡ ವಿಧಿಸುವಂಥ [...] ಅಧಿನಿಯಮ.

ಆಸ್ಪತ್ರೆಯ ಸಿಸಿ ಕ್ಯಾಮರಾ ಫುಟೇಜ್ ಮತ್ತು ವೈ[...] ಸಂಸದನಿಂದ ರಕ್ತ ಹರಿವಂತೆ ಹೊಡೆತ ತಿಂದು ಸ[...] ಆಸ್ಪತ್ರೆ ಸೇರಿ ಇಲಾಜು ಮಾಡಿಕೊಂಡಿದ್ದು ಆಗ[...] ಪೊಲೀಸರಿಗೆ ಕೊಟ್ಟ ಹೇಳಿಕೆ ಆಧಾರದಲ್ಲಿ ಕೆ[...] ದಾಖಲಿಸಲಾಗಿದೆ. ಇಷ್ಟಾಗುವ ಹೊತ್ತಿಗೆ ಮಾಣ[...] ಮರ್ಯಾದೆ ರಾಷ್ಟ್ರಮಟ್ಟದಲ್ಲೇ ಮೂರು ಕಾಸಾ[...] ಬಿಜೆಪಿಯ ದೇಶಭೋಕ್ತರು ಆತನಿಗೆ ರಹಸ್ಯ[...] ಉಗಿದಿದ್ದಾರೆ. ಈ ತಿರಬೋಕಿಗೆ ಕಾಗೇರಿ-ಅನಂತ್ [...] ಮೇಲಿನ ಸೇಡಿಂದ ರಾಜ್ಯ ಬಿಜೆಪಿ ಉಪಾಧ್ಯಕ್ಷ [...]





ವೈದ್ಯರ ಪ್ರತಿಭಟನೆ

...ಟ್ಟಿದ್ದ ಯಡ್ಡಿಗೆ ಕ್ಲಾಸ್ ...ಕೊಂಡಿದ್ದಾರೆ. ಜಿಲ್ಲೆಯ ಜನರಂತೂ ...ಸ ನಾಲಾಯಕ್‌ನನ್ನು ಪವಿತ್ರ ...ಗೆ ಕಳಿಸಿ ಪ್ರಮಾದ ಮಾಡಿದೆವು ...ಕ್ಯಾಕರಿಸಿ ಉಗಿಯತೊಡಗಿದ್ದಾರೆ. ...ಗರಂತೂ ಮುಜುಗರದಿಂದ ...ಡಿಸಿದ್ದಾರೆ. ಮಾಣಿ ಹಣಿಯಲು ...ಹೂರ್ತ ಸಿಕ್ಕಿತೆಂದು ಆತನಿಂದ ಹಿಂಸೆ ...ಭವಿಸಿದ 'ಸಂತ್ರಸ್ತರಾದ' ಕಾಗೇರಿ, ...ಸ್. ಪಾಟೀಲ್, ಶಿವಾನಂದ ...ರ್..... ವಗೈರೆ ಮಾಜಿ ಸಚಿವ-ಶಾಸಕರೆಲ್ಲ ಹಿರಿಹಿರಿ ...ದ್ದಾರೆ.


ಪರಮೇಶ್ವರ್

...ದಕ್ಕೆಲ್ಲ ಬಗ್ಗುವ ಆಸಾಮಿ ಅನಂತ್ಮಾಣಿ ಅಲ್ಲ. ಇಂಥ ...ಂತರಗಳು ಬಂದಾಗೆಲ್ಲ ಕಮ್ಯುನಲ್ ಕಿತಾಪತಿ ಮೂಲಕ ...ಜು ಹೆಚ್ಚಿಸಿಕೊಳ್ಳುವ ಕುಕಲೆ ಆತನಿಗೆ ಕರಗತವಾಗಿ ...ಗಿದೆ. ಮತಾಂಧ ಮಸಲತ್ತುಗಳ ಮೂಲಕವೇ ...ನಾದ, ಬಿಜೆಪಿಯ ಮುಂಚೂಣಿ ...ಕಮಣಿಯಾದ ಮಾಣಿ ಈಗ ವೈದ್ಯರ ...ನ ಹಲ್ಲೆಯ ಅಪಕೀರ್ತಿಯಿಂದ ...ಗಲು ಮತ್ತದೇ ಕ್ರಿಮಿನಲ್ ...ನಲ್ ಕರಾಮತ್ತು ನಡೆಸುತ್ತಿದ್ದಾನೆಂಬ ...ಮಾನ ಸೃಷ್ಟಿಯಾಗಿದೆ! ಮತೀಯ ... ಎಬ್ಬಿಸಿ ತನ್ನ ಮೇಲೆ ಅಸಹ್ಯ ...ತ್ತಿರುವ ಜನರ ಗಮನ ಅತ್ತ ಸರಿಸುವ ...ತ್ನ ಮಾಣಿ ಮಾಡಿದನಾ ಎಂಬ ...ಮ ಪೊಲೀಸರು-ಜನಸಾಮಾನ್ಯರಿಗೆಲ್ಲ ...ಬಿಟ್ಟಿದೆ. ಮಾಣಿ ಶಿರಸಿಯಿಂದ ...ಯಾಗಿದ್ದು ಜನವರಿ 6 ರಂದು. ... ರಾತ್ರಿ ಬನವಾಸಿ ಬಳಿಯ 'ಹುಸರಿ' ...ಲ್ಲಿನ ಸಾಬರ ದರ್ಗಾದ ಸುತ್ತ ಕೇಸರಿ ...ಟಗಳನ್ನು ಕಟ್ಟಲಾಗಿದೆ. ದರ್ಗಾದ ...ತೆ ತುಂಬೆಲ್ಲ ಓಂ, ಓಂ ಶ್ರೀರಾಮ್ ...ಲ್ಲ ಬರೆಯಲಾಗಿದೆ.


ಡಾ. ರವೀಂದ್ರ- ಅಧ್ಯಕ್ಷ ಐಎಂಎ


ಶಾಂತಾರಾಮ್ ಹೆಗಡೆ

...ಮರುದಿನ ಮುಂಜಾನೆ ಇದನ್ನು ಕಂಡ ...ಳಲ್ಲಿ ಉದ್ವಿಗ್ನತೆ ಮೂಡಿದೆ. ತಕ್ಷಣ ...ಸರು ಧಾವಿಸಿ ಬಂದಿದ್ದಾರೆ. ಇದು ...ಎಸ್ ಆಸ್ಪತ್ರೆಯಲ್ಲಾದ ಗೂಂಡಾಗಿರಿ ಮತ್ತು ಆನಂತರ ...ದ ಹಿಂದೂತ್ವದ ಹರಿಕಾರರ ಹರಾಕಿರಿಗಳನ್ನು ಮರೆ ...ಲು ಮಾಡಲಾಗಿರುವ ಕಿಡಿಗೇಡಿತನ ಎಂಬುದು ... ಲೀಡರ್‌ಗಳಿಗೆ ಪಕ್ಕಾ ಆಗಿದೆ. ಕೆರಳಿದ ಯುವಕರನ್ನು ...ರು ಸಮಾಧಾನ ಮಾಡಿದ್ದಾರೆ. ಹುಸರಿಯ ಹಜರತ್ ...ವ್ ಮಾತಿಶಾ ಖಾದ್ರಿ ದರ್ಗಾ ಹಿಂದೂ-ಮುಸ್ಲಿಮ್ ...ಕ್ಯತೆಯ ತಾಣ. ದುರ್ಬುದ್ಧಿ ಜೀವಿಗಳ ಹೀನಕೃತ್ಯದಿಂದ ...ರಸ್ಯ ಕೆಡದಂತೆ ನೋಡಿಕೊಳ್ಳಿ ಎಂದು ಸಾಬರು ...ಣಿಗೆ ಹೊರಡಿಸಿ ಜಿಲ್ಲಾಡಳಿತವನ್ನು ಬೇಡಿಕೊಂಡರು. ... ಸ್ಥಿಮಿತ ಕಳೆದುಕೊಳ್ಳಲಿಲ್ಲ. ಗಲಭೆ-ದೊಂಬಿ ಏನೂ ...ಲ್ಲ. ಭಾನ್ಗಡಿ ಭೂಪರಿಗೆ ಮೈಲೇಜು ಸಿಗಲೇ ಇಲ್ಲ ...!

...ದರ ಬೆನ್ನಿಗೇ ಅನಂತ್ಮಾಣಿಯ ಅಭಿಮಾನಿಗಳು ...ಮ ಕರ್ಮಗೇಡಿಗಳೆಂದು ತೋರಿಸಲು ಲಾಗ ...ದ್ದಾರೆ. 'ಬಾಸ್'ನ ಮಾನ ಕಾಪಾಡಲು 'ಜಾಗೃತ ...ನೆ' ಸ್ಥಾಪಿಸಲಾಗುತ್ತದೆ ಎಂದು ಒಂದಿಷ್ಟು ಸಂಸದ ... ಹಿತೈಷಿಗಳು ಬೊಬ್ಬೆ ಹೊಡೆದರು. ವೈದ್ಯ ...ಲ್ಲಿನ ದೋಷ ಪತ್ತೆ, ವೈದ್ಯರ ಶೋಷಣೆ, ...ಗೇಡಿತನದ ವಿರುದ್ಧ ಬೀದಿಗಿಳಿವ 'ಬೆದರಿಕೆ'ಯ ...ಗಳು ಹೊರಬಂದವು. ಸಂಸದನ ಪುಂಡಾಟ ...ಖಿಸಿ ರಾಜ್ಯ ಐಎಂಎ ರಾಜ್ಯಾದ್ಯಂತ ಬೀದಿಗಿಳಿದ್ದಕ್ಕೆ ...ಾಗಿ ಈ ಎಚ್ಚರಿಕೆ ಎಂಬಂತೆ ಬಿಂಬಿಸುವ ಹೇತ್ಲಾಂಡಿ ... ನಡೆಯಿತು. ಇದು ಫ್ಲಾಪ್ ಆಯಿತು. ಹಾಗಂತ ...ಮಾಣಿಯೇನೂ ಸುಮ್ಮನೆ ಕೂತಿಲ್ಲ. ನಿರೀಕ್ಷಣಾ ...ನಿಗೆ ಅರ್ಜಿ ಹಾಕಿ ನಾಪತ್ತೆಯಾಗಿರುವ ಮಾಣಿ ... ಗೊಂದಲ-ಗಲಾಟೆ ಮೂಡಿಸಿ ಹೀರೋ ಆಗುವ ಹಿಕಮತ್ತು ನಡೆಸುತ್ತಲೇ ಇದ್ದಾನೆ. ಇದು ಗುಪ್ತಚರ ಇಲಾಖೆಗೆ ಗೊತ್ತಿದೆಯಾ? ಅನಂತನ ಅನಾಹುತಕಾರಿ ಗುಣ-ಧರ್ಮ-ಹಿನ್ನಲೆ ಬಲ್ಲವರು ಆತ ಜೈಲ್ಗೆ ಬೆಂಕಿ ಹಾಕುವ ಆತಂಕದಲ್ಲಿದ್ದಾರೆ!


ವೈದ್ಯ ಲೋಕ ಇವತ್ತು ಅಸಹಾಯಕ-ಅಮಾಯಕರ ಸುಲಿವ ದಂಧೆಯ ಅಡ್ಡೆಯಂತಾಗಿರುವ ಬಗ್ಗೆ ಎರಡು ಮಾತೇ ಇಲ್ಲ. ಹಾಗಂತ ಸಂಸದನಂಥ ಜವಾಬ್ದಾರಿಯ-ಘನತೆಯ-ಗೌರವದ ಸ್ಥಾನದಲ್ಲಿರುವ, ಸಮಾಜಕ್ಕೆ ಬುದ್ಧಿ ಹೇಳುವ ಜಾಗದಲ್ಲಿರುವ ಅನಂತ್ಮಾಣಿಗೆ ವೈದ್ಯರನ್ನಾಗಲಿ, ಯಾರನ್ನೇ ಆಗಲಿ ಹೊಡೆವ ಅಧಿಕಾರವಿಲ್ಲ. ಇದು ಅನಂತ್ಮಾಣಿಯನ್ನು ಪಲ್ಲಕ್ಕಿಗೇರಿಸಿರುವ ಯಡ್ಡಿಗೆ ಅರ್ಥವಾದಂತಿಲ್ಲ. ಈ ಮಾಣಿ ಕೈ ತುರಿಕೆ ಬಂದಾಗ, ಅಸಹಾಯಕರ ಕಂಡಾಗ ಪಲ್ಲಕ್ಕಿಯಿಂದ ಹಾರಿ ಹಲ್ಲೆ ಮಾಡುವ ಪೈಕಿ! ಬಿಜೆಪಿಯ ಮಾನ ಬೀದಿ ಪಾಲು ಮಾಡಿರುವ ಅನಂತ್ಮಾಣಿಯನ್ನು ಯಡ್ಡಿ ಇನ್ನೂ ರಾಜ್ಯ ಬಿಜೆಪಿ ಉಪಾಧ್ಯಕ್ಷತೆಯಲ್ಲೇ ಇಟ್ಟುಕೊಂಡಿರುವುದು ನಾಚಿಕೆಗೇಡು. ಎದುರಾಳಿಗಳು, ವಿರೋಧ ಪಕ್ಷದವರು ತಪ್ಪು ಮಾಡಿದಾಗ ಈ ಉಸಿ ಮುಸುಡಿಯ ಯಡ್ಡಿ "ಅವ್ರಿಗೆ ಮಾನ-ಮರ್ಯಾದೆ ಇದೆಯಾ?" ಎಂದು ಎಗರಾಡುವುದು ಮಾಮೂಲು. ಈಗ ಪಾಪಿ ಅನಂತ್ಮಾಣಿ ಮೇಲೊಂದು ಶಿಸ್ತುಕ್ರಮ ಕೈಗೊಳ್ಳದೇ ಬಾಲ ಮುದುರಿಕೊಂಡು ಕೂತಿರುವ ಯಡ್ಡಿಗೆ ಮಾನ-ಮರ್ಯಾದೆ ಇಲ್ವಾ? ಎಂದು ಜನರೇ ಮಾತಾಡಿಕೊಳ್ಳುವಂತಾಗಿದೆ.


"ಅನಂತ್ ಹೆಗಡೆ ದುಡುಕಿದ್ದಾರೆ. ಅವರಿಗೆ ತಪ್ಪಿನ ಅರಿವಾಗಿದೆ. ಇನ್ನು ಮೇಲೆ ಇಂಥ ಅನಾಹುತ ಮಾಡುವುದಿಲ್ಲ" ಎಂದು ಯಡ್ಡಿ ತಿಪ್ಪೆ ಸಾರಿಸುತ್ತಿದ್ದಾರೆ. ಆದರೆ ಮಾಣಿ ಗೂಂಡಾಗಿರಿ ಮಾಡಿರುವುದು ಇದೇ ಮೊದಲ ಬಾರಿಯೇನಲ್ಲ, ಆತನ ಜಾಯಮಾನವೇ ಅದು. ಮುಂದೆಯೂ ಆತ ಯಾರಿಗೂ ಹೊಡೆಯುವುದಿಲ್ಲ ಎಂಬುದಕ್ಕೆ ಗ್ಯಾರಂಟಿಯೇನಿಲ್ಲ. ತಪ್ಪಿನ ಅರಿವಾಗಿದ್ದರೆ ಆತ ಕಾನೂನಿಗೆ ಶರಣಾಗಿ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತಿದ್ದರಲ್ಲವಾ? ತನ್ನನ್ನು ಸಂಸದನಾಗಿ ಮಾಡಿದ ಮಂದಿಯನ್ನು ತಲೆತಗ್ಗಿಸುವಂತೆ ಮಾಡಿದ್ದಕ್ಕೆ ನೊಂದುಕೊಂಡು ವಿಷಾದ ವ್ಯಕ್ತ ಪಡಿಸುತ್ತಿರಲಿಲ್ಲವಾ? ಅದು ಬಿಟ್ಟು ನಿರೀಕ್ಷಣಾ ಜಾಮೀನಿಗೆ ಪ್ರಯತ್ನಿಸುತ್ತ ಅಡ್ಡದಾರಿಯಲ್ಲಿ ಅಡ್ನಾಡಿ ಕರಾಮತ್ತು ಅನಂತ್ಮಾಣಿ ನಡೆಸುತ್ತಿದ್ದರಾ?


ಐಎಂಎ ಅನಂತನ ಅವಾಂತರ ಗಂಭೀರವಾಗಿ ಪರಿಗಣಿಸಿದಂತಿದೆ. ರಾಜ್ಯ ಐಎಂಎ ಅಧ್ಯಕ್ಷ ರವೀಂದ್ರ, ಗೃಹಮಂತ್ರಿ ಪರಮೇಶ್ವರ ಮೇಲೆ ಒತ್ತಡ ಹಾಕಿ ಸುವೊ ಮೋಟೋ ದಾಖಲಾಗುವಂತೆ ಮಾಡಿದ್ದಾರೇನೋ ನಿಜ. ಶಿರಸಿಗೆ ಬಂದು ವೀರಾವೇಶದ ಭಾಷಣ ಬಿಗಿದಿದ್ದಾರೆ. "ಗುದ್ದಾಡುವ ಮನಸ್ಸಿದ್ದರೆ ಪಾಪದ ಮಧುಕೇಶ್ವರ-ಬಾಲು ಭಟ್ಟರಂಥವರ ಮೇಲೆ ಹೋಗಬೇಡಿ.... ನನ್ನಂಥ ಬಲಾಢ್ಯನ ಜತೆ ಕುಸ್ತಿಗೆ ಬನ್ನಿ..." ಎಂದು ಪಂಥಾಹ್ವಾನ ನೀಡಿದ್ದಾರೆ. ಅನಂತನಿಂದ ಹೊಡೆತ ತಿಂದು ಆತನ ಅರ್ಭಟಕ್ಕೆ ಹೆದರಿಕೊಂಡಿರುವ ವೈದ್ಯರು ಉಲ್ಟಾ ಹೊಡೆವ ಸಾಧ್ಯತೆ ಇದ್ದೇ ಇದೆ. ಮಾಣಿಯ ಕ್ರಿಮಿನಲ್ ಹಿನ್ನಲೆಯೇ ಹಾಗಿದೆ. ಹೀಗಾಗಿ ಅನಂತ್ಮಾಣಿಗೆ ಕಾನೂನಿನ ಜ್ಞಾನ ಮೂಡಿಸುವ, ಸಂಸದ ಕರ್ತವ್ಯದ ಪ್ರಜ್ಞೆ ಮೂಡಿಸುವ ದಮ್ ರವೀಂದ್ರರಿಗೆ ಇದೆಯಾ? ಸಂಸದನ ಗುದುಮುರಿಗೆ ಕೇಸ್ ತಾರ್ಕಿಕ ಅಂತ್ಯ ತಲುಪಿಸುವ ಇಚ್ಛಾಶಕ್ತಿ ರವೀಂದ್ರ ಪ್ರದರ್ಶಿಸಬೇಕಿದೆ!

■ ವರದಿಗಾರ



...ಬ ದರ್ಗಾದ ಮೇಲೆ ಹಿಂದುತ್ವದ 'ಹಗೆ' ಬರಹ







ನಾಗಮಂಗಲ: ಅಪ್ಪ-ಮಗನಿಗೆ ಗುಮ್ಮಿದ 'ಚೆಲುವಾ'ದ ಗೂಳಿ



ಮಂಡ್ಯದ 5 ತಾಲ್ಲೂಕುಗಳ ಎಪಿಎಂಸಿಗೆ ನಡೆದ ಚುನಾವಣೆಯಲ್ಲಿ ಮಂಡ್ಯ, ಪಾಂಡವಪುರ, ಶ್ರೀರಂಗಪಟ್ಟಣ, ಕೆ.ಆರ್.ಪೇಟೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಗೆದ್ದು ದೇವೇಗೌಡ-ಕುಮಾರಸ್ವಾಮಿಯ ಪ್ರಾಬಲ್ಯ ಹೆಚ್ಚಿಸಿದ್ದರೆ, ನಾಗಮಂಗಲದಲ್ಲಿ ಅಪ್ಪ-ಮಗನ ಆಟಕ್ಕೆ ಬಂಡೆದ್ದ ಶಾಸಕ ಚಲುವರಾಯಸ್ವಾಮಿ ಸರಿಯಾಗೇ ಗುಮ್ಮಿದ್ದಾರೆ. ಚಲುವರಾಯಸ್ವಾಮಿ ಪ್ರಾಬಲ್ಯ ಮುರಿಯಲು ಕಾಂಗ್ರೆಸ್‌ನ ಮಾಜಿ ಶಾಸಕರಾದ ಸುರೇಶ್‌ಗೌಡ-ಶಿವರಾಮೇಗೌಡನ ಜೊತೆ ಅಪ್ಪ-ಮಗನ ಜೋಡಿ ವ್ಯವಹಾರ ಕುದುರಿಸಿದರೂ ಎಪಿಎಂಸಿಯಲ್ಲಿ ಚಲುವರಾಯಸ್ವಾಮಿ ಬೆಂಬಲಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದು ಬಂದಿದ್ದಾರೆ. ಒಟ್ಟು 13 ಸ್ಥಾನಗಳ ಪೈಕಿ 8ರಲ್ಲಿ ತನ್ನ ಬೆಂಬಲಿಗರನ್ನು ಗೆಲ್ಲಿಸಿಕೊಳ್ಳುವ ಮೂಲಕ ಚಲುವರಾಯಸ್ವಾಮಿ ಗೌಡರ ಹಟ್ಟಿಗೆ ಬಿಸಿ ತಗುಲಿಸಿದ್ದಾರೆ.

ಮಂಡ್ಯ ಜಿಲ್ಲೆ ಜೆಡಿಎಸ್‌ನ ಭದ್ರಕೋಟೆ. ಒಕ್ಕಲಿಗ ಜನಾಂಗದವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಇಲ್ಲಿ ದೇವೇಗೌಡ- ಕುಮಾರಸ್ವಾಮಿ ಮೇಲೆ ಅಪಾರ ಅಭಿಮಾನ. ಆ ಕಾರಣಕ್ಕಾಗಿಯೇ ಪ್ರತಿ ವಿಧಾನಸಭಾ ಚುನಾವಣೆಯಲ್ಲಿ 7 ಕ್ಷೇತ್ರಗಳ ಪೈಕಿ 4 ರಿಂದ 5 ಕ್ಷೇತ್ರಗಳು ಜೆಡಿಎಸ್‌ಗೆ ಒಲಿಯುತ್ತವೆ. ಅಂಥಾ ಕಾಂಗ್ರೆಸ್ ಪಕ್ಷವೇ 1 ರಿಂದ 2 ಸ್ಥಾನ ಮುಟ್ಟುವುದಕ್ಕೇ ಸುಸ್ತು ಹೊಡೆಯುತ್ತದೆ. ಹಾಲಿ ಜಿಲ್ಲೆಯಲ್ಲಿ ಜೆಡಿಎಸ್‌ನ ಓರ್ವ ಸಂಸದ, ನಾಲ್ವರು ಶಾಸಕರಿದ್ದಾರೆ. ಅದರಲ್ಲಿ ನಾಗಮಂಗಲದ ಚಲುವರಾಯ ಸ್ವಾಮಿ ಹಾಗೂ ಶ್ರೀರಂಗಪಟ್ಟಣದ ರಮೇಶ್‌ಬಾಬು ಬಂಡಿಸಿದ್ದೇಗೌಡ ಪಕ್ಷದಿಂದ ಅಮಾನತ್ತುಗೊಂಡಿದ್ದಾರೆ. ಪ್ರತಿ ಹಂತದಲ್ಲಿಯೂ ಅಪ್ಪ-ಮಗನಿಗೆ ತಿರುಗೇಟು ನೀಡುತ್ತಾ ಬಂದ ಚಲುವರಾಯಸ್ವಾಮಿ ನಾಗಮಂಗಲದಲ್ಲಿ ಜೆಡಿಎಸ್ ಪ್ರಾಬಲ್ಯ ಕುಂದಿಸಲು ಎಪಿಎಂಸಿ ಚುನಾವಣೆಯನ್ನು ಸೂತ್ರಾಗೇ ಬಳಸಿಕೊಂಡಿದ್ದಾರೆ. ಶತಾಯಗತಾಯ ಎಪಿಎಂಸಿ ಚುನಾವಣೆಯಲ್ಲಿ ಗೆದ್ದು ಚಲುವರಾಯಸ್ವಾಮಿಗೆ ಮುಖಭಂಗ ಮಾಡಬೇಕೆಂದು ಹೊರಟ ಅಪ್ಪ-ಮಗನ ಜೋಡಿ ಅದಕ್ಕಾಗೇ ಭರ್ಜರಿ ತಂತ್ರ ಹೆಣೆದಿದ್ದರು.

ಚೆಲುವರಾಯಸ್ವಾಮಿ ಬೆಂಬಲಿತ ಅಭ್ಯರ್ಥಿಗಳ ಎದುರು ತನ್ನ ಪಕ್ಷದ ಅಭ್ಯರ್ಥಿಗಳನ್ನು ನಿಲ್ಲಿಸಿದರೆ ಸೋಲುವುದು ಖಚಿತ ಎಂಬ ಲೆಕ್ಕಾಚಾರ ಹಾಕಿದ ದೇವೇಗೌಡ-ಕುಮಾರಸ್ವಾಮಿ ಕಾಂಗ್ರೆಸ್‌ನ ಮಾಜಿ ಶಾಸಕ ಸುರೇಶ್‌ಗೌಡ ಹಾಗೂ ಶಿವರಾಮೇಗೌಡನ ಜೊತೆ ಒಳಗೊಳಗೆ ವ್ಯವಹಾರ ಕುದುರಿಸಿ, 13 ಸ್ಥಾನಗಳಲ್ಲೂ ಕಾಂಗ್ರೆಸ್-ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳನ್ನು ಚಲುವರಾಯಸ್ವಾಮಿ ಬೆಂಬಲಿತರ ಎದುರು ಸ್ಪರ್ಧಿಸುವಂತೆ ಮಾಡಿದ್ದರು. ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಚಲುವರಾಯಸ್ವಾಮಿ ಬಹಿರಂಗವಾಗಿಯೇ ಜೆಡಿಎಸ್ ಅಭ್ಯರ್ಥಿ ಕೆ.ಟಿ. ಶ್ರೀಕಂಠೇಗೌಡ ವಿರುದ್ಧ ಮತ ಹಾಕುವಂತೆ ಪ್ರಚಾರ ನಡೆಸಿದ್ದರು. ಆದರೆ ಚುನಾವಣೆಯಲ್ಲಿ ಜೆಡಿಎಸ್‌ನ ಕೆ.ಟಿ.ಶ್ರೀಕಂಠೇಗೌಡ ಗೆಲುವು ಸಾಧಿಸಿದ್ದರು. ಆಗ ದೊಡ್ಡ ಸಮಾವೇಶ ಮಾಡಿದ್ದ ದೇವೇಗೌಡ-ಕುಮಾರಸ್ವಾಮಿ 'ಯಾರು ಏನೇ ದ್ರೋಹ ಬಗೆದರೂ ಜನರು ಕೈಬಿಡಲಿಲ್ಲ' ಅಂತ ಚೆಲುವರಾಯ ಸ್ವಾಮಿಯ ಕಾಲೆಳೆದಿದ್ದರು.

ಅಪ್ಪ-ಮಗನ ವಾಗ್ದಾಳಿಗೆ ಹೊಡೆತ ನೀಡಬೇಕೆಂದು ಕಾತರಿಸಿದ್ದ ಶಾಸಕ ಚಲುವರಾಯಸ್ವಾಮಿಗೆ ಎಪಿಎಂಸಿ ಚುನಾವಣೆಯ ಮೂಲಕ ಅವಕಾಶ ಒದಗಿ ಬಂದಿತ್ತು. ಎಲ್ಲಾ 13 ಸ್ಥಾನಗಳಿಗೆ ಚಲುವರಾಯಸ್ವಾಮಿ ತನ್ನ ಬೆಂಬಲಿತ ಅಭ್ಯರ್ಥಿಗಳನ್ನು ನಿಲ್ಲಿಸಿದ್ದರು. ಆದರಿಗೆಲ್ಲ ಜೆಡಿಎಸ್-ಕಾಂಗ್ರೆಸ್ ಒಳಒಪ್ಪಂದದ 13 ಮೈತ್ರಿ ಬೆಂಬಲಿತರು ಸ್ಪರ್ಧೆಯೊಡ್ಡಿದ್ದರು. ದೇವೇಗೌಡ-ಕುಮಾರಸ್ವಾಮಿ ನಾಮಬಲ, ಮಾಜಿ ಶಾಸಕರಿಬ್ಬರ ಬೆಂಬಲದಿಂದ ಅತಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಬಹುದೆಂಬ ಲೆಕ್ಕಾಚಾರ ಜೋರಾಗಿಯೇ ಕೇಳಿಬರುತ್ತಿತ್ತು. ಚೆಲುವರಾಯಸ್ವಾಮಿ ಏಕಾಂಗಿಯಾಗಿಯೇ ತನ್ನ ಬೆಂಬಲಿತರ ಪರ ಪ್ರಚಾರ ನಡೆಸಿದರೆ ಮೈತ್ರಿ ಬೆಂಬಲಿತರ ಬೆಂಗಾವಲಿಗೆ ಬಂದದ್ದು ಸುರೇಶ್‌ಗೌಡ, ಶಿವರಾಮೇಗೌಡ, ಜೆಡಿಎಸ್ ವಿಧಾನಪರಿಷತ್ ಸದಸ್ಯ ಅಪ್ಪಾಜಿಗೌಡ, ಮನ್‌ಮುಲ್ ಮಾಜಿ ಅಧ್ಯಕ್ಷ ಜವರೇಗೌಡ, ಜೆಡಿಎಸ್ ಯುವ ಮುಖಂಡ ನೆಲ್ಲಿಗೆರೆ ಬಾಲು. ಅವರೆಲ್ಲ ದೊಡ್ಡಗೌಡ ಅಜೆಂಡಾ ಅನುಷ್ಠಾನಕ್ಕೆ ತರಲು ಇನ್ನಿಲ್ಲದಂತೆ ಶ್ರಮಿಸಿದ್ದರು.


ಯಾವಾಗ ಜೆಡಿಎಸ್ ನಾಯಕರು ಕಾಂಗ್ರೆಸ್ ಜೊತೆ ಕೈ ಜೋಡಿಸಿದರೋ ಚಲುವರಾಯಸ್ವಾಮಿ ಕೂಡ ನಾಗಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಟಿ. ಕೃಷ್ಣೇಗೌಡ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರನ್ನು ತನ್ನ ತೆಕ್ಕೆಗೆ ಎಳೆದುಕೊಂಡು ಸೆಡ್ಡು ಹೊಡೆದಿದ್ದರು. ಸಿದ್ದರಾಮಯ್ಯ ಜೊತೆ ಚೆನ್ನಾಗಿರುವ ಚಲುವರಾಯಸ್ವಾಮಿ ಮುಂದಿನ ಚುನಾವಣೆ ವೇಳೆಗೆ ಕಾಂಗ್ರೆಸ್ ಪಕ್ಷಕ್ಕೆ ಬರುವ ಸೂಚನೆ ದಟ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆತಂಕಗೊಂಡಿರುವ ಮಾಜಿ ಶಾಸಕ ಸುರೇಶ್‌ಗೌಡ ಜೆಡಿಎಸ್ ಪಕ್ಷದ ಟಿಕೆಟ್‌ಗಾಗಿ ಈಗಾಗಲೇ ಅರ್ಜಿ ಹಾಕಿಕೊಂಡಿದ್ದಾರೆ. ಹಾಗೆಯೇ ಮತ್ತೊಬ್ಬ ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡ ಕೂಡ ಅಪ್ಪ-ಮಗನನ್ನು ಓಲೈಸುತ್ತಾ ಜೆಡಿಎಸ್ ಟಿಕೆಟ್ ಮೇಲೆ ಆಸೆ ಇಟ್ಟುಕೊಂಡಿದ್ದಾರೆ. ಇದನ್ನು ಸರಿಯಾಗಿ ಬಳಸಿಕೊಂಡ ದೇವೇಗೌಡ-ಕುಮಾರಸ್ವಾಮಿ ಎಪಿಎಂಸಿ ಚುನಾವಣೆಯಲ್ಲಿ ಇಬ್ಬರ ಬೆಂಬಲವನ್ನು ಪಡೆದು ಜೆಡಿಎಸ್-ಕಾಂಗ್ರೆಸ್‌ನಿಂದ ಅಭ್ಯರ್ಥಿಗಳನ್ನು ಹಾಕಿದರೂ ಗೆಲ್ಲಲು ಸಾಧ್ಯವಾಗಿದ್ದು ಕೇವಲ 5 ಕ್ಷೇತ್ರಗಳಲ್ಲಿ ಮಾತ್ರ.

13 ಸ್ಥಾನಗಳ ಪೈಕಿ 8 ಕ್ಷೇತ್ರದಲ್ಲಿ ಚಲುವರಾಯಸ್ವಾಮಿ ಬೆಂಬಲಿಗರು ಗೆದ್ದಿದ್ದಾರೆ. ಚಿಣ್ಯ ಕ್ಷೇತ್ರದಲ್ಲಿ ಕೃಷ್ಣೇಗೌಡ, ಬೆಳ್ಳೂರು ಕ್ಷೇತ್ರದಲ್ಲಿ ಶಿವಯ್ಯ, ಮಾಯಿಗೋನಹಳ್ಳಿ ಕ್ಷೇತ್ರದಲ್ಲಿ ಕರೀಗೌಡ, ಕರಡಹಳ್ಳಿ ಕ್ಷೇತ್ರದಲ್ಲಿ ನಾಗರತ್ನಮ್ಮ, ನಾಗಮಂಗಲ ಕ್ಷೇತ್ರದಲ್ಲಿ ಯಲ್ಲೇಗೌಡ, ಗೊಂಡೇನಹಳ್ಳಿ ಕ್ಷೇತ್ರದಲ್ಲಿ ಚಾಕ್ಷಾಪುರ ನಂಜೇಶ್, ಟಿಎಪಿಸಿಎಂಎಸ್ ಕ್ಷೇತ್ರದಲ್ಲಿ ಹೆಚ್.ಬಿ.ರಮೇಶ್ ಹಾಗೂ ವ್ಯಾಪಾರಿಗಳ ಕ್ಷೇತ್ರದಿಂದ ಬಿ.ಪಿ.ಸಮರ್ಥ್ ಗೆದ್ದಿದ್ದಾರೆ. ಕಾಂಗ್ರೆಸ್-ಜೆಡಿಎಸ್‌ನಿಂದ 5 ಮಂದಿ ಮಾತ್ರ ಗೆದ್ದಿದ್ದಾರೆ. ಬಿಂಡಿಗನವಿಲೆ ಕ್ಷೇತ್ರದಲ್ಲಿ ಸುಶೀಲಮ್ಮ, ಬ್ರಹ್ಮದೇವರಹಳ್ಳಿ ಕ್ಷೇತ್ರದಲ್ಲಿ ಎಂ.ಸಿ.ಚನ್ನಪ್ಪ, ನೆಲ್ಲಿಗೆರೆ ಕ್ಷೇತ್ರದಲ್ಲಿ ಗೋವಿಂದನಾಯ್ಕ್, ಕದಬಳ್ಳಿ ಕ್ಷೇತ್ರದಿಂದ ಜಗದೀಶ್, ದೇವಲಾಪುರ ಕ್ಷೇತ್ರದಲ್ಲಿ ಬಿ.ಕೆ. ರಮೇಶ್ ಗೆದ್ದಿದ್ದಾರೆ. ಗೆದ್ದ 5 ಸ್ಥಾನಗಳಲ್ಲಿ ಬಹುತೇಕರು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು. ಅದರಲ್ಲೂ ಬಿಂಡಿಗನವಿಲೆ ಕ್ಷೇತ್ರದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಸುಶೀಲಮ್ಮ ಕೇವಲ 35 ಮತಗಳಿಂದ ಗೆದ್ದಿದ್ದಾರೆ. ಹಾಗೆಯೇ ನೆಲ್ಲಿಗೆರೆ ಕ್ಷೇತ್ರದಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಗೋವಿಂದನಾಯ್ಕ ಹಾಗೂ ಕದಬಳ್ಳಿ ಕ್ಷೇತ್ರದಲ್ಲಿ ಗೆದ್ದಿರುವ ಜಗದೀಶ್ ಕೇವಲ ನೂರು ಚಿಲ್ಲರೆ ಮತಗಳಿಂದ ಗೆದ್ದಿದ್ದಾರೆ. ಈ ಮೂರು ಕ್ಷೇತ್ರಗಳಲ್ಲಿ ಚಲುವರಾಯಸ್ವಾಮಿ ಇನ್ನೊಂದಷ್ಟು ಸರ್ಕಸ್ಸು ನಡೆಸಿದ್ದರೆ ಅವು ಸಹ ಸ್ವಾಮಿಯ ಜೋಳಿಗೆಗೆ ಬಂದು ಬೀಳುತ್ತಿದ್ದವು.

ತನ್ನ ವಿರುದ್ಧ ಅಪ್ಪ-ಮಗ ಚಿತಾವಣೆ ನಡೆಸುತ್ತಿರೋದು ಗೊತ್ತಾಗುತ್ತಿದ್ದಂತೆಯೇ ಚೆಲುವರಾಯಸ್ವಾಮಿ ತನ್ನ ಬೆಂಬಲಿಗರನ್ನು ಕರೆಸಿ, ಸಮಾಲೋಚನೆ ನಡೆಸಿ, ಆತ್ಮಸ್ಥೈರ್ಯ ತುಂಬಿ, ಸಂಪೂರ್ಣ ಬಲದ ಭರವಸೆ ಕೊಟ್ಟು ಕಣಕ್ಕಿಳಿದಿದ್ದರು. ನಾಗಮಂಗಲದ ಐದೂ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ 15 ತಾಲ್ಲೂಕು ಪಂಚಾಯತ್ ಸದಸ್ಯರು ಚಲುವರಾಯಸ್ವಾಮಿ ಬೆನ್ನಿಗೆ ನಿಂತಿದ್ದಾರೆ. ದೇವೇಗೌಡ-ಕುಮಾರಸ್ವಾಮಿಗಿಂತಲೂ ಚಲುವರಾಯಸ್ವಾಮಿಯೆಡೆಗೆ ನಿಷ್ಠೆ ಹೊಂದಿರುವ ಇವರಿಂದಾಗಿಯೇ ಚಲುವರಾಯಸ್ವಾಮಿ ಅಪ್ಪ-ಮಗನ ಜೋಡಿಗೆ ಬಿಸಿ ಮುಟ್ಟಿಸಿರೋದು. ಚೆಲುವರಾಯ ಸ್ವಾಮಿ ಮೇಲುಗೈ ಸಾಧಿಸಿರುವುದರಿಂದ ಸದ್ಯಕ್ಕಂತೂ ಅಪ್ಪ-ಮಗ ಕಸಿವಿಸಿಗೊಂಡಿದ್ದಾರೆ. ಮುಂದೆ ಮತ್ತೇನು ತಂತ್ರಗಾರಿಕೆ ಹೂಡುತ್ತಾರೋ ಕಾದು ನೋಡಬೇಕು.

■ ಮಂಡ್ಯ ನಾಗೇಶ್

ಕೊಪ್ಪಳ ಎಪಿಎಂಸಿ: ಕಮಲದ ಕೇಕೆ ಮುಂದೆ ಕೈ ಮಂಕು



2018ರ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯೆಂದೇ ಬಿಂಬಿತವಾಗಿದ್ದ ಎಪಿಎಂಸಿ ಎಲೆಕ್ಷನ್ ಫಲಿತಾಂಶ ಹೊರಬಿದ್ದಿದ್ದು ಕೊಪ್ಪಳದಲ್ಲಿ ಕಾಂಗ್ರೆಸ್ ಅದೇಕೋ ಕೈ ಬಾಡಿಸಿಕೊಂಡಿದೆ. ಈ ಚುನಾವಣೆಯಲ್ಲಿ ನೇರವಾಗಿ ಪಕ್ಷದ ಚಿಹ್ನೆಯಡಿ ಸ್ಪರ್ಧಿಸುವುದಿಲ್ಲವಾದರೂ ರಾಜಕೀಯ ನಾಯಕರು ತಮ್ಮತಮ್ಮ ಬೆಂಬಲಿಗರನ್ನು ಗೆಲ್ಲಿಸಿಕೊಂಡು ಪೂರಕ ವಾತಾವರಣ ಸೃಷ್ಟಿಸಿಕೊಳ್ಳಲು ಈ ಎಪಿಎಂಸಿ ಎಲೆಕ್ಷನ್ ಬಳಸಿಕೊಳ್ಳೋದು ಸಹಜ. ಜಮೀನು ಹೊಂದಿದ ರೈತರು ಮತದಾನ ಮಾಡುವ ಹಕ್ಕು ಪಡೆದಿರುವ ಇದನ್ನು ರೈತ ಚುನಾವಣೆ ಎಂದು ಹೇಳಬಹುದು. ಆದರೆ ಇವತ್ತು ಅದು ಸಹ ಸಕ್ರಿಯ ರಾಜಕಾರಣದ ರೂಪು ಪಡೆದುಕೊಂಡಿದೆ. ಅಂಥಾ ಸಂದರ್ಭದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸ್ವಲ್ಪ ಎಚ್ಚೆತ್ತುಕೊಳ್ಳಬೇಕಿತ್ತು. ಆದರ ಬದಲು ದೂರದ 2018ರ ಚುನಾವಣೆಗಷ್ಟೇ ದೃಷ್ಟಿ ಕೇಂದ್ರೀಕರಿಸಿಕೊಂಡ ಲೋಕಲ್ ಲೀಡರ್‌ಗಳಿಂದಾಗಿ ಕೊಪ್ಪಳದಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸುವಂತಾಗಿದೆ.

ಜನವರಿ 12 ರಂದು ಹೊರಬಿದ್ದ ಫಲಿತಾಂಶದ ಪ್ರಕಾರ ಜಿಲ್ಲೆಯ ಗಂಗಾವತಿ, ಕುಷ್ಟಗಿ, ಕನಕಗಿರಿ ಎಪಿಎಂಸಿಗಳಲ್ಲಿ ಕೇಸರಿ ಪಡೆ ಗೆಲುವು ಸಾಧಿಸಿದರೆ, ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರೆಡ್ಡಿ ಸ್ವಕ್ಷೇತ್ರದಲ್ಲಿ ಕಾಂಗ್ರೆಸ್ ಕಳಪೆ ಸಾಧನೆ ಮಾಡುತ್ತೆ ಎಂದು ಅಂದಾಜಿಸ ಲಾಗಿದ್ದರೂ ಯಲಬುರ್ಗಾದಲ್ಲಿ ಕಾಂಗ್ರೆಸ್ ಗೆದ್ದು ಅಚ್ಚರಿ ಮೂಡಿಸಿದೆ. ಅತ್ತ ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಮೊನ್ನೆ ನಡೆದ ಭಾಗ್ಯನಗರ ಪಟ್ಟಣ ಪಂಚಾಯತಿ ಚುನಾವಣೆಯಲ್ಲಿ ಬಿಜೆಪಿ ಪರ ಭರ್ಜರಿ ಫಸಲು ತೆಗೆದು ಎಪಿಎಂಸಿಯಲ್ಲೂ ಅದನ್ನು ಪುನರಾವರ್ತಿಸುವ ಹುಮ್ಮಸ್ಸಿನಲ್ಲಿ ಸಂಸದ ಸಂಗಣ್ಣ ಕರಡಿಗೆ ಕಾಂಗ್ರೆಸ್‌ನ ಶಾಸಕ ರಾಘವೇಂದ್ರ ಹಿಟ್ನಾಳ ಹಾಗೂ ತಂದೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಹಿಟ್ನಾಳ ಶಾಕ್ ಕೊಟ್ಟಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಹದಿನೈದು ವರ್ಷದ ಹಿಂದೆ ಜಿಲ್ಲೆಯ ಯಾವುದೇ ಚುನಾವಣೆಗಳಲ್ಲಿ ಠೇವಣಿ ಕಳೆದುಕೊಳ್ಳುತ್ತಿದ್ದ ಬಿಜೆಪಿ ಪಡೆ ಇಂದು ಅನಾಹುತಕಾರಿಯಾಗಿ ಬೆಳೆದು ನಿಂತಿರೋದು ಎಪಿಎಂಸಿ ಚುನಾವಣೆ ಫಲಿತಾಂಶದಿಂದ ಸಾಬೀತಾಗಿದೆ.

ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿಗೆ ಸ್ವಕ್ಷೇತ್ರ ಯಲಬುರ್ಗಾದಲ್ಲಿ ವಿರೋಧಿ ಅಲೆ ಇದೆ. ಹಾಗಿದ್ದೂ ಇಲ್ಲಿನ ಎಪಿಎಂಸಿ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆಯೆಂದರೆ ಬಿಜೆಪಿ ಭಿನ್ನಮತದ ಕಮುಟಿನ ವಾಸನೆಯೇ ಕಾರಣ. ಈ ಪಕ್ಷದಲ್ಲಿ ಈಗ ಬಿಜೆಪಿ ಹೈಕಮಾಂಡ್ ಎಂದರೆ ಹಾಲಪ್ಪ ಆಚಾರ್. ಆದರೆ ಸದ್ಯ ಹಾಲಪ್ಪ ಆಚಾರ್ ಮತ್ತು ಮಾಜಿ ಶಾಸಕ ಈಶಣ್ಣ ಗುಳಗಣ್ಣವರ್ ಪುತ್ರ ನವೀನಕುಮಾರ ಗುಳಗಣ್ಣವರ್ ನಡುವೆ ಭಿನ್ನಮತ ಭುಗಿಲೆದ್ದಿದೆ. ಅದೇ ಈ ಫಲಿತಾಂಶಕ್ಕೆ ಕಾರಣ. ಯಲಬುರ್ಗಾದ 12 ಕೃಷಿಕ ಕ್ಷೇತ್ರದಲ್ಲಿ 10 ಕಾಂಗ್ರೆಸ್ ಬೆಂಬಲಿತರು ಗೆದ್ದಿದ್ದರೆ ಬಿಜೆಪಿ ಬೆಂಬಲಿತರ ಸಂಖ್ಯೆ ಕೇವಲ 2ಕ್ಕಷ್ಟೇ ಸೀಮಿತವಾಗಿದೆ. ಜೆಡಿಎಸ್ ಪಕ್ಷದ ನೂತನ ತಾಲೂಕಾಧ್ಯಕ್ಷ ಶ್ರೀಪಾದಪ್ಪ ಅಧಿಕಾರಿ ಅತ್ಯಲ್ಪ ಕಾಲಾವಧಿಯಲ್ಲೇ 4 ಕಡೆ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಿದ್ದರೂ ವಿಜಯ ಪಾತಕೆ ಎಲ್ಲೂ ಲಭಿಸಿಲ್ಲ. ಬಿಜೆಪಿಯಿಂದ ಮಲ್ಲಣ್ಣ ನೆರಗೇಲ್ ಪರಾಭವಗೊಂಡು ಎದುರಾಳಿ ಕಾಂಗ್ರೆಸ್‌ನ ಬಸವರಾಜ ಗಡಾದ ಗೆಲ್ಲುವಲ್ಲಿ ಜೆಡಿಎಸ್‌ನ ಶೇಖರಗೌಡ ಮಾಲಿ ಪಾಟೀಲ್‌ನೇ ಕಾರಣ. ಈತ 350ಕ್ಕೂ ಅಧಿಕ ಮತಗಳನ್ನು ಪಡೆದಿದ್ದಾನೆ. ಇನ್ನು ತೀವ್ರ ಕುತೂಹಲ ಕೆರಳಿಸಿದ್ದ ಬೇವೂರು ಕ್ಷೇತ್ರದಲ್ಲಿ ಬಿಜೆಪಿಯಿಂದ ರುದ್ರಮ್ಮ ಗುಳೇದ್ ಕೇವಲ 4 ಮತಗಳ ಅಂತರದಿಂದ ಗೆಲುವು ಸಾಧಿಸಿ ತಾಲೂಕಿನ ಮಟ್ಟಿಗೆ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಒಟ್ಟಿನಲ್ಲಿ ಬಿಜೆಪಿಯ ಆಂತರಿಕ ಭಿನ್ನಮತ ಮಂತ್ರಿ ರಾಯರೆಡ್ಡಿಯ ಮುಖ ಉಳಿಸಿದೆ.

ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ್ ತನ್ನದೇ ಆದ ರಾಜಕೀಯ ತಾಕತ್ ಮೂಲಕ ಇಂದಿಗೂ ಸಂಗಣ್ಣ ಕರಡಿಯ ನಿದ್ದೆಗೆಡಿಸುತ್ತಿದ್ದಾನೆ. ಕೊಪ್ಪಳ ನಗರ ಹೊರತುಪಡಿಸಿ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಹಿಟ್ನಾಳ್ ಕಂಪನಿಯ ಪ್ರಾಬಲ್ಯ ಕಡಿಮೆಯಾಗಿಲ್ಲ ಎಂಬುದಕ್ಕೆ ಈ ಫಲಿತಾಂಶ ಪುಷ್ಟಿ ಕೊಡುತ್ತದೆ. ಒಟ್ಟು 11 ಕ್ಷೇತ್ರಗಳ ಪೈಕಿ, 8 ರಲ್ಲಿ ಕಾಂಗ್ರೆಸ್ ವಿಜಯದ ಕೇಕೆ ಹಾಕಿದರೆ ಬಿಜೆಪಿಗೆ ದಕ್ಕಿರೋದು ಕೇವಲ 3 ಸ್ಥಾನ ಮಾತ್ರ.

ಕುಷ್ಟಗಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಶಾಸಕ ದೊಡ್ಡನಗೌಡ ಪಾಟೀಲ್ ಮತ್ತೆ ತನ್ನ ಗೌಡ್ಕಿ ದರ್ಬಾರ್ ಮೆರೆದಿದ್ದಾನೆ. ಒಟ್ಟು 12 ಕ್ಷೇತ್ರಗಳ ಪೈಕಿ ಬಿಜೆಪಿ ಬೆಂಬಲಿತರು 8 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದರೆ ಮಾಜಿ ಸಚಿವ ಬಯ್ಯಾಪುರ್ ಸಾರಥ್ಯದ ಕಾಂಗ್ರೆಸ್ ಬೆಂಬಲಿಗರಿಗೆ ದಕ್ಕಿದ್ದು 4 ಸ್ಥಾನ ಮಾತ್ರ. ಮಾಜಿ ಶಾಸಕ ಕೆ.ಶರಣಪ್ಪ ಮತ್ತು ಹಾಲಿ ಶಾಸಕ ದೊಡ್ಡನಗೌಡ ಈಗ ದೋಸ್ತಿ ರಾಜಕಾರಣ ಶುರು ಮಾಡಿರುವುದೇ ಭಯ್ಯಾಪುರ್ ಹಿನ್ನಡೆಗೆ ಕಾರಣ ಎನ್ನಲಾಗುತ್ತಿದೆ. ಇನ್ನು ಗಂಗಾವತಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಗಟ್ಟಿಯಾಗಿ ತಳವೂರುವ ಸೂಚನೆ ಈ ಫಲಿತಾಂಶದಿಂದ ಕಂಡುಬಂದಿದೆ. ಈ ಕ್ಷೇತ್ರದಲ್ಲಿ ಮಾಜಿ ಸಂಸದ ಶಿವರಾಮೇಗೌಡರ ಪುತ್ರ ಶಿವರಾಜಗೌಡ ಗೆಲುವಿನ ಮೂಲಕ ಬಿಜೆಪಿಗೆ ಮೊದಲು ಗೆಲುವು ತಂದು ಕೊಟ್ಟಿದ್ದಾರು. ಮುಂಬರುವ ವಿಧಾನಸಭಾ ಚುನಾವಣೆಯ ಟಿಕೆಟ್ ಮೇಲೆ ಕಣ್ಣಿಟ್ಟಿರುವ ಮಾಜಿ ಶಾಸಕ ಪರಣ್ಣ ಮುನವಳ್ಳಿ, ಮಾಜಿ ಸಂಸದ ಎಸ್.ಶಿವರಾಮೇಗೌಡ ಹಾಗೂ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿಂಗನಾಳ ವಿರುಪಾಕ್ಷನ ನಡುವೆ ಸಣ್ಣಮಟ್ಟದ ಭಿನ್ನಾಭಿಪ್ರಾಯ ಇದ್ದರೂ ಅವರೆಲ್ಲ ಒಗ್ಗೂಡಿ ಕೆಲಸ ಮಾಡಿದ್ದರಿಂದಲೇ ಈ ಗೆಲುವು ಸಾಧ್ಯವಾಗಿರೋದು. ಕಾಂಗ್ರೆಸ್‌ನ ಮಾಜಿ ಶಾಸಕ ಎಚ್.ಆರ್.ಶ್ರೀನಾಥ್ ತನ್ನ ವೈಟ್‌ಹೌಸ್ ಅರಮನೆಯಿಂದ ಹೊರಬಂದು ಬಿಸಿಲಿನಲ್ಲೂ ಕಾಂಗ್ರೆಸ್ ಬೆಂಬಲಿಗರ ಗೆಲುವಿಗೆ ಸುಖತ್ ಶ್ರಮ ಹಾಕಿದರೂ ಅದು ಸಾರ್ಥಕವಾಗಲಿಲ್ಲ. ಇಲ್ಲಿ ಜೆಡಿಎಸ್‌ನಿಂದ ಅಮಾನತ್ತಾಗಿರುವ ಹಾಲಿ ಶಾಸಕ ಇಕ್ಬಾಲ್ ಅನ್ಸಾರಿ ತನ್ನ ಬೆಂಬಲಿತ ಅಭ್ಯರ್ಥಿಗಳನ್ನು ಹಾಕದೆ ಕಾಂಗ್ರೆಸ್ ಅಭ್ಯರ್ಥಿಗ[ಳಿಗೆ] ಬೆಂಬಲ ಸೂಚಿಸಿದರೂ ಇಲ್ಲಿ ಬಿಜೆಪಿ ಗೆಲುವಿಗೆ ಬ್ರೇ[ಕ್] ಹಾಕಲು ಸಾಧ್ಯವಾಗಿಲ್ಲ.

ಕನಗಿರಿ ಕ್ಷೇತ್ರದಲ್ಲಿ ಕಾರಟಗಿ ಮತ್ತ ಕನಕಗಿರಿ ಎರ[ಡು] ಎಪಿಎಂಸಿಗಳು ಬರುತ್ತವೆ. ಹಾಲಿ ಕಾಂಗ್ರೆಸ್ ಶಾಸಕ ಶಿವ[ರಾಜ್] ತಂಗಡಗಿಯ ಕಾರುಬಾರಿನಲ್ಲಿ ಈ ಎರಡೂ ಎಪಿಎಂಸಿಗ[ಳಲ್ಲಿ] ಕಾಂಗ್ರೆಸ್ ಮಕಾಡೆ ಮಲಗಿದೆ. ಹಿಂದೆ ಬಿಜೆಪಿಯಲ್ಲಿ ಇದ[್ದು] ಸಚಿವನಾಗಿದ್ದ ಮತ್ತು ಕಾಂಗ್ರೆಸ್‌ಗೆ ಹೋದ ಮೇಲ[ೂ] ಸಚಿವಗಿರಿ ಲಪಟಾಯಿಸಿಕೊಂಡಿದ್ದ ಶಿವರಾಜ್ ತಂಗಡ[ಗಿ] ಇತ್ತೀಚೆಗೆ ನಡೆದ ತಾ.ಪಂ, ಜಿ.ಪಂ ಚುನಾವಣೆಗಳಲ್ಲಿ ಕನಕ[ಗಿರಿ,] ಕಾರಟಗಿ ಕ್ಷೇತ್ರಗಳಲ್ಲಿ ಬೆಂಬಲಿತ ಅಭ್ಯರ್ಥಿಗಳ[ನ್ನು] ಗೆಲ್ಲಿಸಿಕೊಂಡು ಮೀಸೆ ತಿರವಿದ್ದ. ಆದರದು ಎಪಿಎಂ[ಸಿ] ಎಲೆಕ್ಷನ್‌ನಲ್ಲಿ ಪುನರಾವರ್ತನೆಯಾಗಿಲ್ಲ. ತಂಗಡ[ಗಿ] ವಾಸವಿರುವ ಕಾರಟಗಿ ಎಪಿಎಂಸಿಯಲ್ಲಿ 12 ಸ್ಥಾನಗಳ[ಿದ್ದು] ಅದರಲ್ಲಿ 05 ಕಾಂಗ್ರೆಸ್ ಬೆಂಬಲಿತರು ಗೆದ್ದರೆ ಇನ್ನು[ಳಿದ] 7 ಬಿಜೆಪಿ ಬೆಂಬಲಿಗರ ಪಾಲಾಗಿವೆ. ಕನಕ[ಗಿರಿ] ಎಪಿಎಂಸಿಯಲ್ಲಿ ಮೊದಲಿನಿಂದಲೂ ಕಾಂಗ್ರೆಸ್ ಬಿಟ[್ಟು] ಜನತಾದಳ ಅಧಿಕಾರಕ್ಕೆ ಬರುವುದು ವಾಡಿಕೆಯಾಗಿ[ತ್ತು.] ಆದರೆ ಈ ಚುನಾವಣೆಯಲ್ಲಿ ಬಿಜೆಪಿ ತನ್ನ ಬಾವ[ುಟ] ಹಾರಿಸುವ ಮೂಲಕ ತಂಗಡಗಿಗೆ ಎಚ್ಚರಿಕೆಯ ಸಂದ[ೇಶ] ರವಾನಿಸಿದೆ. ತಂಗಡಗಿ ವಿರುದ್ಧ 2013ರ ಚುನಾವಣೆಯ[ಲ್ಲಿ] ಕೆಜೆಪಿ ಪಕ್ಷದಿಂದ ಸೋತು ಸುಣ್ಣವಾಗಿದ್ದ ಬಸವ[ರಾಜ] ದಢೇ ಸೂಗೂರು ಬಿಜೆಪಿಗೆ ಬಲ ತುಂಬಿದ್ದಾನೆ.


■ ಸ.ಶರಣಪ್ಪ ಪಾಟೀಲ್ ಕರಮು[ಡಿ]

ಎಡಬಲ ಬಿಟ್ಟು ನಡು ಹಿಡಿದರೆ ಹಿತವಂತೆ!

ರವೀಂದ್ರ ಕಲಾಕ್ಷೇತ್ರಕ್ಕೆ ತಿರುಗಿ ನೋಡುವುದರಲ್ಲಿ 50 ವರ್ಷ ತುಂಬಿದೆ. ಈ ಅರ್ಧ ಶತಮಾನದಲ್ಲಿ ಅದರ ವೈಭವದ ಇತಿಹಾಸಕ್ಕೆ ಕಾರಣರಾದ ತರುಣರೆಲ್ಲಾ ಇಂದು ವೃದ್ಧರು. ಆದರೂ ತರುಣ ಮನಸ್ಸಿನವರಾದ ಅವರೆಲ್ಲಾ ತಲೆ ಕೂದಲನ್ನು ಡೈ ಮಾಡಿಕೊಂಡೊ ಇಲ್ಲ ಹಾಗೇ ಬಿಟ್ಟುಕೊಂಡೊ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಓಡಾಡುವುದನ್ನು ನೋಡುವುದೇ ಚೆಂದ. ಅವರಲ್ಲಿ ಒಬ್ಬರು ಕಪ್ಪಣ್ಣ. ಇದು ರವೀಂದ್ರ ಕಲಾಕ್ಷೇತ್ರದ ಕಲಾವಿದರು ಇಟ್ಟ ಹೆಸರು. ಅವರ ತಂದೆತಾಯಿ ಇಟ್ಟ ಹೆಸರು ಶ್ರೀನಿವಾಸ. ಈ ಕಪ್ಪಣ್ಣ ಕಾರ್ಯಕ್ರಮಗಳ ಕಲಸುಮೇಲೋಗರ ಮಾಡುವುದರಲ್ಲಿ ಎತ್ತಿದ್ದ ಕೈ. ಆದಕಾರಣವೇ ಕಡೆಯ ದಿನ. ಅಂದರೆ 50 ವರ್ಷದ ಕಾರ್ಯಕ್ರಮಗಳ ಕಡೆಯ ದಿನ, ಪ್ರಸ್ತುತ ನಾಡಿನ ಸಾಹಿತಿಗಳ ನಾಲಿಗೆಗೆ ಕೆಲಸ ಕೊಟ್ಟಿರುವ ಎಡಪಂಥ ಮತ್ತು ಬಲಪಂಥ ಬಿಟ್ಟು ನಡು ಹಿಡಿದರೆ ಹೇಗೆ ಎಂಬ ಗಿರಡ್ಡಿಯವರ ಸಮನ್ವಯ ಸೂತ್ರದ ಚರ್ಚೆಗೂ ಅವಕಾಶ ಕೊಟ್ಟ ಕಪ್ಪಣ್ಣ ವೀಣಾ ಬನ್ನಂಜೆಯನ್ನೂ ಕರೆಸಿದ್ದರಂತಲ್ಲಾ, ಥೂತ್ತೇರಿ!

* * *

ವೀಣಾ ಬನ್ನಂಜೆ ಮಾತನಾಡುತ್ತಿದ್ದರೆ ಬನ್ನಂಜೆ ಗೋವಿಂದಾಚಾರ್ಯರ ಮುಂದುವರಿಕೆಯಾಗಿಯೂ ಕೇಳುತ್ತದೆ. ಒಂದು ರೀತಿ ಹೆಣ್ಣು ದನಿಯಾಗಿಯೂ ಕೇಳುತ್ತದೆ. ಆದರೂ ಮಾತಿನ ಮೂಲಗಳೆಲ್ಲಾ ಒಂದೇ. ಅಂತರ್ಜಾತಿ ವಿವಾಹದಿಂದ ಜಾತಿ ಹೋಗಲಿಲ್ಲ, ಹೋಗಲಾರದು ಎಂಬ ಅದ್ಭುತ ಸತ್ಯವನ್ನು ಸಂಶೋಧಿಸಿ ಹೇಳಿದ ವೀಣಾ ಮಾತಿಗೆ ಪುರೋಹಿತರ ಪಿಂಡಗಳು ಆಹ್ಲಾದಮಾನವಾದ ಸಂಗತಿ ಕೇಳಿದಂತೆ ಆಹುದಹುದು ಎಂದಿರಬಹುದು. ಆದರೆ ಅಂತರ್ಜಾತಿ ಮತ್ತು ಪ್ರೇಮ ವಿವಾಹವಾಗುವವರ್ಯಾರು ಈ ಜಾತಿಗಳನ್ನು ತೊಲಗಿಸಬೇಕು ಎಂದು ಸೊಂಟಕಟ್ಟಿ



ಆದವರಲ್ಲ, ಅದು ತಾರುಣ್ಯದ ಉಮೇದು, ಉತ್ಸಾಹ ಮತ್ತು ಪ್ರೇಮ ತುಂಬಿದ ಅಮಲಿನಲ್ಲಿ ನಡೆಯುವ ಸಹಜ ಘಟನೆಯಷ್ಟೆ. ಆದರದು ಜಾತಿಪಾತಿಯಲ್ಲೇ ಸಾವಿರಾರು ವರ್ಷ ಬದುಕಿದ್ದ ಈ ಧರ್ಮಕ್ಕೆ ಅಥವ ಜಾತಿಗಳಿಗೆ ಕೊಡುವ ಒಂದು ಆರೋಗ್ಯಕರ ಟಾನಿಕ್. ಪ್ರಗತಿಪಥಕ್ಕೆ ಒಂದು ಹೆಜ್ಜೆ. ಅಂತರ್ಜಾತಿಯವರನ್ನು, ಯಾವ ಜಾತಿ ಬಲಿಷ್ಠವೊ ಅದು ಅರಗಿಸಿಕೊಳ್ಳುತ್ತದೆ. ಇಂತಿರುವಾಗ ಇದರಿಂದ ಜಾತಿ ಹೋಗಲಿಲ್ಲ ಎಂದು ಅಪ್ಪಣೆ ಕೊಡಿಸುವುದು ಮಹಾ ಮೂರ್ಖತನವಂತಲ್ಲಾ, ಥೂತ್ತೇರಿ!!

* * *

ಇನ್ನ ಸದಾ ಕೃಷ್ಣನ ಗುಂಗಿನಲ್ಲಿರುವ ವೀಣಾ ಒಂದು ಒಳ್ಳೆಯ ಮಾತನಾಡಿದ್ದಾರೆ. ದಿನ ಬೆಳಗಾಯ್ತೆಂದರೆ ರೇಪಿನ ಸುದ್ದಿಯಿಂದ ರೇಜಿಗೆಯಾಗಿರುವಾಗ ಒಂದು ವೇಳೆ ಮಹಿಳೆ ಮೇಲೆ ದೌರ್ಜನ್ಯ ಅಥವ ರೇಪ್ ನಡೆಯುತ್ತಿದ್ದರೆ ತಡೆಯುವ ಬದಲು ಅಥವ ತಡೆಯಲು ಸಾಧ್ಯವಿಲ್ಲ ಎಂದಾದರೆ "ಬಾ ನನ್ನನ್ನ ರೇಪ್ ಮಾಡು ಎಂದು ರೇಪಿಸ್ಟ್‌ನ್ನ ಆಹ್ವಾನಿಸುತ್ತೇನೆ" ಎಂದು ಹೇಳಿದಾಗ ನಿಜಕ್ಕೂ ಕೇಳುಗರು ಬೆಚ್ಚಿ ಕೂತರು. ಇನ್ನ ರವೀಂದ್ರ ಕಲಾಕ್ಷೇತ್ರದ ಸುತ್ತ ಕತ್ತಲಾದರೂ ಅಡ್ಡಾಡುವ ಕೆಲವು ಕಲಾನಿಧಿಗಳು "ಆಹಾ ಅಂತಹ ಸುವರ್ಣಾವಕಾಶ ನಮ್ಮ ಪಾಲಿಗೆ ಅದೆಂದು ಬರುವುದೋ ಕಾಣೆ" ಎಂದು ಹಲುಬಿದವಂತಲ್ಲಾ, ಥೂತ್ತೇರಿ!!

* * *

ಇಂದಿರಾಗಾಂಧಿ ತಂದಿದ್ದ ತುರ್ತುಪರಿಸ್ಥಿತಿ ಅವಧಿಯಲ್ಲಿ ಪತ್ರಿಕಾ ಸೆನ್ಸಾರ್‌ಶಿಪ್ ಜಾರಿಯಲ್ಲಿತ್ತು, ಪತ್ರಿಕಾಲಯದಲ್ಲೇ ಇದ್ದ ಅಧಿಕಾರಿ ಸರಕಾರದ ವಿರುದ್ಧ ಇದ್ದ ವರದಿಗಳು ಮತ್ತು ಪದಗಳನ್ನು ಸೆನ್ಸಾರ್ ಮಾಡುತ್ತಿದ್ದ. ಆ ನಂತರ ಪತ್ರಿಕೆಗಳು ಪ್ರಿಂಟಿಂಗ್ ಪಡೆದು ಸಾರ್ವಜನಿಕರಿಗೆ ತಲುಪುತ್ತಿದ್ದವು. ಆದರೆ, ಈ ಮೋದಿ ಕಾಲದಲ್ಲಿ ಪತ್ರಿಕೆಗಳು ತಮಗೆ ತಾವೇ ಸೆನ್ಸಾರ್‌ಶಿಪ್ ಅಳವಡಿಸಿಕೊಂಡಿವೆಯಂತಲ್ಲಾ, ಉದಾಹರಣೆಗೆ ಮೋದಿ ನೋಟು ಬ್ಯಾನಿನಿಂದ ಮಾಡಿಕೊಂಡಿರುವ ಎಡವಟ್ಟನ್ನು ಟೀಕಿಸಿದ ಯಾವ ಅರ್ಥಶಾಸ್ತ್ರಜ್ಞನ ಮಾತುಗಳೂ ಮೋದಿ ಮಲದಲ್ಲಿ ಬಿದ್ದು ಹೊರಳಾಡುವ ಪತ್ರಿಕೆಗಳಲ್ಲಿ ಬರುವುದಿಲ್ಲ. ಬಂದರೂ ಸದರಿ ಹೇಳಿಕೆಯನ್ನೇ ಮೆಚ್ಚುಗೆ ವಾಕ್ಯ ಮಾಡಿ ಪ್ರಕಟಿಸುತ್ತವೆ. ಇನ್ನ ಕರ್ನಾಟಕದ ವಿಆರ್‌ಎಲ್ ಕಸದ ತೊಟ್ಟಿಯಂತೂ ಮೋದಿ ಆರಾಧನೆಯ ತಿಪ್ಪೆಗುಂಡಿಯ ಮೊದಲ ಸ್ಥಾನದಲ್ಲಿದೆಯಂತಲ್ಲಾ. ಆದರೇನು ಕರ್ನಾಟಕದ ಪ್ರಜ್ಞಾವಂತ ಓದುಗರು ಇವನ್ನೆಲ್ಲಾ ಗುರುತಿಸಿ ನಗುತ್ತಿರುವುದೇ ಪತ್ರಿಕೆಗಳಿಗೆ ಗೊತ್ತಿಲ್ಲವಂತಲ್ಲಾ, ಥೂತ್ತೇರಿ!!!


ಥೂತ್ತೇರಿ

▶ ಯಾಹೂ

* * *

ಕರ್ನಾಟಕದಲ್ಲಿ ಯಡಿಯೂರಪ್ಪ ಮತ್ತು ಈಶ್ವ[ರಪ್ಪ] ಎಂಬ ರಪ್ಪಗಳ ರಂಪಾಟ ತಾರಕಕ್ಕೇರಿದೆಯಂತ[ಲ್ಲಾ] ಇದೊಂದು ರೀತಿ ಹರಿಯಲಾರದ ಮುರಿಯಲಾರದ ಜ[...] ಇತ್ತ ಈ ದೊಡ್ಡಾಟದ ಪರದೆ ಹಿಂದಿರುವ ಚಡ್ಡಿಗ[ಳು] ಅನಂತವಾಗಿ ಯೋಚಿಸುತ್ತಿರುವಾಗಲೇ, ಅತ್ತ ಭಾನುಪ್ರಕಾ[ಶ್] ಎಂಬ ಕೂಲಿಗಾಗಿ ಕಾಳಿನ ಯಾಚಕ ಮಹಾಶಯ[...] ಬರೋಬ್ಬರಿ ಎರಡು ಡಜನ್ ಶಾಸಕರ ಸಹಿ ಪಡೆ[ದು] ಯಡಿಯೂರಪ್ಪನ ಹೆಡೆಮುರಿ ಕಟ್ಟಲು ಸಂ[ಚು] ರೂಪಿಸಿದ್ದಾರಂತಲ್ಲಾ. ಚಡ್ಡಿ ವಲಯದಲ್ಲಿ ಯಡಿಯೂರ[ಪ್ಪನ] ಬಗ್ಗೆ ಇರುವ ಗುಮಾನಿ ಯಾವುದೆಂದರೆ, "[...] ಯಡಿಯೂರಪ್ಪ ಪಾರ್ಟಿ ಬಿಟ್ಟು ಹೋಗಿ ಇನ್ನೆಂದೂ [...] ಕಡೆ ತಿರುಗಿಯೂ ನೋಡುವುದಿಲ್ಲ ಎಂದು ನಾ[...] ಕಳಿಸಿಕೊಟ್ಟೋ. ಅವತ್ತು ಶೋಭಾ ಜೊತೆ ಹೋಗಿದ್ದ[...] ಈಗ ಆಕೆಯ ಸಮೇತ ಒಳಬಂದು ಕೂತಿದ್ದಾರೆ. ಆ[...] ನಮ್ಮ ಈಶ್ವರಪ್ಪ ಎಂದೂ ಎಲ್ಲೂ ಹೋಗುವುದಿಲ್ಲ, ಸಾ[...] ನಾಯಿ ತನ್ನ ಮನೆ ಸರಹದ್ದು ಬಿಟ್ಟು ಎ[ಲ್ಲೂ] ಹೋಗುವುದಿಲ್ಲ. ಸತ್ತರೂ ಮನೆಬಾಗಿಲಲ್ಲೇ ಸಾಯುತ್[ತೆ.] ಅದೂ ನಾವು ಹಾಕಿದ ಚೆಲ್ಲಿನ ಸಮೇತ. ಇಂತಹ ಈಶ್ವರ[ಪ್ಪನ] ಪರ ನಾವೆಲ್ಲಾ ನಿಲ್ಲಬೇಕು" ಎಂದು ತೀರ್ಮಾನಿಸಿದ ಫಲ[...] ಯಡ್ಡಿ-ಈಶ್ವರಿ ಬಣದ ಮಾರಾಮಾರಿ[ಗೆ] ಕಾರಣವಾಗಿದೆಯಂತಲ್ಲಾ, ಥೂತ್ತೇರಿ!!

ಚಿತ್ರದುರ್ಗ: ತಿಪ್ಪಾರೆಡ್ಡಿ ಸೀಟಿಗೆ ಸಿದ್ದೇಶ್ವರನ ಟವೆಲ್ಲು!



ತಿಪ್ಪಾರೆಡ್ಡಿ

2018ರ ಎಂಎಲ್ಎ ಎಲೆಕ್ಷನ್ ಸಮೀಪಿಸಿದಂತೆಲ್ಲಾ ...ರ್ಗ ವಿಧಾನಸಭಾ ಕ್ಷೇತ್ರದ ರಾಜಕೀಯ ಹಾದಿ ...ಕು-ಮಸುಕಾಗುತ್ತಿದೆ. ಇಲ್ಲಿ ಹಣಾಹಣಿ ಅಂತೇನಾದರು ... ಅದು ಬಿಜೆಪಿ-ಕಾಂಗ್ರೆಸ್ ನಡುವೆಯೇ. ಇಲ್ಲಿ ...ಎಸ್‌ನದ್ದು ಗೆಲ್ಲುವ ಲೆಕ್ಕಾಚಾರಕ್ಕಿಂತ ಸೋಲಿಸುವ ...ಚಾರದಲ್ಲೇ ಲಾಭ ಕಂಡುಕೊಳ್ಳುವ ಕಾಯಕ. ಆದರೆ ... ಪರಿಸ್ಥಿತಿಯಲ್ಲಿ ಬಿಜೆಪಿ, ಕಾಂಗ್ರೆಸ್ ಎರಡರಲ್ಲೂ ...ಕೀಯ ಅಸ್ಪಷ್ಟತೆ, ಅವಿಶ್ವಾಸಗಳೇ ತಾಂಡವವಾಡುತ್ತಿದ್ದು ...ರ್ಗದ ಮತದಾರನ ಕುತೂಹಲವನ್ನು ಇನ್ನಿಲ್ಲದಂತೆ ...ತ್ತಿವೆ.


...ಚಿತ್ರದುರ್ಗ ಮತಕ್ಷೇತ್ರಕ್ಕೆ ಬಿಜೆಪಿಯ ತಿಪ್ಪಾರೆಡ್ಡಿಯೇ ... ಶಾಸಕ. ಆದರೆ ಅದ್ಯಾಕೋ ತಿಪ್ಪಾರೆಡ್ಡಿ ಪಾರ್ಟಿ ...ಕಾರಣದಲ್ಲಿ ಆಸಕ್ತಿಯನ್ನೇ ಕಳೆದುಕೊಂಡವನಂತೆ ...ಸುತ್ತಿದ್ದಾನೆ. 2013ರ ಚುನಾವಣೆಯಲ್ಲಿ ಗೆದ್ದುಬಂದ ...ತಿಂಗಳ ತನಕ ಮಾತ್ರ ಬಿಜೆಪಿ ಶಾಸಕನಂತಿದ್ದ ತಿಪ್ಪಾರೆಡ್ಡಿ, ...ರದ ದಿನಗಳಲ್ಲಿ ಪಾರ್ಟಿ ರಾಜಕಾರಣದಿಂದ ...ಾಗಿದ್ದಲ್ಲದೆ, ಪಕ್ಷೇತರ ಶಾಸಕನಂತೆ ವರ್ತಿಸುತ್ತಿದ್ದಾನೆ. ...ಮಾಸು ಮೂರು ವರ್ಷದಿಂದ ತಿಪ್ಪಾರೆಡ್ಡಿ ಬಿಜೆಪಿ ...ಕಾರಣದ ಮೊಗಸಾಲೆಯಲ್ಲಿ ಮುಖ ತೋರಿಸಿಲ್ಲ. ... ಯಡ್ಡಿ ಬರ ಅಧ್ಯಯನದ ನೆಪದಲ್ಲಿ ಚಿತ್ರದುರ್ಗಕ್ಕೆ ...ಾಗ ವೇದಿಕೆ ಹಂಚಿಕೊಂಡದ್ದು ಬಿಟ್ಟರೆ ತಿಪ್ಪಾರೆಡ್ಡಿ ...ದ ಪಾರ್ಟಿಯವ ಅಂತ ಕೇಳುವ ಪರಿಸ್ಥಿತಿ ...ರ್ಣವಾಗಿದೆ. ತಿಪ್ಪಾರೆಡ್ಡಿ ಬಿಜೆಪಿ ರಾಕಾರಣದಲ್ಲಿ ...ಂದು ನಿರಾಸಕ್ತನಾಗಲು ಪ್ರಮುಖವಾಗಿ ಎರಡು ...ಗಳಿವೆ.

...ಮೊದಲನೆಯದಾಗಿ, ಚಿತ್ರದುರ್ಗ ಬಿಜೆಪಿ ನಾಯಕತ್ವ ... ಇತ್ತೀಚಿಗೆ ಜಾತಿ ರಾಜಕಾರಣ ಕಲಾಯಿಸುತ್ತಿದೆ. ... ರಾಜ್ಯಾಧಿಪತಿ ಯಡ್ಡಿ ಸದ್ಯದ ಪರಿಸ್ಥಿತಿಯಲ್ಲಿ ...ತಿಯ ನಾಯಕರನ್ನು ನಂಬುವ ಸ್ಥಿತಿಯಲ್ಲಿಲ್ಲ. ಅದು ...ರ್ಗಕ್ಕೂ ಅನ್ವಯಿಸುತ್ತದೆ. ಹಾಗಾಗಿ ತನ್ನ ...ಂಬಂಧಿ, ಕಳೆದ ಚುನಾವಣೆಯಲ್ಲಿ ಹೊಸದುರ್ಗದಿಂದ ... ಸೋತಿದ್ದ ನವೀನ್ ಎಂಬ ಎಳಸು ಹುಡುಗನ ...ಚಿತ್ರದುರ್ಗ ಜಿಲ್ಲಾ ಬಿಜೆಪಿ ರಾಜಕಾರಣದ ಚುಕ್ಕಾಣಿ ... ಯಡ್ಡಿ ರಾಜಕೀಯ ಗೇಮು ಶುರುಹಚ್ಚಿಕೊಂಡಿದ್ದಾನೆ. ...ಯ ಸೀನಿಯಾರಿಟಿ ಸರದಿಯಲ್ಲಿ ನಿಂತಿರುವ ...ಡ್ಡಿಗೆ ಇದು ಇಷ್ಟವಾಗದ ಕಾರಣ ಆತ ಬಿಜೆಪಿಯಿಂದ ...ಂದೇ ಹೆಜ್ಜೆ ಹಿಂದೆ ಸರಿಯುತ್ತಿದ್ದಾನೆ.


ಸಿದ್ದೇಶ್ವರನ ಹಗಲುಗನಸು

...ನ್ನು ತಿಪ್ಪಾರೆಡ್ಡಿಯ ಕಮಲ ನಿರಾಸಕ್ತಿಯ ಎರಡನೇ ...ವೆಂದರೆ ಅದು ದಾವಣಗೆರೆ ಪಾರ್ಲಿಮೆಂಟ್ ...ರು ಸಿದ್ದೇಶ್ವರ. ಎಂಪಿಯಾಗಿ, ಮೋದಿ ಪಟಾಲಮ್ಮಿನಲ್ಲಿ ... ಮಂತ್ರಿಯಾದರೂ ರಾಷ್ಟ್ರರಾಜಕಾರಣದಲ್ಲಿ ತನಗೆ ...ಲ್ಲ ಅನ್ನೋದು ಸಿದ್ದೇಶ್ವರ್‌ಗೆ ಮನದಟ್ಟಾಗಿ ಹೋಗಿದೆ. ...ಗಿ ಯಡ್ಡಿ ಕೃಪಾಶೀರ್ವಾದದಲ್ಲಿ ರಾಜ್ಯ ...ರಣದಲ್ಲೇ ಮಿಂಚಲು ಆತ ಕಸರತ್ತು ನಡೆಸುತ್ತಿದ್ದಾನೆ. ...ಂದು ವೇಳೆ ಪಾರ್ಲಿಮೆಂಟ್ ರಾಜಕಾರಣದಿಂದ ...ಂದು ರಾಜ್ಯ ರಾಜಕಾರಣಕ್ಕೆ ಬರುವುದಾದರೆ ಒಂದು ...ಸಭಾ ಕ್ಷೇತ್ರ ಬೇಕಲ್ಲವೇ? ಅದಕ್ಕೋಸ್ಕರ ಸಿದ್ದೇಶ್ವರ ...ಹಾಕಿರೋದು ತಿಪ್ಪಾರೆಡ್ಡಿಯ ಚಿತ್ರದುರ್ಗದ ಮೇಲೆ. ...ದನ್ನು ಎರಡು ಬಾರಿ ದಾವಣಗೆರೆ ಎಂಪಿ ಮಾಡಿದ್ದು ...ಗೆರೆ ಜಿಲ್ಲೆಯ ಗ್ರಾಮಾಂತರ ಮತಗಳೇ ಹೊರತು ...ರು ಫ್ಯಾಮಿಲಿಯ ಕೈಯಲ್ಲಿ ಬಂದಿಯಾಗಿರೋ ...ಗೆರೆ ಸಿಟಿಯ ಜನರಲ್ಲ. ಅಲ್ಲದೇ, ದಾವಣಗೆರೆಯೊಳಗೆ ...ರವೀಂದ್ರನಾಥನಂತಹ ಕಟ್ಟಾ ಆರೆಸ್ಸೆಸ್ಸಿಗ ...ವಾಲಾಸ ದುಶ್ಮನಿಯನ್ನೂ ಕಟ್ಟಿಕೊಂಡಿರುವ ಸಿದ್ದೇಶ್ವರ ...ಗೆರೆಯ ಯಾವ ವಿಧಾನಸಭಾ ಕ್ಷೇತ್ರದಲ್ಲಿ ನಿಂತರೂ ... ಖಾತರಿ. ಹಾಗಾಗಿಯೇ ಆತ ದಾವಣಗೆರೆಯ ...ನ್ನಿ ಬಿಟ್ಟು ತಮ್ಮ ಮೂಲ ನೆಲೆಯ ಚಿತ್ರದುರ್ಗದತ್ತ ...ಸಿದ್ದಾನೆ.


ಸಿದ್ದೇಶ್ವರ್ ಹೀಗೆ ರಾಜ್ಯ ರಾಜಕಾರಣದ ಮೇಲೆ ಕಣ್ಣು ಹಾಕುವುದಕ್ಕೆ ಒಂದು ಕಾರಣವುಂಟು. ಅದು ಸಿಎಂ ಗಾದಿಗೇರುವ ಆತನ ಹಗಲುಗನಸು. ಹೌದು, ಇದು ಅಚ್ಚರಿಯಾದರು ಆತನ ಆಪ್ತ ಮೂಲಗಳೇ ಹೊರಗೆಡವಿದ ಸುಳಿವು. ಸಿದ್ದರಾಮಯ್ಯನ ಕಾಂಗ್ರೆಸ್ ಸರ್ಕಾರದ ಬಗ್ಗೆ ಜನ ಆಸಕ್ತಿ ಕಳೆದುಕೊಂಡಿದ್ದಾರೆ, ಕೆಜೆಪಿ-ಬಿಎಸ್‌ಆರ್‌ಗಳು ಒಟ್ಟುಗೂಡಿ ಯಡ್ಡಿಯೇ ಕಮಲದ ಚುಕ್ಕಾಣಿ ಹಿಡಿದಿರುವುದರಿಂದ 2018ರ ಚುನಾವಣೆಯಲ್ಲಿ ಬಿಜೆಪಿ ಪರ ಅಲೆಯೆದ್ದು ಕೇಸರಿ ಸರ್ಕಾರ ಅಧಿಕಾರಕ್ಕೆ ಬರೋದು ಗ್ಯಾರಂಟಿ ಅನ್ನೋ ಲೆಕ್ಕಾಚಾರದಲ್ಲಿರುವ ಸಿದ್ದೇಶ್ವರನಿಗೆ ಬಿಜೆಪಿ ಸರ್ಕಾರ ರಚನೆಯಾದರೂ ಯಡ್ಡಿ ಮುಖ್ಯಮಂತ್ರಿಯಾಗುವ ಬಗ್ಗೆ ಅನುಮಾನವಿದೆ. ಯಾಕೆಂದರೆ ಈಗಾಗಲೇ ಬಿಜೆಪಿಯೊಳಗೆ ಯಡ್ಯೂರಪ್ಪ ಸೃಷ್ಟಿಸಿಕೊಂಡಿರುವ ವಿರೋಧಿ ಪಡೆಯ ಜೊತೆಗೆ ಅವನ ವಯಸ್ಸೂ ಅಡ್ಡಬಂದು



ಆಂಜನೇಯ



ಸುಧಾಕರ್



ರಾಷ್ಟ್ರಮಟ್ಟದಲ್ಲಿ ಅಡ್ವಾನಿಗಾದ ಗತಿಯೇ ಯಡ್ಡಿಗೂ ಆಗಲಿದೆ ಅಂತ ಗುಣಾಕಾರ ಮಾಡಿರುವ ಸಿದ್ದೇಶ್ವರ, ಒಂದುವೇಳೆ ಯಡ್ಡಿ ಹಠ ಹಿಡಿದು ಮುಖ್ಯಮಂತ್ರಿಯಾದರೂ ಹೆಚ್ಚೆಂದರೆ ಒಂದು ವರ್ಷವಷ್ಟೇ ಆತನ ದರ್ಬಾರು ಅಂತ ಪಂಚಾಂಗ ಹೆಣೆದಿದ್ದಾನೆ. ಯಡ್ಡಿ ಗಾದಿಯಿಂದ ಇಳಿದರೆ ಮುಂದ್ಯಾರು ಅನ್ನೋ ಪ್ರಶ್ನೆ ಬಂದಾಗ ಲಿಂಗಾಯತರ ಕೋಟಾದಡಿ, ತಮ್ಮ ಬಾಲದಂತಿರುವ ತನ್ನನ್ನೇ ಮುಖ್ಯಮಂತ್ರಿ ಗಾದಿಗೆ ಯಡ್ಡಿ ಕೂರಿಸಲಿದ್ದಾರೆ ಅಂತ ಹಗಲುಗನಸಿನಲ್ಲಿರೋ ಸಿದ್ದೇಶ್ವರ 'ಮಿಲೇನಿಯಂ' (?) ಮೋದಿ ಸರ್ಕಾರದ ಹಂಗುಬಿಟ್ಟು ರಾಜ್ಯ ರಾಜಕಾರಣಕ್ಕೆ ಹಾತೊರೆಯುತ್ತಿದ್ದಾನೆ.

ಒಂದುವೇಳೆ, ಶಾಮನೂರು ಖಾನಂದಾನ್ ವಿರುದ್ಧ ದಾವಣಗೆರೆ ಎಂಪಿ ಕಾಳಗದಲ್ಲಿ ಸ್ಪರ್ಧಿಸಿ ಗೆಲ್ಲಲು ಸಿದ್ದೇಶ್ವರ್‌ಗಿಂತ ಗಟ್ಟಿ ಕುಳ ಸಿಗುವುದಿಲ್ಲ ಅನ್ನೋ ಕಾರಣಕ್ಕೆ ಆತನನ್ನು ಎಂಪಿ ಕಣದಿಂದ ಬಿಟ್ಟುಕಳಿಸಲು ಬಿಜೆಪಿ ವರಿಷ್ಠರು ತಲೆ ಅಡ್ಡಡ್ಡ ಆಡಿಸಿದರೆ, ಆಗ ತನಗೆ ಟಿಕೆಟ್ ಕೊಡದಿದ್ದರು ಪರವಾಗಿಲ್ಲ ತನ್ನ ಮಗ ಅಮಿತ್‌ಗೆ ಚಿತ್ರದುರ್ಗದ ಟಿಕೆಟ್ ಕೊಡಿ ಅಂತ ದುಂಬಾಲು ಬೀಳುವ ಸಾಧ್ಯತೆಗಳು ದಟ್ಟವಾಗಿವೆ. ಸಿದ್ದೇಶ್ವರನ ಈ ಫ್ಯಾಮಿಲಿ ಡ್ರಾಮಾದ ಸುಳಿವು ಸಿಕ್ಕಿರೋದರಿಂದಲೇ ತಿಪ್ಪಾರೆಡ್ಡಿ ಬಿಜೆಪಿ ಪಾಳಯಕ್ಕೆ ಬೆನ್ನು ಮಾಡಿದ್ದಾನೆ ಎನ್ನಲಾಗುತ್ತಿದೆ.


ತಿಪ್ಪಾರೆಡ್ಡಿಯ ಹಾದಿ ಎತ್ತ?

ಬಂದವರಿಗೆಲ್ಲ ದಾರಿಕೊಟ್ಟು ಜೋಳಿಗೆ ಹಿಡಿದುಹೋಗಲು ತಿಪ್ಪಾರೆಡ್ಡಿಯೇನು ಮಠದ ಜಂಗಮನಲ್ಲ. ಅಣ್ಣ ಅಶ್ವತ್ಥರೆಡ್ಡಿಯ ಕಾಲದಿಂದಲೂ ಅಧಿಕಾರ ರುಚಿಕಂಡ ತಿಪ್ಪಾರೆಡ್ಡಿ, ಸಿದ್ದೇಶ್ವರ್‌ಗೆ ಕ್ಷೇತ್ರಕೊಟ್ಟು ಸುಮ್ಮನಿರಲಾರ ಅನ್ನೋದು ಎಲ್ಲರಿಗೂ ಗೊತ್ತು. ಅದೇ ಕಾರಣಕ್ಕೆ ಮುಂದೆ ತಿಪ್ಪಾರೆಡ್ಡಿಯ ನಡೆಗಳು ಏನಿರಬಹುದೆನ್ನುವ ಮೂರ್ನಾಲ್ಕು ಲೋಕಲ್ ಸಿದ್ಧಾಂತಗಳು ಚಿತ್ರದುರ್ಗದಲ್ಲಿ ಸದ್ಯ ಸದ್ದು ಮಾಡುತ್ತಿವೆ. ಅದರಲ್ಲಿ ಮೊದಲನೆಯದ್ದು, ಆತ ಕಾಂಗ್ರೆಸ್ ಸೇರಿಕೊಳ್ಳಲಿದ್ದಾನೆ ಅನ್ನೋ ವರ್ತಮಾನ.

ಕೈ ಪಾರ್ಟಿಯ ಜಿಲ್ಲಾ ನಾಯಕರು ಮತ್ತು ಬಿಜೆಪಿ ತಿಪ್ಪಾರೆಡ್ಡಿಯ ವರ್ತನೆಗಳು ಇದನ್ನು ಪುಷ್ಟೀಕರಿಸುತ್ತವೆ. ಈಗೀಗ ತಿಪ್ಪಾರೆಡ್ಡಿಯಾಗಲೀ, ಕೈ ನಾಯಕರಾಗಲಿ ರಾಜಕೀಯ ಕೆಸರೆರಚಾಟದಲ್ಲಿ ತೊಡಗಿಸಿಕೊಳ್ಳಲ್ಲ. ಅಲ್ಲದೇ ತಿಪ್ಪಾರೆಡ್ಡಿ ಒಂದು ಹೆಜ್ಜೆ ಮುಂದೆಹೋಗಿ ಕನಕ ಜಯಂತಿ ಸಮಾರಂಭದಲ್ಲಿ 'ಮುಖ್ಯಮಂತ್ರಿ ಸಿದ್ದರಾಮಯ್ಯ ಆಧುನಿಕ ದೇವರಾಜ ಅರಸು' ಅಂತ ಅಟ್ಟಕ್ಕೇರಿಸಿದ್ದು ಆತನ ಮುಂದಿನ ರಾಜಕೀಯ ನಡೆಯ ಮುನ್ಸೂಚಿ ಅಂತಲೇ ಅಂದಾಜಿಸಲಾಗುತ್ತಿದೆ. ಹಾಗೇನಾದರು ತಿಪ್ಪಾರೆಡ್ಡಿ ಕಾಂಗ್ರೆಸ್‌ಗೆ ಬಂದರೆ ಅಲ್ಲೂ ಆತನಿಗೆ ಪೂರಕವಾದ ವಾತಾವರಣವೇನೂ ಇಲ್ಲ.

ಈಗಾಗಲೇ ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ 2018ರ ವಿಧಾನಸಭಾ ಚುನಾವಣೆಗೆ ದುರ್ಗದ ಟಿಕೆಟು ಕೈವಶ ಮಾಡಿಕೊಳ್ಳಲು ಜಿಲ್ಲಾ ಉಸ್ತುವಾರಿ ಮಂತ್ರಿ ಆಂಜನೇಯರ ಮೇಲೆ ಇನ್ನಿಲ್ಲದ ಪ್ರಭಾವ ಬೀರಿದ್ದಾಳೆ. ಸ್ವತಃ ಸಚಿವರೇ ಆಶ್ವಾಸನೆಯನ್ನೂ ನೀಡಿದ್ದಾರೆ ಅನ್ನೋ ವದಂತಿಗಳಿವೆ. ಮತ್ತೊಂದು ಕಡೆ ಆಕೆಯ ಗಂಡ ಅನಿಸಿಕೊಂಡ ಬಸವರಾಜನ್ ಕೂಡ ತಾನೇ ಸ್ಪರ್ಧಿಸುವ ಇಂಗಿತ ಹೊರಹಾಕುತ್ತಿದ್ದಾನೆ. ಚಿತ್ರದುರ್ಗದ ಕೈ ಟಿಕೆಟ್ ಸಮರ ಗಂಡ-ಹೆಂಡಿರ ನಡುವೆಯೇ ತಂದಿಡುವ ಮಟ್ಟಕ್ಕೆ ತಲುಪಿರುವಾಗ ಅತಿಥಿ ನಟ ತಿಪ್ಪಾರೆಡ್ಡಿಗೆ ಅದು ಒಲಿಯುತ್ತಾ? ಅದೂಅಲ್ಲದೆ, ಮಾಸಲು ರಾಜಕಾರಣಿ ಭೀಮಸಮುದ್ರದ ಅಡಿಕೆ ಮಂಜುನಾಥ್ ಕೂಡಾ ಕಳೆದ ಸಲ ಸೋತಿದ್ದನ್ನು ಮರೆತವನಂತೆ ಮತ್ತೊಮ್ಮೆ ಟಿಕೆಟಿಗೆ ಯತ್ನಿಸುತ್ತಿದ್ದಾನೆ. ಜನ-ಒಡನಾಟದ ರಾಜಕಾರಣದಿಂದ ಮಾರುದೂರವೇ ಕೂತ ತನ್ನ ಹಡಬೆ ಕಾಸು ಚೆಲ್ಲಿ ಓಟು ಖರೀದಿ ಮಾಡುವ ಭೀಮಸಮುದ್ರದ ಮಂಜನ ಬಗ್ಗೆ ಖುದ್ದು ಕೈ ಕಾರ್ಯಕರ್ತರಿಗೇ ಒಲವಿಲ್ಲ. ಜತೆಗೆ, ಮಂತ್ರಿ ಆಂಜನೇಯ ಜೊತೆಗಿನ ಅವನ ಸಖ್ಯ ಈ ಮೊದಲಿನಷ್ಟು ಅನ್ಯೋನ್ಯವಾಗೂ ಇಲ್ಲ. ಆದಾಗ್ಯೂ ಆತನ ಬಳಿಯಿರುವ ಕಾಸಿನ ಗಂಟು ಚಮತ್ಕಾರ ಮಾಡಿದರೂ ಅಚ್ಚರಿಯಿಲ್ಲ. ಇಂತ ಪೈಪೋಟಿಯಿರುವ ಕೈ ಪಾಳಯದಲ್ಲಿ ತಿಪ್ಪಾರೆಡ್ಡಿಗೇನು ಕೆಲಸ ಅನ್ನೋದು ಯಕ್ಷಪ್ರಶ್ನೆ.

ಮತ್ತೊಂದು ಪೊಲಿಟಿಕಲ್ ಥೀಸಿಸ್‌ನ ಪ್ರಕಾರ ತಿಪ್ಪಾರೆಡ್ಡಿ ಚಿತ್ರದುರ್ಗವನ್ನೇ ಬಿಟ್ಟು ಪಕ್ಕದ ಹಿರಿಯೂರಿನತ್ತ ಮುಖ ಮಾಡಲು ಸಜ್ಜಾಗಿದ್ದಾನಂತೆ. ಅಲ್ಲೂ ಸಹಾ ಅವನಿಗೆ ಟಿಕೆಟ್‌ನದ್ದೇ ಸಮಸ್ಯೆ ಎದುರಾಗಲಿದೆ. ಯಾಕೆಂದರೆ ಕಾಂಗ್ರೆಸ್‌ನ ಹಾಲಿ ಶಾಸಕ ಸುಧಾಕರ್‌ನಿಂದ ಟಿಕೇಟು ಕಿತ್ತುಕೊಳ್ಳೋದು ಸುಲಭದ ಮಾತಲ್ಲ. ಹಾಗಾಗಿ ತಿಪ್ಪಾರೆಡ್ಡಿ ಅಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾನೆ ಎನ್ನಲಾಗುತ್ತಿದೆ.



ಸಿದ್ದೇಶ್ವರ್

ಪಕ್ಷೇತರ ಪೊಲಿಟಿಕ್ಸ್!

ಇನ್ನು ಮುಗದೊಂದು ಸಿದ್ಧಾಂತವು ತಿಪ್ಪಾರೆಡ್ಡಿ ಕಾಂಗ್ರೆಸ್‌ಗೂ ಹೋಗದೆ, ಅತ್ತ ಹಿರಿಯೂರಿಗೂ ವಲಸೆ ಹೋಗದೆ ಚಿತ್ರದುರ್ಗದಲ್ಲೇ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾನೆ ಎನ್ನುತ್ತದೆ. ಹಾಗೆ ಪಾರ್ಟಿ ರಾಜಕಾರಣವನ್ನು ಧಿಕ್ಕರಿಸಿ ಸ್ವತಂತ್ರ ಅಭ್ಯರ್ಥಿಯಾಗಿ ನಿಲ್ಲಲು ಬೇಕಾದ ತಯಾರಿಗೆಲ್ಲ ತಿಪ್ಪಾರೆಡ್ಡಿ ಸ್ಕೆಚ್ಚು ಮಾಡಿಕೊಂಡಿದ್ದಾನಂತೆ. ರೆಡ್ಡಿ ತನ್ನ ಸ್ವತಂತ್ರ ಸಾಹಸಕ್ಕೆ ದಾಳವಾಗಿ ಬಳಸಿಕೊಳ್ಳೋದು ನಗರಸಭಾ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಹಮಾಲಿ ಕಾಂತನನ್ನು ಅನ್ನೋ ಮಾತೂ ಕೇಳಿಬರುತ್ತಿದೆ. ಈ ಕಾಂತ ದುರ್ಗದ ಜೆಡಿಎಸ್ ಪಾಲಿಗೆ ಪೊಲಿಟಿಕಲ್ ಸುಪ್ರಿಮೊ. ಗೂಂಡಾಗಿರಿ, ಗ್ಯಾಂಬ್ಲಿಂಗ್, ಡಬ್ಲಿಂಗ್ ದಂಧೆಗಳ ಕಿಂಗ್‌ಪಿನ್. ಎಪಿಎಂಸಿ ಯಾರ್ಡ್‌ನಲ್ಲಿ ಹಮಾಲಿ ಕೆಲಸ ಮಾಡಿಕೊಂಡಿದ್ದ ಕಾಂತನನ್ನು ರಾಜಕಾರಣದ ಲೈನಿಗೆ ತಂದದ್ದೇ ಈ ತಿಪ್ಪಾರೆಡ್ಡಿ. ಮೊದಲಿನಷ್ಟು ಆಪ್ತತೆ ಇರದೆ ಹೋದರೂ ಈ ರಾಜಕೀಯ ಗುರು-ಶಿಷ್ಯರ ತಾಳಮೇಳ ತಕ್ಕಮಟ್ಟಿಗೆ ಸಾಗುತ್ತಿದೆ.

ಅದನ್ನೇ ಬಂಡವಾಳ ಮಾಡಿಕೊಂಡು ತಾನು ಪಕ್ಷೇತರನಾಗಿ ನಿಂತು, ಬಹುಸಂಖ್ಯೆಯಲ್ಲಿರುವ ನಾಯಕ ಜನಾಂಗದ ಹಮಾಲಿ ಕಾಂತನನ್ನು ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಿದರೆ ಆತ ಕಾಂಗ್ರೆಸ್‌ನ ಮತಗಳನ್ನು ವಿಭಜಿಸಲಿದ್ದಾನೆ, ಜೊತೆಗೆ ಜೆಡಿಎಸ್‌ಗೆ ಅಂತಲೇ ಚಿತ್ರದುರ್ಗದಲ್ಲಿ ಅಜಮಾಸು 15,000 ಮತಗಳಿದ್ದು ಅವು ಸಹ ಅಭ್ಯರ್ಥಿಯ ಕೊರತೆಯ ಕಾರಣಕ್ಕೆ ಕಾಂಗ್ರೆಸ್‌ಗೆ ಹರಿದುಹೋಗುವುದು ತಪ್ಪುತ್ತದೆ ಅನ್ನೋದು ತಿಪ್ಪಾರೆಡ್ಡಿಯ ಪ್ಲಾನು. ಜೆಡಿಎಸ್ ಮತಗಳು ಕೈಕೊಟ್ಟರೂ ಕಾಂತನ ಹಿಂದೆ ಸರಿದುಹೋಗುವ ನಾಯಕ ಜನಾಂಗದ ಮತಗಳು ಕಾಂಗ್ರೆಸ್‌ಗೆ ಭಾರಿ ಏಟು ಕೊಡುವುದಂತೂ ಗ್ಯಾರಂಟಿ. ಯಾಕೆಂದರೆ ಕಳೆದ ಎಲೆಕ್ಷನ್‌ನಲ್ಲೂ ಚಿತ್ರದುರ್ಗದಲ್ಲಿ ಕಾಂಗ್ರೆಸ್ಸೇ ಗೆಲ್ಲಬೇಕಿತ್ತು. ಆದರೆ ಅಡಕೆ ಮಂಜನಿಗೆ ಟಿಕೆಟು ಕೊಟ್ಟು ಯಡವಟ್ಟು ಮಾಡಿಕೊಂಡಿದ್ದಲ್ಲದೆ ಜಿಲ್ಲಾ ಕೈ ಪಾರ್ಟಿ ಫಯಾಜುಲ್ಲಾ ಎಂಬಾತನನ್ನು ನೆಗ್ಲೆಕ್ಟ್ ಮಾಡಿದ್ದು ಭಾರಿ ದಂಡ ತೆರುವಂತೆ ಮಾಡಿತ್ತು. ಈತ ಸೀದಾ ಶ್ರೀರಾಮುಲುನ ಬಿಎಸ್‌ಆರ್ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ. ಅವತ್ತು ಅವನನ್ನು ಅನುಸರಿಸಿ ಗುಡ್ಡೆಯಾದ 40 ಸಾವಿರ ಮತಗಳಲ್ಲಿ ಮುಸ್ಲಿಂ ಮತಗಳ ಪಾಲೇ ಹೆಚ್ಚಿತ್ತು. ಅದು ಕಾಂಗ್ರೆಸ್‌ನ ಮಂಜನನ್ನು ಮಲಗಿಸಿದ್ದಲ್ಲದೆ ಬಿಜೆಪಿಯ ತಿಪ್ಪಾರೆಡ್ಡಿಯನ್ನು ಗೆಲುವಿನ ದಡ ಮುಟ್ಟಿಸಿತ್ತು. ಈ ಸಲವೂ ಕಾಂತನ ಮೂಲಕ ಅಂತಹ ಜಾತಿ ಟ್ರಿಕ್ ನಡೆಸಲು ರೆಡ್ಡಿಯ ತಂತ್ರ ಹೆಣೆದಿದ್ದಾನೆ.

ಇನ್ನು ಬಿಜೆಪಿಯಿಂದ ಸಿದ್ದೇಶ್ವರನೋ, ಅವನ ಮಗ ಅಮಿತನೋ ನಿಂತರೂ ಪಕ್ಷದ ಬಣ ರಾಜಕಾರಣದಿಂದ ಅವರು ನೆಲಕಚ್ಚುವುದು ನಿಶ್ಚಿತ. ಆಗ ಪಕ್ಷೇತರನಾಗಿ ತನ್ನ ಗೆಲುವೇ ಖಾತರಿ. ಇದಿಷ್ಟು ತಿಪ್ಪಾರೆಡ್ಡಿಯ ಆಲೋಚನೆಯ ಸಾರ ಎನ್ನಲಾಗುತ್ತಿದೆ.

ಇಂಟರೆಸ್ಟಿಂಗ್ ಸಂಗತಿಯೆಂದರೆ, ದಂಧೆವಾಲಾ ಕಾಂತನಿಗೆ ತಿಪ್ಪಾರೆಡ್ಡಿ ಎಷ್ಟು ಆತ್ಮೀಯನೋ, ಎಸ್.ಕೆ. ಬಸವರಾಜನ್ ಕೂಡಾ ಅಷ್ಟೇ ಆಪ್ತ. ಒಂದುವೇಳೆ ತಿಪ್ಪಾರೆಡ್ಡಿ ಕಾಂತನ ದಾಳ ಉರುಳಿಸಿದರೆ ಬಸವರಾಜನ್ ಅಥವಾ ಅವನ ಮಡದಿ ಸೌಭಾಗ್ಯ ಸಲೀಸಾಗಿ ಆ ಕಾಂತನನ್ನು ಕಾಸುಕೊಟ್ಟು ಖರೀದಿಸಿ ಕಣದಿಂದ ನಿವೃತ್ತಿಯಾಗಿಸುವ ಸಾಧ್ಯತೆಯೂ ಉಂಟು. ತಿಪ್ಪಾರೆಡ್ಡಿಗೆ ಆಗಲೂ ಸಂಕಷ್ಟ ಎದುರಾಗಲಿದೆ. ಒಟ್ಟಿನಲ್ಲಿ ತಿಪ್ಪಾರೆಡ್ಡಿ ಬಿಜೆಪಿಯಿಂದ ಒಂದು ಕಾಲು ಹೊರಗಿಟ್ಟು ಗಾಳ ಹಾಕುತ್ತಿರೋದಂತೂ ಸತ್ಯ. ಜೊತೆಗೆ ಸಿದ್ದೇಶ್ವರ ಚಿತ್ರದುರ್ಗ ಅಸೆಂಬ್ಲಿಗೆ ತನ್ನ ಕುಟುಂಬದ ಪರವಾಗಿ ಟವೆಲ್ಲು ಹಾಕಿರುವುದೂ ನಿಕ್ಕಿ. ಇನ್ನು ಒಂದೂವರೆ ವರ್ಷದಲ್ಲಿ ಏನೆಲ್ಲಾ ಬದಲಾವಣೆಗಳು ಆಗುತ್ತವೋ ಕಾದುನೋಡಬೇಕು.

■ ಟಿ.ಎನ್.ಎಸ್


ಪಂಚಕ್ಷೇತ್ರಗಳ ಪೊಲಿಟಿಕಲ್ ಸ್ಕ್ಯಾನ್

ಚಿತ್ರದುರ್ಗದ ಐದು ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಬಣ ರಾಜಕಾರಣದ ನಡುವೆ ಹೈರಾಣಾಗಿ ಹೋಗಿದೆ. ಚಿತ್ರದುರ್ಗ ಕ್ಷೇತ್ರದಲ್ಲೇ ತಿಪ್ಪಾರೆಡ್ಡಿಯ ಅನಾಸಕ್ತಿಯಿಂದ ಬಿಜೆಪಿ ಕಳೆಗುಂದಿದೆ. ಇನ್ನು ಹೊಳಲ್ಕೆರೆಯಲ್ಲಿ ಹಾಲಿ ಮಂತ್ರಿ ಆಂಜನೇಯನ ಭಾವಿ ಗೆಲುವು ಅಷ್ಟು ಸುಲಭವಾಗಿಲ್ಲವಾದರೂ ಬಿಜೆಪಿಯ ಒಳ ರಾಜಕಾರಣದ ವೈರತ್ವ ಆಂಜನೇಯನ ಕೈ ಹಿಡಿಯಬಹುದು. ಹೊಳಲ್ಕೆರೆ ಬಿಜೆಪಿ ಮೂರು ಭಾಗವಾಗಿಹೋಗಿದೆ. ಮಾಜಿ ಶಾಸಕ ಚಂದ್ರಪ್ಪನದೊಂದು ಗುಂಪು, ಹನುಮಕ್ಕನದೊಂದು ಗುಂಪು, ಹಾಗೇ ತಟಸ್ಥರ ಮತ್ತೊಂದು ಗುಂಪು. ಹನುಮಕ್ಕ ಬಿಜೆಪಿಯ ಮಹಿಳಾ ಲೀಡರು. ಈಕೆಯ ಗಂಡ ಆಂಜನೇಯ ಹೊಳಲ್ಕೆರೆ ತಾಲ್ಲೂಕು ಪಂಚಾಯ್ತಿಯ ಇ.ಓ. ಆಗಿದ್ದಾಗ ಗುಡಿಸಿ ಗುಂಡಾಂತರ ಮಾಡಿ ಎದ್ದೋದವನು. ಆಗ ಕೂಡಿಟ್ಟ ಬಿಟ್ಟಿ ರೊಕ್ಕದಲ್ಲೇ ಮಡದಿಯನ್ನು ಶಕ್ತಿಸೌಧಕ್ಕೆ ಟೂರು ಕಳಿಸಲು ರೆಡಿಯಾಗಿದ್ದಾನೆ. ಆದರೆ ಮಾಜಿ ಶಾಸಕ ಚಂದ್ರಪ್ಪ ಯಡ್ಡಿಯ ನಂಬಿಗಸ್ಥರ ಟೀಮುಲ್ಲಿರುವುದರಿಂದ ಅವನಿಗೆ ಬಿಜೆಪಿ ಟಿಕೆಟು ತಪ್ಪಿಸಲು ಹನುಮಕ್ಕನ ಗಂಡನಿಗೆ ಸಾಧ್ಯವಾಗುವುದಿಲ್ಲ. ಆಗ ಹನುಮಕ್ಕ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಾಳೆ. ಅವು ಬಿಜೆಪಿಯ ಮತಗಳ ವಿಭಜನೆಗೆ ನಾಂದಿಯಾಗಲಿದೆ. ಆದರೂ ಮಂತ್ರಿ ಆಂಜನೇಯ ಮೈಮರೆಯುವಂತಿಲ್ಲ.

ಇನ್ನು ಹೊಸದುರ್ಗ, ಹಿರಿಯೂರು ಮತ್ತು ಚಳ್ಳಕೆರೆ ಕ್ಷೇತ್ರಗಳಿಂದ ಕೈಗೆ ಚುನಾವಣಾ ಸವಾಲು ಹಾಕಲು ಬಿಜೆಪಿ ಸೊಂಟದ ಕಸುವನ್ನೇ ಕಳಕೊಂಡಿದೆ. ಹೊಸದುರ್ಗದಲ್ಲಿ ಯಡ್ಡಿ-ಈಶ್ವರಪ್ಪನ ನಡುವಿನ ರಾಯಣ್ಣ ಬ್ರಿಗೇಡ್ ಜಟಾಪಟಿ ಬಿಜೆಪಿಗೆ ಹೊಡೆತ ಕೊಡಲಿದೆ. ಅಲ್ಲದೇ ಕಾಂಗ್ರೆಸ್‌ನ ಗೋವಿಂದಪ್ಪನೆದುರು ನಿಂತು ಗೆಲ್ಲುವ ನಂಬಿಕೆ ಯಾರಿಗೂ ಇಲ್ಲ. ಜಾತಸ್ಥ ಒಲವಿನ ಕಾರಣಕ್ಕೆ ಎಳಸು ನವೀನನ್ನೇ ಯಡ್ಯೂರಪ್ಪ ಮತ್ತೆ ಕಣಕ್ಕಿಳಿಸಿದರೆ ಗೋವಿಂದಪ್ಪನ ಗೆಲುವು ಅಲ್ಲಿ ಸಲೀಸು. ಹಿರಿಯೂರಿನಲ್ಲಿ ಸದ್ಯ ಕಾಂಗ್ರೆಸ್‌ನ ಸುಧಾಕರನದ್ದೇ ವರ್ಚಸ್ಸಿದೆ. ಅಲ್ಲಿ ಆತನನ್ನು ಸೋಲಿಸುವುದು ಕಷ್ಟ. ಚಳ್ಳಕೆರೆಯಲ್ಲಿ ಕಾಂಗ್ರೆಸ್‌ನ ರಘುಮೂರ್ತಿ ಕೊಂಚ ಕಳೆಗುಂದಿರುವುದು ನಿಜವಾದರು ಅದನ್ನು ಎನ್‌ಕ್ಯಾಶ್ ಮಾಡಿಕೊಳ್ಳುವಂತಹ ಲಾಯಕ್ಕು ಮುಖವೇ ಬಿಜೆಪಿಯಲ್ಲಿಲ್ಲ. ಬಿಜೆಪಿ ಮಾಜಿ ಶಾಸಕ ತಿಪ್ಪೇಸ್ವಾಮಿಯ ಮಗ ಶಿವಕುಮಾರ್‌ಗೆ ಈ ಸಲ ಟಿಕೆಟ್ ನೀಡಲಾಗುತ್ತದೆ ಎನ್ನುವ ವರ್ತಮಾನವಿದೆ. ಅದು ನಿಜವಾದರೆ ರಘುಮೂರ್ತಿ ಮತ್ತೆ ಶಾಸಕನಾಗುವುದು ಗ್ಯಾರಂಟಿ.





ರಾಯಣ್ಣನ ಹೆಸರು ಮನುವಾದಿಗಳ ಬಸಿರು


ಹೈರಾಣುಬದ್ಧ ಯಡ್ಡಿ

ಇದನ್ನೇ ಕ್ಯಾಚ್ 22 ಸಿಚುಯೇಷನ್ ಅನ್ನುವುದು. ಇವನು ಅವನ ಕುತ್ತಿಗೆಗೆ ಹಾಕಿದ ಉರುಳು ಸಡಿಲಿಸಲಾರ. ಅವನು ಇವನ ತಲೆಯನ್ನು ಬಿಡಲಾರ. ಈ ತಿಂಗಳ 21 ಮತ್ತು 22 ರಂದು ನಡೆಯಲಿರುವ ರಾಜ್ಯ ಕಾರ್ಯಕಾರಿಣಿಯ ಬಳಿಕ ಯಡಿಯೂರಪ್ಪನವರೇ ಮೇಲೆ ಬಿದ್ದು ಈಶ್ವರಪ್ಪ ಜೊತೆ ರಾಜಿ ಕುದುರಿಸಿಕೊಳ್ಳುತ್ತಾರೆಂಬುದು ಬಿಜೆಪಿಯ ಯಡ್ಡಿ ನಿಷ್ಠರ ಚೌಕಾಸಿಯಂತೆ. ಅದಕ್ಕೆ ತಕ್ಕಂತೆ ಕೋಲಾರದಲ್ಲಿ ನಡೆದ ಸಭೆಯೊಂದರಲ್ಲಿ 'ನನ್ನ ಮತ್ತು ಈಶ್ವರಪ್ಪನ ಮಧ್ಯೆ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಅದು ಕೇವಲ ಮಾಧ್ಯಮಗಳ ಗ್ರಹಿಕೆಯಷ್ಟೇ.....' ಎಂದು ಯಡ್ಡಿ ತಿಪ್ಪೆ ಸಾರಿಸಿದರೆ, ಇತ್ತ ಈಶ್ವರಪ್ಪ 'ಯಡಿಯೂರಪ್ಪ ನಮ್ಮ ಪಕ್ಷದ ದೊಡ್ಡ ನಾಯಕರು. ನನ್ನನ್ನು ಬೆಳೆಸಿದವರು. ಅವರು ಮಾತುಕತೆಗೆ ಕರೆದರೆ ಹೋಗದೇ ಇರಲು ಕಾರಣವುಂಟೆ?' ಎಂದು ತ್ಯಾಪೆ ಹೊಲಿಯುತ್ತಿದ್ದಾರೆ!

ಆದರೆ ಪ್ರತಿಯೊಬ್ಬರಿಗೂ ಗೊತ್ತಿರುವ ಬಹಿರಂಗ ಹಿಕಮತ್ತೆಂದರೆ; ಹೀಗೆ ಒಂದು ಕೈಯಲ್ಲಿ ಆಲೀವ್ ಎಲೆಯ ಗೊಂಚಲು ಹಿಡಿದ ಪರಸ್ಪರರೂ ಮತ್ತೊಂದು ಕೈಯಲ್ಲಿ ಚೂರಿ ಅವಿತಿರಿಸಿ ಕೊಂಡಿದ್ದಾರೆ. ಒಬ್ಬನ ಮುಗಿಸಲು ಮತ್ತೊಬ್ಬ, ಒಬ್ಬನ ಹಿಂದೆ ಆತನ ಅಕ್ಷೋಹಿಣಿಯಾದರೆ ಮತ್ತೊಬ್ಬನ ಬೆನ್ನಿಗೆ ಆರೆಸ್ಸೆಸ್, ಬ್ರಾಹ್ಮಣ ಮನುವಾದಿಗಳ ಹಿಂಡು!


ಕಾಗೇರಿ


ನಿರ್ಮಲ್ ಕುಮಾರ್ ಸುರಾನಾ


ಭಾನುಪ್ರಕಾಶ್

ಈಶ್ವರಪ್ಪನವರ ಭಗವಾಧ್ವಜದ ಹೆಸರು ರಾಯಣ್ಣ ಬ್ರಿಗೇಡ್. ಅಂದರೆ ಹಿಂದುಳಿದವರು ದಲಿತರನ್ನು ಸಂಘಟಿಸುವುದೇ ಅದರ ಹಿಡನ್ ಅಜೆಂಡಾ? ಮಾಜಿ ಮೇಯರ್ ವೆಂಕಟೇಶ್‌ಮೂರ್ತಿ, ಅವ್ವಣ್ಣ ಮ್ಯಾಕೇರಿಯಂಥ ಬ್ರಿಗೇಡ್ ಕುರುಬರನ್ನು ಯಡ್ಡಿ ಬಣ ಈಗಾಗಲೇ ಬಿಜೆಪಿಯಿಂದ ಉಚ್ಚಾಟಿಸಿದೆ. ತಿಂಗಳ ಹಿಂದಷ್ಟೇ ನಾನಿನ್ನು ಬ್ರಿಗೇಡ್ ಸಂಘಟನೆಗೆ ಆಸಕ್ತಿ ವಹಿಸುವುದಿಲ್ಲ ಎಂದಿದ್ದ ಈಶ್ವರಪ್ಪ ಈಗ ಹೈಕಮಾಂಡ್ ಮರ್ಜಿಯನ್ನೂ ಲೆಕ್ಕಿಸದೆ ಬ್ರಿಗೇಡ್ ಕಾರ್ಯಕ್ರಮಗಳನ್ನು ತೀವ್ರಗೊಳಿಸಿದ್ದೇಕೆ? ಬೆಳಗಾವಿಗೆ ಬಂದಿದ್ದ ರಾಷ್ಟ್ರ ಬಿಜೆಪಿ ವರಿಷ್ಠ ರಾಮಲಾಲ್, ರಾಜ್ಯ ಬಿಜೆಪಿಯ ಉಸ್ತುವಾರಿ ಮುರಳೀಧರ ರಾವ್, ರಾಷ್ಟ್ರಾಧ್ಯಕ್ಷ ಅಮಿತ್ ಶಾ ಖುದ್ದಾಗಿಯೇ ತಾಕೀತು ಮಾಡಿದ ಮೇಲೂ ಯಾವ ಧೈರ್ಯದ ಮೇಲೆ ಈಶ್ವರಪ್ಪ ರಾಯಣ್ಣ ಬ್ರಿಗೇಡ್ ರಣಕಹಳೆ ಮುಂದುವರಿಸುತ್ತಾರೆ ಮತ್ತು ದಿನೇದಿನೇ ಅದಕ್ಕೆ ಇನ್ನುಳಿದ ಬಿಜೆಪಿ ನಾಯಕರೇಕೆ ಧ್ವನಿಗೂಡಿಸುತ್ತಲೇ ಇದ್ದಾರೆ?

ಮನುವಾದಿಗಳ ತಂತ್ರ?

ಏಕೆ ಹೈಕಮಾಂಡ್ ಈಶ್ವರಪ್ಪನಿಗೆ ಅಂಕುಶ ಹಾಕುತ್ತಿಲ್ಲ? ಮಗುವನ್ನೂ ಚಿವುಟುವುದು ತೊಟ್ಟಿಲನ್ನೂ ತೂಗುವುದು ಮಾಡುತ್ತಿರುವ ಬಿಜೆಪಿ ಹೈಕಮಾಂಡ್ ಮತ್ತು ಸ್ಥಳೀಯ ಸಂಘ ಪರಿವಾರದ ಅಸಲೀ ಮರ್ಮವಾದರೂ ಏನು?

ಇದು ರಾಜ್ಯದ ಬಹುತೇಕ ಮಾಧ್ಯಮಗಳ ಪ್ರಶ್ನೆಯಷ್ಟೇ ಅಲ್ಲ, ರಾಜಕಾರಣದ ಆಗುಹೋಗುಗಳ ಬಗ್ಗೆ ಕಣ್ಣಿಟ್ಟ ಪ್ರಜ್ಞಾವಂತರೆಲ್ಲರನ್ನೂ ಕಾಡುವ ಪ್ರಶ್ನೆಯೇ. ಹಿಂದುಳಿದವರು ಮತ್ತು ದಲಿತರನ್ನು ಸಂಘಟಿಸುವ ಮೂಲಕ ಬಿಜೆಪಿಗೆ ಬಲಿ ಕೊಡುವುದೇ ರಾಯಣ್ಣ ಬ್ರಿಗೇಡ್‌ನ ಪರಮಗುರಿಯೆಂದು ಆಣೆ ಪ್ರಮಾಣ ಮಾಡಿ ಹೇಳುತ್ತಿರುವ ಈಶ್ವರಪ್ಪನನ್ನು ದಲಿತರಾಗಲಿ, ಹಿಂದುಳಿದ ನರಪಿಳ್ಳೆಯಾಗಲಿ ನಂಬುವುದು ಹಾಳಾಗಲಿ, ಸ್ವತಃ ಆತನದ್ದೇ ಕುರುಬ ಸಮೂಹ ಕೂಡ ಈಶ್ವರಪ್ಪ ಓರ್ವ ಕುರುಬನೆಂಬುದನ್ನು ಒಪ್ಪಲು ಸಿದ್ಧವಿಲ್ಲ. ಆತ ಕರಿ ಬ್ರಾಹ್ಮಣನೆಂದೂ ಅಗ್ರಹಾರದ ಜೀತದಾಳೆಂದೂ ವೈದಿಕರ ಮನೆಮಗನೆಂದೂ ಈಗಾಗಲೇ ಸಾಬೀತಾದ ಸತ್ಯ!

ರಾಯಣ್ಣ ಬ್ರಿಗೇಡ್‌ನ ಬೆರಳೆಣಿಕೆಯ ಪದಾಧಿಕಾರಿಗಳು ಕುರುಬರೆಂಬುದನ್ನು ಬಿಟ್ಟರೆ ಮಿಕ್ಕವರೆಲ್ಲ ಬಿಜೆಪಿ-ಸಂಘ ಪರಿವಾರದ ಸಂತತಿಗಳೆ. ಒಂದೆಡೆ ಸಾಂಕೇತಿಕವೆಂಬಂತೆ ಬ್ರಿಗೇಡ್ ಕಾರ್ಯಕ್ರಮಗಳು ಗುಡುಗುತ್ತಿದ್ದರೆ ಮತ್ತೊಂದೆಡೆ ಬ್ರಿಗೇಡ್ ಉದ್ದೇಶಕ್ಕೆ ದನಿಗೂಡಿಸುತ್ತಿರುವುದು ಸಂಘ ಪರಿವಾರದ ಪಟಾಲಂಗಳೇ. ಇದರ ಮುಂಚೂಣಿಯಲ್ಲಿರುವುದಾದರೂ ಯಾರು? ಮಾರ್ವಾಡಿ ನಿರ್ಮಲ್ ಕುಮಾರ್ ಸುರಾನಾ, ಶಿವಮೊಗ್ಗದ ಮಹಾ ಬ್ರಾಹ್ಮಣ ಭಾನುಪ್ರಕಾಶ್, ಇದೇ ಪಡಿಯಚ್ಚಿನ ವಿಶ್ವೇಶ್ವರ ಹೆಗಡೆ ಕಾಗೇರಿ, ಹುಟ್ಟಾ ಚೆಡ್ಡಿ ಶಿವಯೋಗಿ ಸ್ವಾಮಿ, ಪಕ್ಕಾ ಸಂಘ ಪರಿವಾರದ ಸೊಗಡು ಶಿವಣ್ಣ, ತುಮಕೂರಿನ ನಂದೀಶ್, ಮಾಜಿ ಎಮ್ಮೆಲ್ಸಿ ಸಿದ್ಧರಾಜು, ಸೋಮಣ್ಣ ಬೇವಿನಮರದ, ಚಾಮರಾಜನಗರದ ಗುರುಸ್ವಾಮಿ, ಶ್ರೀಕಾಂತ್ ಕುಲಕರ್ಣಿ, ಮಾಜಿ ಸಂಸದ ವಿರೂಪಾಕ್ಷಪ್ಪ ನಾರಾಯಣ ಸಾ ಭಾಂಡಗೆ ಮುಂತಾದವರು.

ಇವರೆಲ್ಲ ಸೇರಿಕೊಂಡು ಯಡ್ಡಿ ಸರ್ವಾಧಿಕಾರದ ವಿರುದ್ಧ ಪತ್ರ ಬರೆದದ್ದು ಕಳೆದ ಆಗಸ್ಟ್‌ನಲ್ಲಿ, ಅಂದರೆ ರಾಯಣ್ಣ ಬ್ರಿಗೇಡ್ ಸ್ಥಾಪನೆಗೂ ಮೊದಲೇ ಸಂತೆಗೂ ಮುನ್ನ ಗಂಟುಕಳ್ಳರ ಹಾಗೆ ಇವರೆಲ್ಲ ಯಡ್ಡಿ ವಿರುದ್ಧ ಕತ್ತಿ ಮಸೆಯಲಾರಂಭಿಸಿದ್ದರು!

ಬ್ರಿಗೇಡ್‌ನ ನೆಪ?


ಈಗದು ಒಂದು ಹಂತಕ್ಕೆ ಬರಬೇಕಿತ್ತಲ್ಲವೆ? ರಾಷ್ಟ್ರಾಧ್ಯಕ್ಷ ಅಮಿತ್ ಶಾರನ್ನೇ ಕಂಡು ಯಡ್ಡಿ ದೂರು ಹೇಳಿದ ಮೇಲೆ, ಬ್ರಿಗೇಡ್ ಕಿರುಕುಳವನ್ನು ತಪ್ಪಿಸುವಂತೆ ಗೋಗರೆದ ಮೇಲೂ ಏಕೆ ಈಶ್ವರಪ್ಪ ತೆಪ್ಪಗಾಗುತ್ತಿಲ್ಲ? ಖುದ್ದು ರಾಷ್ಟ್ರ ಬಿಜೆಪಿ ಕಾರ್ಯದರ್ಶಿ ರಾಮಲಾಲರೇ ಬಂದು ರಾಜಿ ಮಾಡಿಸಿದ ಮೇಲೂ, ರಾಜ್ಯ ಬಿಜೆಪಿ ಉಸ್ತುವಾರಿ ಮುರಳೀಧರ ರಾವ್‌ರೇ ಈಶ್ವರಪ್ಪಗೆ ಎಚ್ಚರಿಕೆ ಕೊಟ್ಟಮೇಲೂ ತಣ್ಣಗಾಗಬೇಕಿದ್ದ ಈಶ್ವರಪ್ಪ ಕ್ಯಾತೆ ದಿನೇದಿನೇ ಉಲ್ಬಣಿಸುತ್ತಿರುವುದೇಕೆ?

ಇದರರ್ಥ ಬಂಡಾಯದ ಮೂಲ ಈಶ್ವರಪ್ಪ ಅಲ್ಲ. ರಾಯಣ್ಣ ಬ್ರಿಗೇಡ್ ಎಂಬುದೇನಿದ್ದರೂ ರೋಗದ ಲಕ್ಷಣಗಳಲ್ಲೊಂದು ಮಾತ್ರ. ಹಾಗೆಯೇ ಹಿಂದುಳಿದ ದಲಿತರ ಸಂಘಟನೆಯೆಂಬುದು ಕೂಡ ಭೂತದ ಬಾಯಲ್ಲಿ ಭಗವದ್ಗೀತೆಯಂತೆಯೇ. ಅಸಲು ಸೂತ್ರಗಳಿರುವುದು ಕೇಶವಕೃಪಾದಲ್ಲಿ. ಬಿಜೆಪಿ ಉಪಾಧ್ಯಕ್ಷ ಭಾನುಪ್ರಕಾಶ್ ಆಗಲಿ, ಮತ್ತೊಬ್ಬ ಉಪಾಧ್ಯಕ್ಷ ಮಾರ್ವಾಡಿ ನಿರ್ಮಲ್ ಸುರಾನಾ ಆಗಲಿ, ಮಾಜಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯಾಗಲಿ, ಶಿವಸ್ವಾಮಿಯಾಗಲಿ ಈಶ್ವರಪ್ಪ ನಿಷ್ಠರಲ್ಲ. ಬದಲಿಗೆ ಆರೆಸ್ಸೆಸ್ ಕಟ್ಟರ್‌ಗಳು, ಮೊದಮೊದಲು ಕೇವಲ ಈಶ್ವರಪ್ಪ ಮಾತ್ರವೇ ಯಡ್ಡಿ ವಿರುದ್ಧ ದನಿಯೆತ್ತಿದಂತಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಈಶ್ವರಪ್ಪ ಸೋಲಿಗೆ ಕಾರಣರಾದ ಉದ್ಯಮಿ ರುದ್ರೇಗೌಡರನ್ನು ಶಿವಮೊಗ್ಗ ಜಿಲ್ಲಾ ಬಿಜೆಪಿಯ ಅಧ್ಯಕ್ಷ ಪಟ್ಟಕ್ಕೆ ತಂದಿದ್ದೇ ಈಶೂ ಸಿಟ್ಟಿನ ಮೂಲವೆಂದು ಅನೇಕರ ಲೆಕ್ಕಾಚಾರವಾಗಿತ್ತು. ಯಡ್ಡಿ ಕೂಡ ಹಾಗೆಯೇ ಭಾವಿಸಿರಬೇಕು. ಕೆಜೆಪಿಯಲ್ಲಿದ್ದ ತನ್ನ ಬೆಂಬಲಿಗರನ್ನೆಲ್ಲ ಬಿಜೆಪಿಯ ಪದಾಧಿಕಾರಿಗಳನ್ನಾಗಿ ನೇಮಿಸಿದ್ದೇ ಅಸಂತುಷ್ಟಿಯ ಮೂಲವೆಂಬ ಯಡ್ಡಿ ಲೆಕ್ಕಾಚಾರ ದಿನೇದಿನೇ ಹುಸಿಯಾಗತೊಡಗಿತು. ರಾಜ್ಯ ಬಿಜೆಪಿಯ ಬೇರೆಲ್ಲ ನಾಯಕರಿಗಿಂತ ಪಕ್ಷಕ್ಕೆ ತಾನೇ ಅನಿವಾರ್ಯವೆಂಬ ಯಡ್ಡಿಯ ಅತೀ ಆತ್ಮವಿಶ್ವಾಸವೇ ಇಷ್ಟೆಲ್ಲಕ್ಕೂ ಮೂಲ. ತಾನೊಬ್ಬನೇ ಬಿಜೆಪಿಯನ್ನು ಅಧಿಕಾರಕ್ಕೆ ತರಬಲ್ಲೆನೆಂಬ ಅಹಂ ನೆತ್ತಿಗೇರಿತ್ತು. 'ಮಿಷನ್ 150' ಅಂದರೆ ಮುಂಬರುವ ಚುನಾವಣೆಯಲ್ಲಿ ನೂರೈವತ್ತು ಮಂದಿಯನ್ನು ತನ್ನ ಬಲದ ಮೇಲೆಯೇ ಗೆಲ್ಲಿಸಿಕೊಳ್ಳುವುದು. ಅದಕ್ಕೊಂದು ಹೈಕಮಾಂಡ್‌ಗೆ ತನಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಿ ಎಂಬ ಬೇಡಿಕೆಯನ್ನೂ ಇಟ್ಟರು.

ಹೈಕಮಾಂಡ್ ಯಡ್ಡಿಯ ಅತೀ ಉತ್ಸುಕತೆಗೇನೂ ಅಡ್ಡಗಾಲಿಡಲಿಲ್ಲ, ಆದರೆ ಯಾವುದಕ್ಕೂ ಕೋರ್ ಕಮಿಟಿಯ






ಅಮಿತ್ ಶಾ


ಶಿವಮೊಗ್ಗದಲ್ಲಿ ಯಡ್ಡಿ-ಈಶ್ವರಪ್ಪ ಬೆಂಬಲಿಗರ ಹೊಡೆದಾಟ

ಪಡೆದೇ ಮುಂದುವರೆಯುವಂತೆ ವಿಚಿತ್ರ ಷರತ್ತು ...ನ್ನು ವಿಧಿಸಿತು. ಅಂದರೆ ಅಡ್ಡಗೋಡೆಯ ಮೇಲೆ ...ವಿಟ್ಟಂತೆ. ಇದನ್ನು ಯಡ್ಡಿ ಸೂಕ್ಷ್ಮವಾಗಿ ...ಮಾಡಿಕೊಳ್ಳಬೇಕಿತ್ತು. ಬದಲಿಗೆ ಕೋರ್ ಕಮಿಟಿಯನ್ನು ...ಅನ್ನಲಿಲ್ಲ. ಕಳೆದ ಚುನಾವಣೆಯಲ್ಲಿ ಯಾರೆಲ್ಲ ಕೆಜೆಪಿಯ ...ಕ ಬಿಜೆಪಿ ವಿರುದ್ಧ ಹೋರಾಡಿದ್ದರೋ ಅಂಥವರನ್ನೇ ... ಜಿಲ್ಲಾ ಮಟ್ಟದ ಪದಾಧಿಕಾರಿಗಳನ್ನಾಗಿಸಿದರು. ಇದರ ...ಧ ಅಪಸ್ವರವೆತ್ತಿದ್ದೂ ಈಶ್ವರಪ್ಪನವರೇ. ಇದಕ್ಕೆ ...ವಾಗಿ ಕೋರ್ ಕಮಿಟಿಯೂ ಸಭೆ ಕರೆದು ...ಸಿತು. ಇದ್ಯಾವುದಕ್ಕೂ ಜಗ್ಗದ ಯಡ್ಡಿ 'ಈಗ ಆಗಿದ್ದು ಹೋಗಿದೆ. ಮತ್ಯಾರನ್ನಾದರೂ ಸೇರಿಸಬೇಕೆಂದರೆ ...ತ ಪದಾಧಿಕಾರಿಗಳ ಪಟ್ಟಿ ಮಾಡಿದರಾಯ್ತು ಬಿಡಿ...' ತಿಪ್ಪೆ ಸಾರಿಸಿಬಿಟ್ಟರು.

...ದರಿದು ಅಷ್ಟು ಸುಲಭಕ್ಕೆ ಮುಗಿಯುವ ...ಯಾಗಿರಲಿಲ್ಲ. ಒಮ್ಮೆ ತನಗೆ ನಿಷ್ಠರನ್ನು ಆಯಕಟ್ಟಿಗೆ ...ದ ಮೇಲೆ ಪಕ್ಷನಿಷ್ಠರನ್ನು ಮತ್ತದೇ ಸ್ಥಾನಮಾನಗಳಿಗೆ ...ತಾನೇ ತೂರಿಸಲು ಸಾಧ್ಯ? ಎಂಬುದು ಅತೃಪ್ತರ ...ಗಿತ್ತು. ಇದರರ್ಥ ಪಕ್ಷದ ಹಿಡಿತ ಪೂರ್ತಿಯಾಗಿ ...ಕೈವಶವಾಗದಂತೆ ತಡೆಯುವುದು ಮತ್ತು ಕಾಟಾಚಾರಕ್ಕೆ ...ಯನ್ನು ಮುಂದಿಟ್ಟುಕೊಂಡು ಹಿಡಿತಪೂರ್ತಿ ಕೋರ್ ...ಯ ಕೈಯಲ್ಲೇ ಭದ್ರಪಡಿಸುವುದು. ಯಡ್ಡಿ ಯಾವತ್ತು ...ಷ್ಠರನ್ನು ಕಿತ್ತು ಪಕ್ಷನಿಷ್ಠರಿಗೆ ಮಣೆ ಹಾಕಲಿಲ್ಲವೋ ... ಪರಿಣಾಮದ ಫಲವೇ ರಾಯಣ್ಣ ಬ್ರಿಗೇಡ್!

...ೇಲುನೋಟಕ್ಕೆ ವ್ಯಕ್ತವಾಗುತ್ತಿದ್ದ ಈಶ್ವರಪ್ಪ ಮತ್ತು ...ಣ್ಣ ಹೆಸರನ್ನು ನೋಡಿದವರಿಗದು ಈಶ್ವರಪ್ಪನ ಕುರುಬ ...ೆ ಎಂದೇ ಭಾಸವಾಗುತ್ತಿತ್ತು. ಸ್ವಂತ ಬಲ, ಸ್ವಂತ ...ಯಾವುದೂ ಇಲ್ಲದ ಈಶ್ವರಪ್ಪನನ್ನು ಸಲೀಸಾಗಿ ಬಲಿ ...ತೇನೆಂದು ಯಡ್ಡಿ ಮೀಸೆ ತಿರುಗಿಸಿದ್ದೇ ತಿರುಗಿಸಿದ್ದು. ... ದಿನಕಳೆದಂತೆ ಗೊತ್ತಾಯಿತು ಇದು ಕೇವಲ ...ಪ್ಪನಾಗಲಿ ಆತನ ಕುರುಬ ಬಾಂಧವರಾಗಲಿ ಅಲ್ಲ;


ಜಯಲಲಿತಾ ಅವತಾರಕ್ಕೆ ಅಣಿಯಾದ ಶೋಭಕ್ಕ

ಆದರ ಆಧಾರಸ್ತಂಭವೇ ಆರೆಸ್ಸೆಸ್. ಸಂಘ ಪರಿವಾರದ ಮೀಡಿಯಾ ಬ್ರಿಗೇಡ್‌ನಿಂದ ಹಿಡಿದು ಶಂಕರಪುರದ ಚೆಡ್ಡಿ ಬ್ರಿಗೇಡ್, ಮಧ್ಯ ಕರ್ನಾಟಕದ "ಲಂಗೋಟಿ ಬ್ರಿಗೇಡ್" ಉತ್ತರ ಕರ್ನಾಟಕದ ವಿಭೂತಿ ಬ್ರಿಗೇಡ್, ಚಿಕ್ಕಮಗಳೂರಿನ ಭಜರಂಗಿ ಬ್ರಿಗೇಡ್, ಮಲೆನಾಡಿನ 'ಹಳೇ ಸಂಗೀ' ಬ್ರಿಗೇಡ್- ಹೀಗೆ ಸಂಘ ಪರಿವಾರದ ತರಹೇವಾರಿ ಹಿತಾಸಕ್ತಿಗಳ ತರಹೇವಾರಿ ಬ್ರಿಗೇಡುಗಳು ರಾಯಣ್ಣ ಬ್ರಿಗೇಡಿನ ಹಿಂದಿದ್ದವು.

ಎಂಜಿಆರ್-ಜಯಲಲಿತಾ

ರಾಯಣ್ಣ ಬ್ರಿಗೇಡನ್ನು ಮುಗಿಸಲು ಯಡ್ಡಿ ಮಾಡಿದ ಎಲ್ಲಾ ಯತ್ನಗಳನ್ನೂ ಇವು ವಿಫಲಗೊಳಿಸುತ್ತಿದ್ದವು. ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ರಾಯಣ್ಣ ಬ್ರಿಗೇಡಿನ ಹಿಂದಿದ್ದದ್ದು ಅತೃಪ್ತ ಬಿಜೆಪಿಗಳೇ. ಇವರೆಲ್ಲ 'ಈಶ್ವರಪ್ಪನವರೇ ಮುಂದಿನ ಮುಖ್ಯಮಂತ್ರಿ' ಎಂಬಂತೆ ಫ್ಲೆಕ್ಸ್, ಬ್ಯಾನರ್, ಪ್ರಚಾರ ಶುರುವಿಟ್ಟಾಗಿತ್ತು. ಈಶ್ವರಪ್ಪ ಬ್ರಿಗೇಡ್ ಹೆಸರಲ್ಲಿ ನಡೆಸುತ್ತಿದ್ದ ಸಣ್ಣಪುಟ್ಟ ಸಭೆಗಳಿಗೂ ನಿರೀಕ್ಷೆ ಮೀರಿ ಪ್ರಚಾರ ಸಿಗತೊಡಗಿತು. ಇದರರ್ಥ ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಅಧಿಕಾರ ಹಿಡಿಯುವುದಕ್ಕಿಂತಲೂ ಯಡ್ಡಿಕೂಟವನ್ನು ನಿರ್ನಾಮ ಮಾಡುವುದೇ ಮುಖ್ಯವಾಗಿತ್ತು. ಸಂಘ ಪರಿವಾರವೇ ಇಂಥದೊಂದು ಷಡ್ಯಂತ್ರದ ಚುಕ್ಕಾಣಿ ಹಿಡಿಯುತ್ತದೆಯೆಂದರೆ ಅದಕ್ಕೆ ಮುಂಬರುವ ಚುನಾವಣೆಯಲ್ಲಿ ಅಧಿಕಾರ ಮುಖ್ಯವಾಗಿರಲಿಲ್ಲ. ಬದಲಿಗೆ ಲಿಂಗಾಯತರ ಪಕ್ಷವಾಗಹೊರಟ ಬಿಜೆಪಿಯನ್ನು ಬ್ರಾಹ್ಮಣರ ಪಕ್ಷವಾಗೇ ಉಳಿಸಿಕೊಳ್ಳುವ ತಂತ್ರ!

ಹೇಗೂ ರಾಷ್ಟ್ರಮಟ್ಟದಲ್ಲಿ ಬಿಜೆಪಿಗೀಗ ಎದುರಾಳಿಗಳೇ ಇಲ್ಲ. ಮುಂಬರುವ ಚುನಾವಣೆಯಲ್ಲೇನಾದರೂ ಬಿಜೆಪಿಗೆ ಬಹುಮತ ಬಂತೆಂದರೆ ಸಹಜವಾಗೇ ಸರ್ಕಾರ ಯಡ್ಡಿ ಕೈವಶವಾಗುತ್ತದೆ. ಒಮ್ಮೆ ಸರ್ಕಾರ ಯಡ್ಡಿಯ ಪಾಲಾಯಿತೆಂದರೆ ಸಹಜವಾಗೇ ತಮಿಳು ರಾಜಕಾರಣದ ಎಂಜಿಆರ್-ಜಯಲಲಿತಾ ಎಪಿಸೋಡು ಪುನರಾವರ್ತನೆಯಾಗುತ್ತದೆ. ಏಕೆಂದರೆ ಯಡ್ಡಿಗೀಗ ಎಪ್ಪತ್ನಾಲ್ಕರ ವೃದ್ಧಾಪ್ಯ. ಮುಂಬರುವ ಚುನಾವಣೆಗೆ ಹೊತ್ತಿಗೆ ಎಪ್ಪತ್ತೈದಾಯಿತೆಂದರೆ, ಮುಖ್ಯಮಂತ್ರಿಯಾದರೂ ಯಡ್ಡಿ ಹೆಚ್ಚೆಂದರೆ ಒಂದು ವರ್ಷ ದರ್ಬಾರ್ ನಡೆಸಬಹುದು. ತದನಂತರ ತನ್ನೆಲ್ಲಾ ಶಕ್ತಿ ಸಾಮರ್ಥ್ಯ, ಪ್ರಭಾವವನ್ನು ಪಣಕ್ಕಿಟ್ಟು ಆಪ್ತ ಸಖಿ ಕರಂದ್ಲಾಜೆಯನ್ನೇ ಮುಖ್ಯಮಂತ್ರಿ ಗಾದಿಯಲ್ಲಿ ಯಡ್ಡಿ ಪ್ರತಿಷ್ಠಾಪಿಸದೇ ಬಿಡಲಾರರೆಂಬ ಲೆಕ್ಕಾಚಾರ ಆರೆಸ್ಸೆಸ್ ನಾಯಕರ ತಲೆ ಹೊಕ್ಕಿದೆ.

ಈ ಪುರುಷಾರ್ಥಕ್ಕೆ ಬಿಜೆಪಿಗೆ ಅಧಿಕಾರ ಬಂದರೆಷ್ಟು ಬಿಟ್ಟರೆಷ್ಟು? ಪಕ್ಷ ಈಗಿರುವುದಕ್ಕಿಂತ ಮತ್ತಷ್ಟು ದುರ್ಬಲಗೊಳ್ಳುವ ಬದಲು ಕನಿಷ್ಠ ಕೆಜೆಪಿ ಪೂರ್ವ ಸ್ಥಿತಿಯಲ್ಲಾದರೂ ಬದುಕುಳಿದರೆ ಸಾಕೆಂಬ ನಿರ್ಧಾರಕ್ಕೆ ಸಂಗಿಗಳು ಬಂದಂತಿದೆ. ಹೇಗೂ ಜೆಡಿಎಸ್ ಒಂದಷ್ಟು ಸೀಟುಗಳನ್ನೂ ಪಡೆದೇ ತೀರುತ್ತದೆ. ಕೇಂದ್ರದಲ್ಲಿ ತಮ್ಮದೇ ಪಕ್ಷ ಅಧಿಕಾರದಲ್ಲಿರುವುದರಿಂದ ಜೆಡಿಎಸ್‌ಗೆ ಬಿಜೆಪಿ ಜೊತೆ ಹೊಂದಾಣಿಕೆಯೇ ಲಾಭದಾಯಕವೆನಿಸುತ್ತದೆ. ಹಾಗೊಮ್ಮೆ ಜೆಡಿಎಸ್ ಏನೇ ಕಣ್ಣಾಮುಚ್ಚಾಲೆಯಾಡಿ ಅತ್ತ ಕಾಂಗ್ರೆಸ್ ಇತ್ತ ಬಿಜೆಪಿ ಎಂದು ಆಟಕ್ಕಿಳಿದರೂ ಅದರ ಮುಂಬರುವ ಚುನಾವಣೆಯಲ್ಲಂತೂ ಬಿಜೆಪಿಗೇ ಲಾಭವಾಗುತ್ತದೆ. ಅಂಥಾದ್ದರಲ್ಲಿ ಯಡ್ಡಿಯನ್ನು ಬೆಳೆಸಿ ಪಕ್ಷ ಹಾಳು ಮಾಡಿಕೊಳ್ಳುವುದಕ್ಕಿಂತ, ಲಿಂಗಾಯತರ ಆಧಿಪತ್ಯದ ಹೊರತಾಗಿಯೂ ಪಕ್ಷಕ್ಕೆ ಅಸ್ತಿತ್ವವಿದೆ ಎಂದು ಸಾಬೀತುಪಡಿಸುವ ಒತ್ತಡಕ್ಕೆ ಸಂಘ ಪರಿವಾರ ಸಿಲುಕಿಬಿದ್ದಿದೆ.

ಖುದ್ದು ಅಮಿತ್ ಶಾರೇ ಮಧ್ಯಸ್ಥಿಕೆ ವಹಿಸಿದ ಮೇಲೂ ನಾಯಕರಿಬ್ಬರ ಜಿದ್ದಾಜಿದ್ದಿ ಶಮನಗೊಳ್ಳುತ್ತದೆಯೆಂಬ ವಿಶ್ವಾಸ ಅನೇಕರಿಗಿತ್ತು. ಶುರುವಿನಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದು ಮತ್ತು ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡುವುದೇ ರಾಯಣ್ಣ ಬ್ರಿಗೇಡಿನ ಗುರಿ ಎನ್ನುತ್ತಿದ್ದ ಈಶ್ವರಪ್ಪ ಈಗ ಪ್ಲೇಟು ಬದಲಾಯಿಸಿದ್ದಾರೆ. ದಿನಕ್ಕೊಂದು ಹೇಳಿಕೆ ಕೊಡುತ್ತಿದ್ದಾರೆ. ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ರಾಮಲಾಲ್ ಬಂದರೂ, ರಾಜ್ಯ ಉಸ್ತುವಾರಿ ಮುರುಳೀಧರ ರಾವ್ ಏನೇ ಎಚ್ಚರಿಕೆಯಿತ್ತರೂ ಪರಿಸ್ಥಿತಿ ಸುಧಾರಿಸುತ್ತಿಲ್ಲ. ಯಡ್ಡಿ ರಾಜ್ಯಾಧ್ಯಕ್ಷರಾದ ನಂತರ ಇನ್ನೇನು ಬಿಜೆಪಿಯದ್ದೇ ಮುಂದಿನ ಸರ್ಕಾರ ಎಂಬಂತಿದ್ದ ಪರಿಸ್ಥಿತಿ ಈಗಿಲ್ಲ. ಈಶ್ವರಪ್ಪನವರ ಜೊತೆ ಮಾತಾಡುತ್ತೇನೆಂದು ಯಡ್ಡಿ ಪುಷ್ಪಗುಚ್ಛ ಹಿಡಿದಿರಬಹುದು. ಕರೆದರೆ ಹೋಗಿ ಮಾತಾಡಲೇನು ಕಷ್ಟ ಎಂದು ಈಶ್ವರಪ್ಪನೂ ಶೇಕ್‌ಹ್ಯಾಂಡ್‌ಗೆ ಮುಂದಾಗಿರಬಹುದು.

ಆದರೆ ಯಡ್ಡಿ-ಈಶ್ವರಪ್ಪ ಮಾತಾಡಿದ ಮಾತ್ರಕ್ಕೇ ಎಲ್ಲವೂ ಮುಗಿದು ಹೋಗುತ್ತಾ?

ಖಂಡಿತಾ ಸಾಧ್ಯವಿಲ್ಲ. ಸಮಸ್ಯೆಯ ಮೂಲ ಶೋಭಾ ಕರಂದ್ಲಾಜೆ, ಆಕೆ ಕರ್ನಾಟಕದ ಜಯಲಲಿತಾ ಆಗದಂತೆ ತಡೆಯಲು ಟ್ರೋಜನ್ ಕುದುರೆಯಷ್ಟೇ ಈಶ್ವರಪ್ಪ. ಯಡ್ಡಿ ಕೊಡಲಾರ ಈಶೂ ಬಿಡಲಾರ. ಇದೆಲ್ಲವನ್ನೂ ನೋಡುತ್ತಿದ್ದರೆ ಮುಂಬರುವ ಚುನಾವಣೆಯ ಜೆಡಿಎಸ್ ಕನಸೆಂಬುದು ದಿನೇದಿನೇ ನಿಜವಾಗುತ್ತಿದೆಯೇ? ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಕುಮಾರಣ್ಣನ ಕನಸಿಗೆ ಸಂಘ ಪರಿವಾರವೇ ನೀರೂ ಗೊಬ್ಬರ ಹಾಕುತ್ತಿದೆಯೇ?

ಎಲ್ಲಿಯ ರಾಯಣ್ಣ ಬ್ರಿಗೇಡ್? ಎಲ್ಲಿಯ ಕರಂದ್ಲಾಜೆ? ಎಲ್ಲಿಯ ಕುಮಾರಣ್ಣ? ರಾಜಕೀಯದ ಒಳಸುಳಿಗಳೇ ನಿಗೂಢ!

■ ರಾ. ಸೋಮನಾಥ್

ಈಶ್ವರಪ್ಪನಿಗಿದು ಗೊತ್ತೆ?

...ವಮೊಗ್ಗ ಪ್ರಾಂತ್ಯದಲ್ಲಿ ರುದ್ರಗೌಡ ಎಂಬ ಸಜ್ಜನ ರಾಜಕಾರಣಿ ...ಕೊಂಡ ಕೂಡಲೇ ಬುಡಕ್ಕೆ ಬಿಸಿನೀರು ಬಿದ್ದ ಬಳ್ಳಾರಿ ಜಾಲಿಯಂತೆ ... ಮುಖ ಹೊತ್ತು ಓಡಾಡುತ್ತಿರುವ ಈಶ್ವರಪ್ಪನಿಗೆ ತನ್ನ ದಿಕ್ಕುತಪ್ಪಿದ ...ಲ್ಲಿ ಕಂಡ ಏಕೈಕ ಆಶಾಕಿರಣ ಸಂಗೊಳ್ಳಿ ರಾಯಣ್ಣ. ಆದರೇನು, ರಾಯಣ್ಣನ ...ನ್ನು ಉಚ್ಚಾರಣೆ ಮಾಡಲೂ ಒಂದಿಷ್ಟು ಯೋಗ್ಯತೆಯ ಅಗತ್ಯವಿದೆ. ...ರೆ ಈಶ್ವರಪ್ಪ ನಿಂತು ಬೆಳೆದ ಆವರಣದಲ್ಲಿ ಪ್ರತಿ ದಿವಸ ಕಿವಿಗೆ ಬಿದ್ದ ...ಗಳೆಂದರೆ ವೀರ ಸಾವರ್ಕರ್, ಗೋಲ್ವಾರ್ಕರ್ ಮತ್ತು ಚಂದ್ರಶೇಖರ ... ಇತ್ಯಾದಿ ಮಹಾವೀರರ ಹೆಸರುಗಳು! ಇವರ ನಡುವೆ ಎಂದೂ ...ಭಾರತದ ಚರಿತ್ರೆಯಲ್ಲಿ ಮೊಟ್ಟಮೊದಲು ಸ್ವಾತಂತ್ರ ಹೋರಾಟ ಮಾಡಿ ...ಿದ ಸಂಗೊಳ್ಳಿ ರಾಯಣ್ಣನ ವಿಚಾರ ಬಿಜೆಪಿ ಪಾಳಯದಲ್ಲಿ ಬಂದಿಲ್ಲ. ...ಸ ಬಳಿಯಿರುವ ರಾಷ್ಟ್ರೋತ್ಥಾನ ಸಾಹಿತ್ಯದಲ್ಲೂ ರಾಯಣ್ಣನ ಬಗ್ಗೆ ... ಸಾಲಿಲ್ಲ. ಇಂತಹ ಸಮಯದಲ್ಲಿ ರಾಯಣ್ಣನ ಜಪ ಮಾಡುತ್ತಿರುವ ...ಪ್ಪ ಒಂದು ರೀತಿ ಹಾಸ್ಯಾಸ್ಪದ ವ್ಯಕ್ತಿ. ನಿಜವಾಗಲೂ ಈ ಸಮಯದಲ್ಲಿ ...ಪ್ಪ ಪೇಜಾವರರ ಮೊರೆ ಹೋಗಬೇಕಿತ್ತು, ಇಲ್ಲ ರಾಮಚಂದ್ರಾಪುರಕ್ಕಾದರೂ ...ಬಹುದಿತ್ತು ಅಥವಾ ಭಾಗವತ. ಇಂತಹ ಅವತಾರ ಪುರುಷರ ಬೆನ್ನು ... ಅದು ಸಮಂಜಸವಾಗಿ ಕಾಣುತ್ತಿತ್ತು, ಅದು ಬಿಟ್ಟು ನಾಡಿನ ಎಲ್ಲ ...ದ ಸ್ಫೂರ್ತಿಯ ಸಂಕೇತದಂತೆ ಕಾಣುತ್ತಿರುವ ರಾಯಣ್ಣನ ಮೊರೆ ...ಬಾರದಿತ್ತು. ರಾಯಣ್ಣ ಕನ್ನಡಿಗರಿಗೆ ಮಾತ್ರ ಹೋರಾಟದ ವೀರನಾಗಿರಲಿಲ್ಲ, ...ಂಗರಿಗಂತೂ ಈತ ಇವತ್ತಿಗೂ ಅಪ್ರತಿಮ ವೀರನಾಗಿಯೇ ...ಉಳಿದಿದ್ದಾನೆ. ಇದಕ್ಕೆ ಪ್ರಖರ ಉದಾಹರಣೆಯನ್ನು ನಮ್ಮ ಓದುಗರಿಗೆ ...ಕೊಡುತ್ತಿದ್ದೇವೆ.

...ಗೊಳ್ಳಿ ರಾಯಣ್ಣ ಕಿತ್ತೂರಿನಿಂದ 14 ಕಿ.ಮೀ ದೂರದಲ್ಲಿರುವ ಸಂಗೊಳ್ಳಿ ...ಳ್ಳಿಯಲ್ಲಿ 1798 ಆಗಸ್ಟ್ 15ರಂದು ಜನಿಸಿದವನು. ಅಚ್ಚರಿ ಎಂದರೆ 26 ...ವರಿ 1831ರಂದು ಆತನನ್ನು ನಂದಗಡದಲ್ಲಿ ಗಲ್ಲಿಗೇರಿಸಲಾಯ್ತು,



ಅವನು ಹುಟ್ಟಿದ ದಿನ ನಾವು ಸ್ವಾತಂತ್ರ ಪಡೆದೆವು. ಆತ ಗೇಣಿಗೇರಿದ ದಿನ ಭಾರತ ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಯ್ತು. ಇವೆರಡೂ ವಿಸ್ಮಯಕಾರಿ ಘಟನೆಗಳು. ಆದರೆ ಈ ದಿನಗಳಂದು ರಾಯಣ್ಣನನ್ನು ನೆನೆಸಿದ ಉದಾಹರಣೆ ಕಡಿಮೆ .

ರಾಯಣ್ಣನ ಹೋರಾಟದ ಗಂಡುಭೂಮಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ. ರಾಯಣ್ಣನ ಬಗ್ಗೆ ಎರಡು ಸಿನಿಮಾ ಕೂಡ ಬಂದಿವೆ. ಈ ಪೈಕಿ ಮೊದಲು ಸಿನಿಮಾ ತೆಗೆದವರು ಮರಾಠಿಗರು.


ಕೊಲ್ಹಾಪುರದ ಚಿತ್ರಪ್ರೇಮಿಗಳೆಲ್ಲಾ ಸೇರಿಕೊಂಡು 1967ರಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಎಂಬ ಚಿತ್ರ ತಯಾರಿಸಿದರು. ಈ ಐತಿಹಾಸಿಕ ಘಟನೆಗೆ ಅಂದಿನ ಮಹಾ ಪ್ರತಿಭಾವಂತರೆಲ್ಲಾ ತಮ್ಮ ಶ್ರಮ ಹಾಕಿದರು. ಅಂದಿನ ಮರಾಠಿ ರಂಗಭೂಮಿಯ ಕಲಾವಿದರೆಲ್ಲಾ ಈ ಚಿತ್ರದಲ್ಲಿ ಅಭಿನಯಿಸಿದರು. ನಿರ್ಮಾಪಕರಾಗಿ ನೇಮಿನಾಥಗಾಟ, ನಿರ್ದೇಶಕರಾಗಿ ಬಿ.ಟಿ. ಅಥಣಿ ಗುರುಬಾಳ ದುಡಿದರೆ ಪಾತ್ರವರ್ಗದಲ್ಲಿ ಅಭಿಭಟ್ಟಾಚಾರ್ಯ (ಅತಿಥಿ ನಟರು), ವಿ.ಎಸ್. ಪಾಟೀಲ್, ಕಾಮಿನಿಕದಂ, ದಾದಾ ಸಾಳವಿ, ಪಣಶೇಖರ್, ಲೀಲಾಗಾಂಧಿ ಇವರೆಲ್ಲಾ ಇದ್ದರು. ಲಕ್ಷ್ಮಣ ಜಿರಳೇಕರ ಸಂಗೀತ ನೀಡಿದರೆ, ಭುಜೇಂದ್ರ ಮಹಿಪವಾಡಿ ಗೀತರಚನೆ ಮಾಡಿದರು. ಛಾಯಾಗ್ರಹಣ ಶಂಕರ ನಾರ್ವೇಕರ. ಹಿನ್ನೆಲೆ ಗಾಯನ ಲತಾ ಮಂಗೇಶ್ಕರ್, ಆಶಾ ಭೋಂಸ್ಲೆ, ಉಷಾ ಮಂಗೇಶ್ಕರ್, ಮನ್ನಾಡೆ ಇಂತಹ ದಿಗ್ಗಜರೆಲ್ಲಾ ಈ ಚಿತ್ರಕ್ಕೆ ಹಾಡಿದ್ದಾರೆ. ಈ ಚಿತ್ರಕ್ಕೆ ತಮ್ಮ ದನಿಯನ್ನು ಧಾರೆ ಎರೆಯುವಾಗ ಕ್ರಾಂತಿವೀರನಿಗೆ ತಾವು ಸಲ್ಲಿಸುವ ಗೌರವವೆಂದು ಭಾವಿಸಿದ್ದರೇ ಹೊರತು ಸಂಭಾವನೆ ವಿಷಯಗಳು ಚರ್ಚೆಗೇ ಬಂದಿರಲಿಲ್ಲವಂತೆ.


ರಾಯಣ್ಣ ಡೋರಿ ಹಳ್ಳದಲ್ಲಿ ಸ್ನಾನ ಮಾಡುತ್ತಿದ್ದ ಸಮಯದಲ್ಲಿ ಏಪ್ರಿಲ್ 8, 1930ರಂದು ಬ್ರಿಟಿಷರು ಬಂಧಿಸಿದರು. ಅದೇ ಡಿಸೆಂಬರ್‌ನಲ್ಲಿ ಆಂಗ್ಲ ಕಮೀಷನರ್ ಅಂಡರ್ಸನ್ ಗಲ್ಲು ಶಿಕ್ಷೆಯ ತೀರ್ಪು ನೀಡಿದ. ಗಲ್ಲಿಗೇರುವ ಮುನ್ನ ರಾಯಣ್ಣ "ನನ್ನಂಥ ನೂರಾರು ಜನ ರಾಯಣ್ಣ ಹುಟ್ಟಿ ಬರುತ್ತಾರೆ. ನನ್ನೊಬ್ಬನ ನೇಣಿನಿಂದ ನಿಮ್ಮ ಸಮಸ್ಯೆ ಶಮನವಾಗುವುದಿಲ್ಲ" ಎಂದು ಘರ್ಜಿಸಿ ಗಲ್ಲಿಗೇರಿದ.

ಆ ಪ್ರದೇಶದಲ್ಲಿ ಅಡ್ಡಾಡಿದರೆ ಮೊನ್ನೆ ನಡೆದ ಘಟನೆಯಂತೆ ಎಲ್ಲವೂ ಭಾಸವಾಗುತ್ತದೆ. ರಾಯಣ್ಣ ಗಲ್ಲಿಗೇರಿ 217 ವರ್ಷಗಳಾದರೂ ಆತ ನಡೆಸಿದ ಗೆರಿಲ್ಲಾ ಯುದ್ಧ ಭೂಮಿಯಲ್ಲಿ ಆತನ ಹೆಜ್ಜೆ ಸಪ್ಪಳವಿದೆ. ಒಂದು ವೇಳೆ ರಾಯಣ್ಣನ ಹೋರಾಟದ ಸ್ಫೂರ್ತಿ ಮೂಡಬೇಕಾದರೆ ಈ ದೇಶಕ್ಕೆ ವ್ರಣದಂತೆ ಅಂಟಿದ ಪುರೋಹಿತಶಾಹಿ ದಮನಕ್ಕೆ ಬಳಸಬೇಕಾಗುತ್ತದೆ. ಅದು ಬಿಟ್ಟು ಪುರೋಹಿತಶಾಹಿಗಳ ಕಾಲಾಳಿನಂತೆ ದುಡಿದು ಯಾರೋ ಭ್ರಷ್ಟ ನಾಯಕನ ಅವಕೃಪೆಗೆ ತುತ್ತಾಗಿ "ಓ ರಾಯಣ್ಣ" ಎಂದು ಕೂಗಿದರೆ ನಿಜಕ್ಕೂ ಅದೊಂದು ಅಕ್ಷಮ್ಯ ಅಪರಾಧವಾಗುತ್ತದೆ. ಇನ್ನೂ ದೊಡ್ಡ ದುರಂತವೆಂದರೆ ಕೆಲ ಮಠಾಧೀಶರೂ ಬಾಲಿಶವಾಗಿ ಮಾತನಾಡುತ್ತ ಈಶ್ವರಪ್ಪನ ಮಾರ್ಗದರ್ಶಕರೂ, ಹಿತೈಷಿಗಳೂ ಆಗಿರುವುದು.

ಈಶ್ವರಪ್ಪ ಇದೆಲ್ಲವನ್ನು ಬಿಟ್ಟು ಇದೇ 26ರಂದು ಒಂದುಕ್ಷಣ ರಾಯಣ್ಣನ ಮತ್ತು ಚೆನ್ನಮ್ಮನ ಬಗ್ಗೆ ಯೋಚಿಸಿದರೆ ಸಾಕು.

■ ಬಿ.ಚಂ


ಬಾಬು ಜಗಜೀವನ್‌ರಾಮ್ ಸಂಘದ ನಾಮಫಲಕ


ಕೆಲಸ ಸಿಗದ ದಲಿತ ಮಹಿಳೆಯರ ಗೋಳು

ಬಳ್ಳಾರಿ: ಗೋನಾಳದ ದಲಿತರ ಮೇಲೆ ಅಮಾನುಷ ಹಲ್ಲೆ!


ಭಾರತಕ್ಕೀಗ ಮೀಸಲಾತಿಯ ಅಗತ್ಯವಿಲ್ಲ ಯಾಕೆಂದರೆ ದೇಶದಲ್ಲಿ ಇಂದು ಜಾತಿ ಎಂಬುದರ ಅಸ್ತಿತ್ವವೇ ಇಲ್ಲ ಅನ್ನೋ ಮೆಟ್ರೋ ಸಿಟಿ ಮಹಾನುಭಾವರ ಮುಖಕ್ಕೆ ಮಂಗಳಾರತಿ ಎತ್ತುವಂಥ ಘಟನೆಗಳು ನಮ್ಮ ಗ್ರಾಮೀಣ ಭಾರತದಲ್ಲಿ ದಿನನಿತ್ಯ ಘಟಿಸುತ್ತಲೇ ಇರುತ್ತವೆ. ಯಥಾಪ್ರಕಾರ ಮೇಲ್ಜಾತಿ ಅಥವಾ ಬಲಾಢ್ಯ ಜಾತಿಗಳ ಅಂತಹ ಅಟ್ಟಹಾಸಕ್ಕೆ ಅಲ್ಲಿ ನಲುಗಿಹೋಗೋದು ದಲಿತ ಮತ್ತು ಕ್ಷೀಣದನಿಯ ಶೂದ್ರ ಸಮುದಾಯಗಳು. ಇವತ್ತು ಜಾತಿಯ ವಿಷಬೀಜ ದೇಶದ ಆತ್ಮದೊಳಗೆ ಅದೆಷ್ಟು ಅನನ್ಯವಾಗಿ ಬೆರೆತುಹೋಗಿದೆಯೆಂದರೆ ತಳಸಮುದಾಯಗಳ ಮೇಲೆ ಜಾತಿದಬ್ಬಾಳಿಕೆ ನಡೆಸಲು ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ ವೈಗೈರೆಗಳಂತ ಮೇಲ್ಜಾತಿಗಳೇ ಬೇಕಾಗಿಲ್ಲ. ಸ್ವತಃ ಮೀಸಲಾತಿ ನೆರಳಲ್ಲೇ ಬಲಾಢ್ಯ ಸಮುದಾಯಗಳಾಗಿ ರೂಪುಗೊಂಡ ಕೆಲ ಶೂದ್ರ ಸಮುದಾಯಗಳೇ ಸಮಾನತೆಯ ಪರಿಕಲ್ಪನೆಗೆ ಅಸಹಿಷ್ಣುತೆ ಬೆಳೆಸಿಕೊಂಡಿವೆ. ಬಳ್ಳಾರಿ ಜಿಲ್ಲೆಯ ನಂ.15 ಗೋನಾಳ ಎಂಬ ಪುಟ್ಟ ಊರಿನಲ್ಲಿ ನಡೆದ ದಲಿತರ ಮೇಲಿನ ದೌರ್ಜನ್ಯ ಇದಕ್ಕೊಂದು ತಾಜಾ ಉದಾಹರಣೆ.

ಹೊಸಪೇಟೆ ತಾಲ್ಲೂಕಿನ ಗೋನಾಳದಲ್ಲಿ ಮಾದಿಗ ಸಮುದಾಯವೇ ಅತಿದೊಡ್ಡ ಸಮುದಾಯ. ಊರಿನ ಒಟ್ಟು ಜನಸಂಖ್ಯೆಯಲ್ಲಿ ಶೇ. 40ರಷ್ಟು ಮಾದಿಗರೇ ಇದ್ದರೆ, ಶೇ. 30ರಷ್ಟು ಕುರುಬ ಜನಾಂಗದವರು. ಇನ್ನುಳಿದವರು ಉಳಿದ ಜಾತಿಗಳವರು. ಇಡೀ ದೇಶದ 'ಬಹುಜನ'ರಿಗೆ ಸಿಕ್ಕ ಮನ್ನಣೆಯೇ ಇಲ್ಲಿ ಮಾದಿಗ ಸಮುದಾಯಕ್ಕೂ ಸಿಕ್ಕಿದೆ. ಶೆ. 40ರಷ್ಟಿದ್ದರೂ ಬಲಾಢ್ಯ ಜಾತಿಗಳ ಕಣ್ಣಳತೆಯಂತೆಯೇ ಅವರು ವರ್ತಿಸಬೇಕು. ಇಂಥಾ ಗೋನಾಳದಲ್ಲಿ 3 ವರ್ಷದ ಹಿಂದೆ ಮಾದಿಗ ಸಮುದಾಯದ ಒಂದಷ್ಟು ಯುವಕರು ಡಾ.ಬಾಬು ಜಗಜೀವನ್‌ರಾಮ್ ಯುವಕ ಸಂಘ ಸ್ಥಾಪಿಸಿಕೊಂಡು ಸಂಘದ ನಾಮಫಲಕವನ್ನು ಹಾಕಲು ನಿರ್ಧರಿಸಿದ್ದರು. ಊರಿನ ಮುಖ್ಯ ಸರ್ಕಲ್‌ನಲ್ಲಿ ಇದಕ್ಕೆ ಜಾಗ ಸಿಗದಿದ್ದಾಗ ಕುರುಬ ಸಮುದಾಯದ ವೀರನಗೌಡ ಎಂಬುವವರು ತನಗೆ ಸೇರಿದ್ದ ಸರ್ವೇ ನಂ 201/ಬಿಯಲ್ಲಿ 5 ಅಡಿ ಅಗಲ ಮತ್ತು 5 ಅಡಿ ಉದ್ದದ ಜಾಗವನ್ನು ಬಿಟ್ಟುಕೊಟ್ಟು 24.10.2013 ರಂದು ಕರಾರು ಬರೆದುಕೊಟ್ಟಿದ್ದರು.

ಇತ್ತ ಕುರುಬ ಸಮುದಾಯದ ವೀರನಗೌಡ ಫಲಕ ಹಾಕಲು ಜಾಗಕೊಟ್ಟು ಸೌಹಾರ್ದತೆ ಮೆರೆದಿದ್ದರೆ ಅತ್ತ ಅದೇ ಕುರುಬ ಸಮುದಾಯದ ಶರಣಪ್ಪ, ಹೊಸಗೇರಪ್ಪ ಉವಣ್ಣ, ನಾಗರಾಜ, ಹೊನ್ನೂರಪ್ಪ, ಕೇರ್ ದೊಡ್ಡಿ ಎಂಬುವವರು ಮುಖ್ಯ ಸರ್ಕಲ್‌ನಲ್ಲಿ ಕೆಳಜಾತಿಯವರು ನಾಮಫಲಕ ಹಾಕಬಾರದೆಂದು ತಡೆಯೊಡ್ಡಿದ್ದರು. ಈ ವಿಚಾರಕ್ಕೆ ಮಾದಿಗ ಮತ್ತು ಕುರುಬ ಸಮುದಾಯದ ನಡುವೆ ದೊಡ್ಡ ಜಗಳವೇ ನಡೆದಿತ್ತು. ಆದರೂ ಜಗಜೀವನರಾಂ ಸಂಘದ ಫಲಕ ಪ್ರತಿಷ್ಠಾಪನೆಗೊಂಡಿತ್ತು. ಆದಾದ ಕೆಲದಿನಗಳಲ್ಲಿ ಆ ನಾಮಫಲಕಕ್ಕೆ ಕಿಡಿಗೇಡಿಗಳು ಕಲ್ಲಿನಿಂದ ಗೀಚಿ ವಿರೂಪಗೊಳಿಸಿದ ಘಟನೆ ನಡೆದು ಆಕ್ರೋಶಗೊಂಡ ದಲಿತರು, ಕುರುಬ ಸಮುದಾಯದವರ ಮೇಲೆ ದೂರು ದಾಖಲಿಸಿದ್ದರು. ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣಗೊಂಡು ಪೊಲೀಸರು ಮಧ್ಯಪ್ರವೇಶಿಸಿ ಶಾಂತಿಸಭೆ ನಡೆಸಿ ವಾತಾವರಣ ತಿಳಿಗೊಳಿಸಲಾಗಿತ್ತು.

ಆಗಿನಿಂದಲೂ ಕುರುಬರ ಒಂದು ಗುಂಪಿಗೆ ಮಾದಿಗರ ಮೇಲೆ ಸಿಟ್ಟು ಇದ್ದೇ ಇತ್ತು. ಮೊನ್ನೆ ಜನವರಿ 2ರಂದು ದಲಿತರಿಗೆ ನಾಮಫಲಕ ಹಾಕಲು ಜಾಗಕೊಟ್ಟಿದ್ದ ಕುರುಬರ ವೀರನಗೌಡನ ಮಗ ಸೈಕಲ್‌ನಲ್ಲಿ ಗುದ್ದಿದ್ದಾನೆ ಎಂಬ ನೆಪವಿಟ್ಟುಕೊಂಡು ಕುರುಬರ ಹೊನ್ನುರಪ್ಪನ ಗುಂಪು ಅವನ ಮೇಲೆ ಹಲ್ಲೆ ಮಾಡಿತ್ತು. ಸಣ್ಣ ವಿಚಾರಕ್ಕೆ ಶುರುವಾದ ಗಲಾಟೆ ನಿಧಾನಕ್ಕೆ ಎರಡೂ ಕುರುಬ ಬಣಗಳ ಮಧ್ಯೆ ವಿಕೋಪಕ್ಕೆ ತಿರುಗಿ ರಾತ್ರಿ 8 ಗಂಟೆಯುವರೆಗೂ ಮುಂದುವರೆದಿತ್ತು.


ತಮ್ಮ ಪರವಿರುವ ಕಾರಣಕ್ಕೇ ವೀರನಗೌಡನ ಮನೆಯವರ ಮೇಲೆ ಹಲ್ಲೆ ಮಾಡುತ್ತಿರುವುದು ತಿಳಿದ ಮಾದಿಗ ಸಮುದಾಯದ ಬನ್ನಪ್ಪ ಮತ್ತು ಸಂಗಡಿಗರು ಜಗಳ ಬಿಡಿಸಲು ಮಧ್ಯ ಬಂದಿದ್ದರು. ಆಗ ತಮ್ಮ ಆಕ್ರೋಶವನ್ನೆಲ್ಲ ಮಾದಿಗ ಸಮುದಾಯದ ಮೇಲೆ ತಿರುಗಿಸಿದ ಹೊನ್ನೂರಪ್ಪನ ಕುರುಬರ ಬಣ 'ಇದನ್ನೆಲ್ಲ ಕೇಳೋಕ್ ನೀವ್ ಯಾರೋ ಮಾದಿಗ ಸೂಳೆಮಕ್ಕಳಾ' ಅಂತ ಹೀನಾಮಾನ ಬೈದಿದಲ್ಲದೆ ಹಳೆಯ ಜಿದ್ದನ್ನೆಲ್ಲ ಕೈಗೆಳಿಸಿಕೊಂಡು ಮಾದಿಗರ ಮೇಲೆ ಹಲ್ಲೆ ಮಾಡಿದ್ದರು. ಈ ಅನಿರೀಕ್ಷಿತ ಹಲ್ಲೆಯಿಂದ ಬಚಾವಾಗಲು ದಲಿತರು ತಮ್ಮ ಕೇರಿಗೆ ಓಡಿಬಂದರೂ ಬಿಡದೆ ಹಿಂಬಾಲಿಸಿ ಬಂದು, ಊರಿನ ಕರೆಂಟ್ ಆಫ್ ಮಾಡಿ ಮಾರಕಾಸ್ತ್ರಗಳಿಂದ ಸಿಕ್ಕಸಿಕ್ಕವರನ್ನು ಥಳಿಸಿದ್ದರು. ಅಡ್ಡಬಂದ ಹೆಂಗಸರು, ಮಕ್ಕಳ ಮೇಲೆಯೂ ಹಲ್ಲೆ ನಡೆಸಿದ್ದರು. ಬನ್ನಪ್ಪ, ಯುವರಾಜ, ಶಾಂತಮೂರ್ತಿ, ದೇವಣ್ಣ, ಮಂಜುನಾಥ ಮತ್ತು ಸುಂಕಮ್ಮ ಸೇರಿದಂತೆ ಒಟ್ಟು ಎಂಟು ಮಾದಿಗ ಸಮುದಾಯದವರಿಗೆ ಗಂಭೀರ ಏಟುಗಳು ಬಿದ್ದಿದ್ದವು.


ದೂರು ದಾಖಲಿಸಿರುವ ಎಫ್.ಐ.ಆರ್ ಗಳು

ಪೆಟ್ಟು ತಿಂದವರ ಮೇಲೆಯೇ ಕೇಸ್!

ಬಲಾಢ್ಯ ಜಾತಿ ಗುಂಪಿನಿಂದ ನಡೆಯುತ್ತಿದ್ದ ಈ ಅಮಾನುಷ ದಾಳಿಯಿಂದ ತಪ್ಪಿಸಿಕೊಳ್ಳಲು ದಲಿತರು ಚೆಲ್ಲಾಪಿಲ್ಲಿಯಾಗಿ ಓಡಿಹೋಗಿದ್ದರು. ಗಲಭೆಯ ಮಾಹಿತಿ ತಿಳಿದು ರಾತ್ರಿ 11ರ ಸುಮಾರಿಗೆ ಬಂದ ಪೊಲೀಸರು ಪರಿಸ್ಥಿತಿ ಹತೋಟಿಗೆ ತರಲು ಹೆಣಗಾಡಿದ್ದರು. ದಲಿತರ ಮೇಲೆ ಹಲ್ಲೆ ಮಾಡಿದ್ದಲ್ಲದೆ, ಅವರನ್ನೇ ತಪ್ಪಿತಸ್ಥರನ್ನಾಗಿಸಲು ಪ್ಲಾನ್ ಹಾಕಿದ ಹೊನ್ನೂರಪ್ಪನ ಬಳಗ ದಲಿತರ ಮನೆ ಮುಂದೆ ನಿಂತಿದ್ದ ದ್ವಿಚಕ್ರ ವಾಹನವೊಂದನ್ನು ಊರ ಹನುಮಪ್ಪನ ಗುಡಿ ಮುಂದಕ್ಕೆ ತಳ್ಳಿತಂದು, ಅದರೊಳಕ್ಕೆ ಒಂದಷ್ಟು ಮಾರಕಾಸ್ತ್ರ ತುಂಬಿ ಫೋಟೊ ತೆಗೆದು ದಲಿತರ ವಿರುದ್ಧವೇ ದೂರು ನೀಡಿದ್ದರು. ದಲಿತರು ದ್ವಿಚಕ್ರವಾಹನಗಳಲ್ಲಿ ಮಾರಕಾಸ್ತ್ರಗಳನ್ನು ತುಂಬಿತಂದು ತಮ್ಮ ಮೇಲೆ ಹಲ್ಲೆ ಮಾಡಿ, ಕೊಲೆಗೆ ಯತ್ನಿಸಿದ್ದಾರೆ ಅನ್ನೋದು ಅವರ ಸುಳ್ಳು ದೂರಿನ ಸಾರಾಂಶ. ಅದರ ಸತ್ಯಾಸತ್ಯತೆಯ ವಿಮರ್ಶೆಗಿಳಿಯದ ಪೊಲೀಸರು ಆ ದೂರನ್ನೇ ಆಧರಿಸಿ ಮಾದಿಗ ಸಮುದಾಯದ 56 ಜನರ ಮೇಲೆ ಮತ್ತು ಕುರುಬ ಸಮುದಾಯದ 12 ಜನರ ಮೇಲೆ ಸೆಕ್ಷನ್ 307ರ ಅಡಿ ಕೇಸು ದಾಖಲಿಸಿದ್ದಾರೆ. ದೂರಿನಲ್ಲಿ ದಾಖಲಾದ ಮಾದಿಗ ಸಮುದಾಯದ 56 ಆಪಾದಿತರಲ್ಲಿ ವೃದ್ಧರು, ಮಹಿಳೆಯರೂ ಇದ್ದಾರೆ!

ಮಾರನೆಯ ದಿನ, ಜನವರಿ 03ರಂದು ದಲಿತರು ತಮ್ಮ ಮೇಲಾದ ಹಲ್ಲೆಯ ಬಗ್ಗೆ ದೂರು ನೀಡಲು ಹೋದಾಗ 'ಎಲ್ಲರದೂ ಸೇರಿಸಿ ಒಂದು ದೂರು ಮಾತ್ರ ನೀಡಿ ಸಾಕು' ಎಂದು ಪೊಲೀಸರು ತಿಳಿಸಿದ್ದರು. ಅದರಂತೆ ಬನ್ನಪ್ಪ ಕುರುಬ ಸಮುದಾಯದ 58 ಜನರ ವಿರುದ್ಧ ದೂರು ನೀಡಿದ್ದರು. ಅದನ್ನು ಆಧರಿಸಿ ಪೊಲೀಸರು 58 ಜನರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಯನ್ವಯ ಪ್ರಕರಣ ದಾಖಲಿಸಿಕೊಂಡಿದ್ದಾರಾದರು ಇದುವರೆಗೂ ಒಬ್ಬ ಆರೋಪಿಯನ್ನೂ ಬಂಧಿಸಿಲ್ಲ.


ಹೋರಾಟಗಾರ ಕರಿಯಪ್ಪ ಗುಡಿಮನಿ

ಗೋನಾಳದಲ್ಲಿ ಮುಂದೇನು?

ಗೋನಾಳದಲ್ಲಿ ದಲಿತರಿಗಾಗುತ್ತಿರುವ ಅನ್ಯಾಯ ಖಂಡಿಸಿ ಅವರ ಪರವಾಗಿ ಕರ್ನಾಟಕ ಮಾದಿಗ ರಕ್ಷಣಾ ವೇದಿಕೆಯ ಕರಿಯಪ್ಪ ಗುಡಿಮನಿರವರು ಗಟ್ಟಿಯಾಗಿ ನಿಂತಿದ್ದಾರೆ. ಹಲ್ಲೆಗೊಳಗಾದ ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲು ಮಾಡಿದ್ದಲ್ಲದೇ ಹಲ್ಲೆಗೊಳಗಾದ 7 ಜನರಿಂದಲೂ ಪ್ರತ್ಯೇಕ ದೂರು ದಾಖಲಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಲಾಡ್, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ತಹಸೀಲ್ದಾರ್‌ರನ್ನು ಭೇಟಿ ಮಾಡಿ ಹಲವು ಹಕ್ಕೊತ್ತಾಯಗಳನ್ನು ಮುಂದಿಟ್ಟಿದ್ದಾರೆ. ಹಲ್ಲೆಗೊಳಗಾದ ದಲಿತ ಕುಟುಂಬಗಳಿಗೆ ತಲಾ 1 ಲಕ್ಷ ರೂ. ಪರಿಹಾರ ನೀಡಬೇಕು, ಮುಂದೆ ಅವರು ಇದೇ ಭೂಮಾಲೀಕರ ಹತ್ತಿರ ಕೂಲಿಗೆ ಹೋಗಬಾರದು. ಹಾಗಾಗಿ ದಲಿತರಿಗೆ ಭೂಮಿ ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ಗೋನಾಳದಲ್ಲಿ 3 ಬಾರಿ ದೌರ್ಜನ್ಯ ನಡೆದಿದ್ದರೂ ಪೊಲೀಸ್ ಇಲಾಖೆ ನಿರ್ಲಕ್ಷ್ಯ ವಹಿಸಿರುವುದನ್ನು ಖಂಡಿಸಿ ಈ ಪ್ರಕರಣದಲ್ಲಿ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಮತ್ತು ದಲಿತರ ಮೇಲಿನ ಸುಳ್ಳು ಕೇಸುಗಳನ್ನು ರದ್ದುಗೊಳಿಸಬೇಕೆಂದು ಮನವಿ ಮಾಡಿದ್ದಾರೆ. ಮುಂದೆಂದೂ ಈ ರೀತಿಯ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು ಇಲ್ಲದಿದ್ದಲ್ಲಿ ಜಿಲ್ಲೆಯಾದ್ಯಂತ ಉಗ್ರ ಹೋರಾಟ ನಡೆಸುವುದಾಗಿ ಕರೆ ನೀಡಿದ್ದಾರೆ.

ಒಟ್ಟಿನಲ್ಲಿ ಜಿಲ್ಲೆಯಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವಿನ ತಿಕ್ಕಾಟ ದಿನದಿಂದ ದಿನಕ್ಕೆ ತಾರಕಕ್ಕೇರುತ್ತಿದೆ. ಬಡವರಿಗೆ, ದಲಿತರಿಗೆ ದಕ್ಕಬೇಕಾದ ನ್ಯಾಯಯುತ ಹಕ್ಕುಗಳು ಸಿಗದಿದ್ದಾಗ ಅವರು ಹೋರಾಟದ ದಾರಿ ಹಿಡಿಯುತ್ತಿದ್ದಾರೆ. ಈ ರೀತಿ ಸಿಡಿದೆದ್ದವರ ಮೇಲೆ ಹಲ್ಲೆ, ದೌರ್ಜನ್ಯ ನಡೆಸಿ ಅವರನ್ನು ಬಗ್ಗು ಬಡಿಯಲು ಮೇಲ್ಜಾತಿ ಮತ್ತು ಬಲಾಢ್ಯ ಜಾತಿಗಳ ಭೂಮಾಲೀಕರು ಯತ್ನಿಸುತ್ತಿದ್ದಾರೆ. ಆದರೆ ದಲಿತರ ಸ್ವಾಭಿಮಾನ ಅದಕ್ಕೆ ಬಗ್ಗುತ್ತಿಲ್ಲ. ಬದಲಿಗೆ ಮತ್ತಷ್ಟು ಕೆಚ್ಚಿನಿಂದ ಹೋರಾಟ ಮುಂದುವರೆಸುತ್ತಿದ್ದಾರೆ. ಇದು ಆಳುವ ಸರ್ಕಾರಕ್ಕೆ ದೊಡ್ಡ ಎಚ್ಚರಿಕೆಯ ಗಂಟೆಯಾಗಬೇಕಿದೆ. ಇಲ್ಲದಿದ್ದಲ್ಲಿ ಇಂತಹ ನೂರಾರು ಘಟನೆಗಳು ಘಟಿಸುವುದರಲ್ಲಿ ಆಶ್ಚರ್ಯವಿಲ್ಲ.

■ ಮುತ್ತುರಾಜು

ಭೂ ಮಾಲೀಕರ ಅಟ್ಟಹಾಸ, ದಲಿತರ ದಿಗ್ವಿಜಯ


ರಾಜ್ಯಾದ್ಯಂತ ಬಹಳಷ್ಟು ಭೂಸುಧಾರಣೆಗಳು ನಡೆದಿದ್ದರೂ ಬಳ್ಳಾರಿ ಜಿಲ್ಲೆಯಲ್ಲಿ ಮಾತ್ರ ನ್ಯಾಯಯುತವಾಗಿ ಭೂಹಂಚಿಕೆಯಾಗಿಲ್ಲ. ನಿರ್ಗತಿಕರ ದನಿಯಾಗಬೇಕಾದ ಭೂನ್ಯಾಯ ಮಂಡಳಿಯಲ್ಲಿಯೂ ಭೂಮಾಲೀಕರೆ ತುಂಬಿದ್ದಾರೆ. ಜಿಲ್ಲೆಯಲ್ಲಿ ಬಹುತೇಕ ದಲಿತರಿಗೆ ಭೂಮಿಯ ಹಕ್ಕು ಸಿಕ್ಕಿಲ್ಲ. 70-80 ರ ದಶಕದಲ್ಲಿ ಕೆಲ ದಲಿತರ ಹೆಸರಿಗೆ ಭೂಮಿ ಸಿಕ್ಕರೂ ಆ ಭೂಮಿಯ ಒಡೆತನ ಮಾತ್ರ ಇವತ್ತಿನವರೆಗೂ ಭೂಮಾಲೀಕರ ಕೈಯಲ್ಲೇ ಇದೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲೂ ದಲಿತರೊಳಗೆ ತಮ್ಮ ಹಕ್ಕುಗಳ ಬಗೆಗಿನ ಪ್ರಜ್ಞೆ ಹೆಚ್ಚುತ್ತಿದೆ. ನಮ್ಮ ಭೂಮಿ ನಮ್ಮ ಹಕ್ಕು, ಸಹಿಸಲಾರೆವು ಪರರ ಸೊಕ್ಕು ಎಂದು ಭೂಮಿಗಾಗಿ ಹೋರಾಟಕ್ಕಿಳಿದಿದ್ದಾರೆ. ಕರ್ನಾಟಕ ಜನಶಕ್ತಿ ಮತ್ತು ಕರ್ನಾಟಕ ಮಾದಿಗರ ರಕ್ಷಣಾ ವೇದಿಕೆಯ ಸಂಘಟನೆಗಳು ಇಲ್ಲಿನ ದಲಿತರಿಗೆ ಅವರ ನ್ಯಾಯಬದ್ಧ ಭೂಮಿಯ ಹಕ್ಕು ದೊರಕಿಸಿಕೊಡಲು ಕಾರ್ಯನಿರತವಾಗಿವೆ. ಇಂತದ್ದೇ ಒಂದು ಭೂ ಹೋರಾಟದಲ್ಲಿ ಇದೇ ಗೋನಾಳ ಪಕ್ಕದ ಶ್ರೀರಾಮ ರಂಗಾಪುರ ಗ್ರಾಮದಲ್ಲಿ ದಲಿತರಿಗೆ ಭೂಮಿಯ ಹಕ್ಕು ಸಿಕ್ಕಿದೆ. 1980ರ ಭೂಸುಧಾರಣೆ ಕಾಯ್ದೆಯನ್ವಯ ಗ್ರಾಮದ ಭೂಮಾಲೀಕ ಭೀಮಸೇನಿ ಕೊಂಡಯ್ಯನಿಂದ ಸರ್ವೇ ನಂ 116ರಲ್ಲಿ 134 ಎಕರೆ ಭೂಮಿಯನ್ನು ಅಲ್ಲಿನ ಸುಮಾರು 20 ದಲಿತ ಕುಟುಂಬಗಳಿಗೆ ಹಂಚಲಾಗಿತ್ತು. ಆದರೆ ಭೂಹಂಚಿಕೆ ಕಾಗದದ ಮೇಲೆ ಆಗಿತ್ತೆ ವಿನಃ 2013ರವರೆಗೂ ಭೂಮಿ ಭೀಮಸೇನಿ ಕುಟುಂಬದ ಕೈಯಲ್ಲೇ ಇತ್ತು. ದಲಿತ ಕುಟುಂಬಗಳು ಅದೇ ಜಮೀನಿನಲ್ಲಿ ಕೂಲಿ ಮಾಡುತ್ತಾ ಜೀವನ ಸಾಗಿಸುತ್ತಿದ್ದರು.


ಆಗ ಕರ್ನಾಟಕ ಜನಶಕ್ತಿ ಮತ್ತು ಕರ್ನಾಟಕ ಮಾದಿಗರ ರಕ್ಷಣಾ ವೇದಿಕೆಯ ಮುಖಂಡ ಕರಿಯಪ್ಪ ಗುಡಿಮನಿ ಮತ್ತು ಕುಮಾರ್ ಸಮತಳರವರು ಆ ಇಡೀ ಭೂಮಿಯ ದಾಖಲೆಗಳನ್ನು ತೆಗೆಸಿ ಪರೀಕ್ಷಿಸಿ, ಅಲ್ಲಿನ ಜನರನ್ನು ಸಂಘಟಿಸಿ ಭೂ ಹೋರಾಟವೊಂದಕ್ಕೆ ಕೈಹಾಕಿದ್ದರು. ಸುಮಾರು 3 ವರ್ಷಗಳ ಕಾಲ ನಿರಂತರವಾಗಿ ನಡೆದ ಹೋರಾಟದಲ್ಲಿ ದಲಿತರು ಜಯ ಸಾಧಿಸಿದ್ದರು. ಆದಾದಮೇಲೂ ಕಾನೂನುಪ್ರಕಾರ ಭೂಮಿ ತಮ್ಮದಾದರೂ ಅಲ್ಲಿ ಉಳುಮೆ ಮಾಡಲು ಭೀಮಸೇನಿ ಕುಟುಂಬಕ್ಕೆ ಹೆದರಿ ದಲಿತರು ಸುಮ್ಮನಿದ್ದರು. ಕೊನೆಗೆ ಎಲ್ಲಾ ಜನಪರ ಸಂಘಟನೆಗಳ ನೇತೃತ್ವದಲ್ಲಿ ದಲಿತರಿಗೆ ಧೈರ್ಯ ತುಂಬಿ 2013ರ ಜುಲೈನಲ್ಲಿ ಉಳುಮೆ ಶುರು ಮಾಡಿಸಲಾಯ್ತು. ಅಲ್ಲೀಗ ದಲಿತರು ಒಳ್ಳೆಯ ಬೆಳೆ ತೆಗೆಯುತ್ತಿದ್ದಾರೆ.

ಅದೇರೀತಿ ಬಳ್ಳಾರಿಯ ನಗರದ ಹೊರವಲಯದ ಬಂಡಿಹಟ್ಟಿ ಮತ್ತು ದಾನಪ್ಪ ಬೀದಿಯ 44 ಕುಟುಂಬಗಳಿಗೆ 1970-71ರಲ್ಲಿ ಭೂನ್ಯಾಯ ಮಂಡಳಿಯಿಂದ 131 ಎಕರೆ ಭೂಮಿ ಮಂಜೂರಾಗಿತ್ತು. 1994 ರಿಂದ 1999 ರವರೆಗೆ ಬುಡಾ ಅಧ್ಯಕ್ಷನಾಗಿದ್ದ ಕಾಂಗ್ರೆಸ್‌ನ ಎನ್. ಪ್ರತಾಪರೆಡ್ಡಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಕೋಟಿ ಬೆಲೆ ಬಾಳುವ 131 ಎಕರೆ ಜಮೀನನ್ನು ತನ್ನ ಮತ್ತು ತನ್ನ ಪತ್ನಿಯ ಹೆಸರಿಗೆ 2005ರಲ್ಲಿ ಎಕರೆಗೆ 15 ಸಾವಿರ ರೂ.ಗಳಂತೆ ಕಾನೂನುಬಾಹಿರವಾಗಿ ಅಕ್ರಮ ಖಾತೆ ಮಾಡಿಸಿಕೊಂಡಿದ್ದ ಅಲ್ಲದೇ ಅಲ್ಲಿನ ಫಲಾನುಭವಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸುವ ಕೆಲಸ ಶುರು ಮಾಡಿದ್ದಾನೆ. ತಳಸಮುದಾಯಗಳ 44 ಕುಟುಂಬಗಳು ಇದನ್ನು ವಿರೋಧಿಸಿದಾಗ ಅವರ ಮೇಲೆ ಹಲ್ಲೆ, ದೌರ್ಜನ್ಯ ನಡೆಸಿ ಕೊಲೆ ಬೆದರಿಕೆ ಸಹ ಹಾಕಿಸಿದ್ದಾನೆ. ಈ ಹೋರಾಟವನ್ನೂ ಸಂಘಟನೆಯ ಮುಖಂಡರು ಸವಾಲಾಗಿ ಸ್ವೀಕರಿಸಿ ಮುಂದುವರೆಸಿದ್ದಾರೆ. ಅದೇ ಭೂಮಿಯಲ್ಲಿ ಜನ ಉಳುಮೆ ಮಾಡಲು ಮುಂದಾಗಿದ್ದಾರೆ. ಇವೆಲ್ಲವೂ ದಲಿತರು ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ದನಿಯೆತ್ತುತ್ತಿರುವ ನಿದರ್ಶನಗಳಾಗಿವೆ.

ನಂಜನಗೂಡು: ಪ್ರಸಾದ್‌ಗೆ ಸೆಡ್ಡು ಹೊಡೆಯಲು ಕಳಲೆ ಕಾಂಗ್ರೆಸ್‌ಗೆ?







ಶ್ರೀನಿವಾಸ್ ಪ್ರಸಾದ್

ಕಳಲೆ ಕೇಶವಮೂರ್ತಿ

ಸದ್ಯಕ್ಕೆ ರಾಜ್ಯದ ಗಮನ ನೆಟ್ಟಿರೋದು ಎರಡೇ ...ರಗಳ ಮೇಲೆ. ಒಂದು ಯಡ್ಡಿ-ಈಶು ಬ್ರಿಗೇಡ್ ... ಮತ್ತೊಂದು ನಂಜನಗೂಡಿನಲ್ಲಿ ನಡೆಯೋ ಜಂಗೀಕುಸ್ತಿ. ...ದಲನೆಯದ್ದಕ್ಕಂತೂ ಇನ್ನೂ ಒಂದೂವರೆ ವರ್ಷ ...ಡಿಟಿ ಇರೋದರಿಂದ ಸದ್ಯಕ್ಕೆ ನಂಜನಗೂಡಿನ ...ಚುನಾವಣೆಯೇ ರಾಜ್ಯದ, ಅದರಲ್ಲೂ ಹಳೇ ಮೈಸೂರು ...ದ, ಹೈಲೈಟು. ಅಸಲಿಗೆ ನಂಜನಗೂಡಿಗೆ ...ಹದ್ದೊಂದು ಧುತ್ ಚುನಾವಣೆಯ ಅವಶ್ಯಕತೆಯೇ ...ಲ್ಲ. ಆದರೆ ಮಂತ್ರಿಗಿರಿಯಿಂದ ಕೆಳಗಿಳಿಸಿದ ಪ್ರತಿಷ್ಠೆಯ ...ಗೆ ಶ್ರೀನಿವಾಸ್ ಪ್ರಸಾದ್ ಜನರ ಮೇಲೆ ...ಚುನಾವಣೆಯ ಹೊರೆ ಹೊರಿಸಿದ್ದಾರೆ. ಮುಂದಿನ ... ಎದುರಾಗಲಿರುವ ಚುನಾವಣೆಯ ಹೊಸ್ತಿಲಿನ ...ರಿಯಲ್ಲಿರೋ ಕಾಂಗ್ರೆಸ್ ಸರ್ಕಾರಕ್ಕೆ ಇದು ಸವಾಲಿನ ...ತಿ. ಹಾಗಾಗಿಯೇ ಬಿಜೆಪಿಯ ಹುರಿಯಾಳಾಗಿ ...ಡಕ್ಕಿಳಿಯುತ್ತಿರುವ ಶ್ರೀನಿವಾಸ್ ಪ್ರಸಾದ್‌ಗೆ ಸಖತ್ ...ೋಟಿ ಕೊಡಲು ಕಾಂಗ್ರೆಸ್ ಸಜ್ಜಾಗಿದೆ. ಆದರೆ ಅದಕ್ಕೆ ...ದ್ದು ಪ್ರಬಲ ಅಭ್ಯರ್ಥಿಯ ಸಮಸ್ಯೆ. ಆ ಸಮಸ್ಯೆಯನ್ನು ...ಹರಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ... ಎಲೆಕ್ಷನ್‌ನಲ್ಲಿ ಶ್ರೀನಿವಾಸ್ ಪ್ರಸಾದ್‌ಗೆ ಪ್ರಬಲ ...ೋಟಿ ಕೊಟ್ಟು ಕೇವಲ ಎರಡೂವರೆ ಸಾವಿರ ಚಿಲ್ಲರೆ ...ಗಳಿಂದ ಸೋತಿದ್ದ ಜೆಡಿಎಸ್‌ನ ಕಳಲೆ ಕೇಶವಮೂರ್ತಿ ...ನ್ನು ಕಾಂಗ್ರೆಸ್ ತನ್ನ ತೆಕ್ಕೆಗೆ ತೆಗೆದುಕೊಂಡು ಅಭ್ಯರ್ಥಿ ...ಗಿಸೋದು ಬಹುತೇಕ ಖಚಿತವಾಗಿದೆ. ಈ ಕುರಿತು ...ಎಸ್ ವರಿಷ್ಠ ದೇವೇಗೌಡರ ಜೊತೆ ಒಂದು ಸುತ್ತಿನ ...ುಕತೆಯೂ ಮುಗಿದು, ಅವರೂ ಸಮ್ಮತಿಸಿದ್ದಾರೆ ...ಾಗುತ್ತಿದೆ.

...ಸೂಕ್ತ ಅಭ್ಯರ್ಥಿಯ ಹುಡುಕಾಟಕ್ಕೆಂದೇ ಕಾಂಗ್ರೆಸ್ ...ಕೆಪಿಸಿಸಿ ಉಪಾಧ್ಯಕ್ಷ ಎಲ್.ಹನುಮಂತಯ್ಯ ನೇತೃತ್ವದಲ್ಲಿ ...ತಿಯೊಂದನ್ನು ರಚಿಸಿತ್ತು. ಆ ಸಮಿತಿ ನೀಡಿದ ...ಯನ್ನಾಧರಿಸಿ ಮತ್ತು ಸ್ವತಃ ಸಿದ್ದರಾಮಯ್ಯ ಮೈಸೂರು ...ಯಲ್ಲಿ ಸತತ ಸಭೆ ನಡೆಸಿ ಈ ಭಾಗದ ನಾಯಕರು, ... ಪಂಚಾಯತಿ ಮಟ್ಟದ ಮುಖಂಡರು, ನಿಗಮ ...ಳಿ ಅಧ್ಯಕ್ಷರು, ಕಾಂಗ್ರೆಸ್ ಅಧ್ಯಕ್ಷರೊಂದಿಗೆ ಚರ್ಚಿಸಿ ... ಕೇಶವಮೂರ್ತಿ ಹೆಸರನ್ನು ಆಯ್ಕೆ ಮಾಡಿದ್ದಾರೆ.

...ಆರಂಭದ ಇಂತಹ ಚರ್ಚೆಗಳಲ್ಲಿ ಕೆಲವು ಮುಖಂಡರು ... ಉಸ್ತುವಾರಿ ಹಾಗೂ ಲೋಕೋಪಯೋಗಿ ಸಚಿವ ...ಸಿ.ಮಹದೇವಪ್ಪ ಅವರನ್ನೇ ಕಣಕ್ಕಿಳಿಸುವ ಸಲಹೆ ನೀಡಿದ್ದರು. ಆದರೆ ಸಚಿವ ಮಹದೇವಪ್ಪ ತಮ್ಮ ಪುತ್ರ ಸುನೀಲ್ ಬೋಸ್‌ನನ್ನು ಕಣಕ್ಕಿಳಿಸಲು ಉತ್ಸುಕರಾಗಿದ್ದರು. ಅದಕ್ಕಾಗೆ ನಂಜನಗೂಡಿನಲ್ಲಿ ಸಮಾವೇಶ ಮಾಡಿದಾಗಿನಿಂದ ಕ್ಷೇತ್ರದಲ್ಲಿ ಯದ್ವಾತದ್ವ ಸುತ್ತಾಡುತ್ತಿದ್ದರು. ಕ್ಷೇತ್ರದ ಜನತೆಗೆ ಭರಪೂರ ಭರವಸೆ ನೀಡುತ್ತಿದ್ದರು. ಆದರೆ, ಜೆಡಿಎಸ್‌ನ ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಅಭ್ಯರ್ಥಿಯಾಗುವುದು ಖಚಿತವಾಗುತ್ತಿದ್ದಂತೆ ತನ್ನ ಮಗನಿಗೆ ಟಿಕೆಟ್ ಗ್ಯಾರೆಂಟಿ ಎಂಬ ಭ್ರಮೆಯಲ್ಲಿದ್ದ ಸಚಿವ ಮಹದೇವಪ್ಪ ಬೇಸರಗೊಂಡಂತೆ ಕಾಣುತ್ತಿದೆ. ನಂಜನಗೂಡು ತಾಲ್ಲೂಕಿನಲ್ಲಿ ಕುಂದುಕೊರತೆ ಸಭೆ ನಡೆಸಲು 3 ದಿನಗಳ ಕಾಲ ಪ್ರವಾಸ ಕೈಗೊಂಡಿದ್ದವರು ಅದೇಕೋ ಒಂದೇ ದಿನಕ್ಕೆ ಪ್ರವಾಸವನ್ನು ಮೊಟಕುಗೊಳಿಸಿ ಸುಮ್ಮನಾಗಿರೋದು ಇದನ್ನು ಪುಷ್ಟೀಕರಿಸುತ್ತದೆ.

ಮಹದೇವಪ್ಪನವರ ಪುತ್ರ ಸುನೀಲ್ ಬೋಸ್ ಮೇಲೆ ಮರಳು ದಂಧೆ ಆರೋಪ, ಅಧಿಕಾರಿಯೊಬ್ಬರು ಲಂಚ ಪಡೆಯಲು ಪ್ರೇರೇಪಿಸಿದ ಆರೋಪ ಇರುವುದರಿಂದ ಆತನನ್ನು ಅಭ್ಯರ್ಥಿಯಾಗಿಸಲು ಹೈಕಮಾಂಡ್ ಒಪ್ಪಿಗೆ ನೀಡಲಿಲ್ಲ. ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಸುನಿಲ್ ಭೋಸ್ ಅಭ್ಯರ್ಥಿಯಾದರೆ ಪ್ರಸಾದ್ ಗೆಲುವು ಸುಲಭ ವಾಗುತ್ತದೆ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನವರಿಗೂ ಆತನನ್ನು ಕಣಕ್ಕಿಳಿಸಲು ಮನಸ್ಸು ಇದ್ದಂತಿಲ್ಲ.

'ನನ್ನ ಮಗ ಸುನಿಲ್ ಬೋಸ್‌ಗೆ ಟಿಕೆಟ್ ಕೊಡಿ ಎಂದು ನಾನು ಯಾರ ಬಳಿಯೂ ಕೇಳಿಲ್ಲ' ಎಂದು ಮಹದೇವಪ್ಪ ಹೊರಗೆ ಹೇಳುತ್ತಿದ್ದರೂ ತಮ್ಮ ಮಗನಿಗೆ ಟಿಕೆಟ್ ಸಿಗುವ ಬಗ್ಗೆ ಅವರಿಗೆ ಭಾರೀ ವಿಶ್ವಾಸವಿತ್ತು. ಬೋಸ್ ಹೆಸರು ಪಟ್ಟಿಯಿಂದ ಹೊರಗುಳಿದ ನಂತರ ಪ್ರಗತಿಪರ ಚಿಂತಕ, ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ಪ್ರೊ.ಎಚ್.ಗೋವಿಂದಯ್ಯ, ತಾಲ್ಲೂಕು ಪಂಚಾಯತಿ ಮಾಜಿ ಅಧ್ಯಕ್ಷ, ಹುರಾ ಕ್ಷೇತ್ರದ ಜಿಲ್ಲಾ ಪಂಚಾಯತಿ ಸದಸ್ಯೆ ಪುಷ್ಪಾರ ಪತಿ ನಾಗೇಶ್‌ರಾಜ್, ಮಾಜಿ ರಾಜ್ಯಪಾಲ ಬಿ.ರಾಚಯ್ಯನವರ ಪುತ್ರ, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿಯವರ ಹೆಸರುಗಳೂ ಕಾಂಗ್ರೆಸ್ ವಲಯದಲ್ಲಿ ಕೇಳಿಬಂದಿದ್ದವು. ಸದ್ಯ ಬಿಜೆಪಿಯಲ್ಲಿರುವ ಕೃಷ್ಣಮೂರ್ತಿ ಅವರ ಹೆಸರೂ ಕೇಳಿಬಂದಿತ್ತು. ಅಂತಹ ಪಟ್ಟಿಯಲ್ಲಿ ಹೆಚ್ಚು ಸದ್ದು ಮಾಡಿದ್ದು ಹುಣಸೂರು ಶಾಸಕ ಎಚ್.ಪಿ.ಮಂಜುನಾಥ್ ಅವರ ನಾದಿನಿ, ಯಂಗ್ ಗ್ಲಾಮರಸ್ ರಾಜಕಾರಣಿ, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ, ಹಾಲಿ ಸದಸ್ಯೆ ಡಾ.ಬಿ.ಪುಷ್ಪಾ ಅಮರನಾಥ್ ಹೆಸರು. ಜೆಡಿಎಸ್‌ನ ಕಳಲೆ ಕೇಶವಮೂರ್ತಿ ಅಭ್ಯರ್ಥಿಯಾಗದೇ ಇದ್ದಲ್ಲಿ ಅಭ್ಯರ್ಥಿಯಾಗಲು ಚಾಮರಾಜನಗರ ಸಂಸದ ಧ್ರುವನಾರಾಯಣ್ ನಿರಾಕರಿಸಿದ್ದೇ ಆದಲ್ಲಿ ಪುಷ್ಪಾ ಅಮರನಾಥ್ ಹೆಸರೇ ನಿಕ್ಕಿಯಾಗುವ ಸಾಧ್ಯತೆ ಇತ್ತು. ಕಳಲೆ ಕೇಶವಮೂರ್ತಿಗೂ ಮುನ್ನ ಸಂಸದ ಆರ್.ಧ್ರುವನಾರಾಯಣ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು, ನಾಯಕರು, ಹೈಕಮಾಂಡ್ ಅವರ ಮೇಲೆ ಒತ್ತಡ ಹಾಕಿದ್ದರು. ಆದರೆ ಧ್ರುವನಾರಾಯಣ್ ಯಾಕೋ ಮನಸ್ಸು ಮಾಡಲಿಲ್ಲ. ಆಗ ಕಾಂಗ್ರೆಸ್‌ಗೆ ಎರಡನೇ ಆಯ್ಕೆಯಾಗಿ ಕಂಡದ್ದು ಜೆಡಿಎಸ್‌ನ ಕಳಲೆ ಕೇಶವಮೂರ್ತಿ.

ಈ ಸಲ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಸಿಕ್ಕರೂ, 2018ರ ಚುನಾವಣೆಗೆ ಮತ್ತೆ ಕಾಂಗ್ರೆಸ್ ತನಗೆ ಟಿಕೆಟ್ ಕೊಡುವ ಬಗ್ಗೆ ಸ್ವತಃ ಕೇಶವಮೂರ್ತಿಗೆ ಅನುಮಾನವಿತ್ತು. ಯಾಕೆಂದರೆ ಈಗೇನೋ ಸದ್ಯಕ್ಕೆ ಕಾಂಗ್ರೆಸ್ ಸರ್ಕಾರಕ್ಕೆ ಕಳಂಕ ಬರುತ್ತೆ ಅಂತ ಪಕ್ಷ ಮಹದೇವಪ್ಪನ ಮಗ ಸುನೀಲ್ ಬೋಸ್‌ಗೆ ನೋ ಅಂದಿರಬಹುದು. ಆದರೆ ಮುಂದಿನ ಚುನಾವಣೆ ವೇಳೆಗೆ ಅವರಿಗೇ ಟಿಕೆಟ್ ಕೊಟ್ಟರೆ ತಾನು ಅತ್ತ ಕಾಂಗ್ರೆಸ್ ಟಿಕೆಟು ಇಲ್ಲ, ಜೆಡಿಎಸ್ ಟಿಕೆಟೂ ಇಲ್ಲ ಅನ್ನೋ ಅಸಹಾಯಕತೆಗೆ ಸಿಲುಕಬೇಕಾಗುತ್ತೆ ಅನ್ನೋ ಅಳುಕು ಅವರಿಗಿತ್ತು ಎನ್ನಲಾಗಿದೆ. ಅದೇ ಕಾರಣಕ್ಕೆ ಸಿದ್ದರಾಮಯ್ಯನವರಿಂದಲೇ ಆಫರ್ ಬಂದಾಗ ಅವರು ನೇರವಾಗಿ ಏನನ್ನೂ ಹೇಳಿರಲಿಲ್ಲ. ಅಲ್ಲದೆ ಕೇಶವಮೂರ್ತಿ ಪಕ್ಷಾಂತರಿ ತಳಿಯಲ್ಲ, ಜೆಡಿಎಸ್‌ಗೆ ನಿಷ್ಠರಾಗಿದ್ದವರು. ಹಾಗಾಗಿ ಅವರು ಕಾಂಗ್ರೆಸ್ ಅಭ್ಯರ್ಥಿಯಾಗುವುದು ಕಷ್ಟಸಾಧ್ಯ ಎನ್ನುವಂತಾಗಿತ್ತು. ಆದರೆ ಈಗ ಜೆಡಿಎಸ್‌ನ ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಅಭ್ಯರ್ಥಿಯಾಗುವ ಸಾಧ್ಯತೆಗಳು ದಟ್ಟವಾಗುತ್ತಿವೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಧ್ರುವನಾರಾಯಣ ಅವರ ಸೋದರ ಸಂಬಂಧಿಯಾದ ಕಳಲೆ ಕೇಶವಮೂರ್ತಿ ಅವರು ಜೆಡಿಎಸ್ ಪಕ್ಷದ ತಾಲ್ಲೂಕು ಅಧ್ಯಕ್ಷರಾಗಿ ನಂಜನಗೂಡು ವಿಧಾನಸಭೆ ಕ್ಷೇತ್ರದಿಂದ 2 ಬಾರಿ ಸ್ಪರ್ಧಿಸಿ ತೀರಾ ಅಲ್ಪಮತಗಳಿಂದ ಸೋಲು ಅನುಭವಿಸಿದ್ದರು. 2013ರ ಚುನಾವಣೆಯಲ್ಲಿ ಶ್ರೀನಿವಾಸ್ ಪ್ರಸಾದ್ ಅವರ ವಿರುದ್ಧ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಕಳಲೆ ಕೇಶವಮೂರ್ತಿ ಅಲ್ಪಮತದಿಂದ ಸೋತು ಎರಡನೆಯ ಸ್ಥಾನ ಪಡೆದಿದ್ದರು. ಅವಿವಾಹಿತ ಕೇಶವಮೂರ್ತಿ ಸದಾ ಜನರ ಕಷ್ಟಕ್ಕೆ ಮಿಡಿಯುವ, ಯಾವಾಗಲೂ ಪಕ್ಷದ ಕಚೇರಿಯಲ್ಲೇ ಇದ್ದು ಕಾರ್ಯಕರ್ತರು, ಸಾಮಾನ್ಯ ಜನರಿಗೆ ಸ್ಪಂದಿಸುವ ರಾಜಕಾರಣಿ ಎಂಬ ಹೆಸರನ್ನು ಹೊಂದಿದ್ದಾರೆ. ಅದೆಲ್ಲವನ್ನು ಗಮನಿಸಿಯೇ ಕಾಂಗ್ರೆಸ್ ಅವರಿಗೆ ಗಾಳ ಹಾಕಿದೆ.


ಮೊನ್ನೆ ನಡೆದ ಎಪಿಎಂಸಿ ಚುನಾವಣೆಯಲ್ಲಿ ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತಯಾಚನೆ ಮಾಡಿದ್ದು ಅವರ ಕಾಂಗ್ರೆಸ್ ಸೇರ್ಪಡೆ ಸುದ್ದಿಗೆ ಇಂಬು ನೀಡುವಂತಿದೆ. ಅದೂಅಲ್ಲದೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ಗೆಲುವಿಗೆ ಸಹಕಾರವಾಗುವಂತೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿಗಾವಹಿಸಿ ಕಾಂಗ್ರೆಸ್ ಗೆಲುವಿಗೆ ಅನುಕೂಲ ಮಾಡಿಕೊಟ್ಟಿದ್ದರು.

ಇಂತದ್ದೊಂದು ಆಫರ್‌ಗೆ ಸ್ವತಃ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೇ ಗ್ರೀನ್‌ಸಿಗ್ನಲ್ ಕೊಟ್ಟಿದ್ದಾರೆ ಎನ್ನುವ ವರ್ತಮಾನವೂ ಕೇಳಿಬರುತ್ತಿದೆ. ಕಳಲೆ ಕೇಶವಮೂರ್ತಿಯವರು ತಾವು ಕಾಂಗ್ರೆಸ್ ಅಭ್ಯರ್ಥಿಯಾಗುವ ಬಗ್ಗೆ ದೇವೇಗೌಡರೊಂದಿಗೆ ಒಂದು ಸುತ್ತು ಮಾತುಕತೆ ನಡೆಸಿದ್ದು ಅದಕ್ಕೆ ಗೌಡರು ಪರೋಕ್ಷ ಸಮ್ಮತಿ ಇತ್ತಿದ್ದಾರಂತೆ. 'ನಮ್ಮದು ಪ್ರಾದೇಶಿಕ ಪಕ್ಷ. ಉಪ ಚುನಾವಣೆಯಲ್ಲಿ ಎರಡು ರಾಷ್ಟ್ರೀಯ ಪಕ್ಷಗಳೊಂದಿಗೆ ಸ್ಪರ್ಧೆಯೊಡ್ಡುವುದು ನಮಗೆ ಕಷ್ಟವಾಗುತ್ತದೆ. ಹಾಗಾಗಿ ಕ್ಷೇತ್ರದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೀವೇ ನಿರ್ಧಾರ ತೆಗೆದುಕೊಳ್ಳಿ' ಅನ್ನೋ ಕಾರ್ಣಿಕ ಗೌಡರ ಬಾಯಿಂದ ಹೊರಬಿದ್ದಿದೆಯಂತೆ. ಯಾವುದಕ್ಕೂ ಈ ಉಪ ಚುನಾವಣೆಗೆ ಸಂಬಂಧಿಸಿದಂತೆ ಜನವರಿ 22ರಂದು ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಮೈಸೂರಿನಲ್ಲಿ ಸಭೆ ನಡೆಸಲಿದ್ದು ಅದರ ನಂತರ ಸ್ಪಷ್ಟ ಚಿತ್ರಣ ಲಭಿಸಲಿದೆ.

ಅಂದಹಾಗೆ, ಮಂತ್ರಿಗಿರಿ ಕಿತ್ತುಕೊಂಡದ್ದಕ್ಕೆ ಸಿದ್ದರಾಮಯ್ಯನ ವಿರುದ್ಧ ಸ್ವಾಭಿಮಾನದ ಸೆಡ್ಡು ಹೊಡೆದು ಅಬ್ಬರಿಸಿದ್ದ ಶ್ರೀನಿವಾಸ್ ಪ್ರಸಾದ್‌ರಿಂದ ಬಿಜೆಪಿಗೆ ನಯಾಪೈಸೆಯ ಲಾಭವಾಗಿಲ್ಲ ಅನ್ನೋದನ್ನು ಮೊನ್ನೆ ಹೊರಬಿದ್ದ ಎಪಿಎಂಸಿ ಫಲಿತಾಂಶವೇ ಜಾಹೀರು ಮಾಡಿದೆ. ನಂಜನಗೂಡು ಎಪಿಎಂಸಿಯ ಒಟ್ಟು 13 ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು 09 ಸ್ಥಾನಗಳಲ್ಲಿ ಗೆದ್ದಿದ್ದರೆ ಶ್ರೀನಿವಾಸ್ ಪ್ರಸಾದ್ ಸೇರಿಕೊಂಡ ನಂತರವೂ ಬಿಜೆಪಿಗೆ ದಕ್ಕಿರೋದು ಕೇವಲ 4 ಸ್ಥಾನ ಮಾತ್ರ. ಇದು ಉಪಚುನಾವಣೆಯ ಫಲಿತಾಂಶದ ಬಗ್ಗೆ ಖುದ್ದು ಬಿಜೆಪಿಗರೇ ದಿಗಿಲು ಬೀಳುವಂತೆ ಮಾಡಿದೆ. ಅಲ್ಲದೇ ಶ್ರೀನಿವಾಸ್ ಪ್ರಸಾದ್‌ಗೂ ಸಣ್ಣ ಅಳುಕು ಶುರುವಾಗಿದೆ. ಒಂದೊಮ್ಮೆ ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಅಭ್ಯರ್ಥಿಯಾದರೆ ಪ್ರಸಾದ್ ಗೆಲುವು ಮತ್ತಷ್ಟೂ ದೂರ ಸರಿಯಲಿದೆ.

■ ಶರ

...ದುರುವಂಗಲ್ ಪದಿನಾರು' ಖ್ಯಾತಿಯ ಕಾರ್ತಿಕ್ ನರೇನ್




ಈ ಹುಡುಗ 'ಕಾರ್ತಿಕ್ ನರೇನ್'ನನ್ನು ನೋಡಿ. ...ರ ಡಿಸೆಂಬರ್ 31ನೇ ತಾರೀಖಿನವರೆಗೂ ಈ ...ಗ ಕೇವಲ 'ಕಾರ್ತಿಕ್ ನರೇನ್' ಮಾತ್ರ ಆಗಿದ್ದ. ...ಪ್ಪ ಅಮ್ಮ, ನಾಲ್ಕಾರು ಗೆಳೆಯರು, ಚೆನ್ನೈನ ತಾನಿರುವ ...ೀದಿಯ ಸ್ಥಳೀಯರಿಗೆ ಬಿಟ್ಟು ಈ 'ಕಾರ್ತಿಕ್ ನರೇನ್' ...ರೆಂದರೆ ಯಾರಿಗೂ ಗೊತ್ತಿರಲಿಲ್ಲ. ಇವತ್ತು 15 ... 2017. ಇಡೀ ತಮಿಳುನಾಡು ಈ ಹುಡುಗನನ್ನು ...ವಂಗಲ್ ಪದಿನಾರು' ಖ್ಯಾತಿಯ 'ಕಾರ್ತಿಕ್ ನರೇನ್' ... ಗುರುತಿಸತೊಡಗಿದೆ.

...ೋದು ಬೋಧಿಸಿದ ಮೆಕಾನಿಕಲ್ ಇಂಜಿನಿಯರಿಂಗ್ ...ನ್ನು ಅರ್ಧಕ್ಕೆ ನಿಲ್ಲಿಸಿ ಇಪ್ಪತ್ತೊಂದರ ಹರೆಯದ ...ಹುಡುಗ ತಾನು ರೆಡಿಮಾಡಿಟ್ಟುಕೊಂಡ ಕತೆಗೆಂದು ...ತಿದ್ದು, ಒಬ್ಬ ನಿರ್ಮಾಪಕರನ್ನು, ಇನ್ನೂ ದೊಡ್ಡ ... ಸ್ಟುಡಿಯೋಸ್ನ, ಹಾಕಿಕೊಂಡು ಈ ಸಿನಿಮಾ ಮಾಡಲು ... ಪ್ಪ, ತಿಥಿ ವಾರ, ...ಂದುಕೊಂಡ ನರೇನ್ ... ಪ್ರೋತ್ಸಾಹಕರನ್ನು ಬಿಟ್ಟು ಉಳಿದೆಲ್ಲ ಹಾಸ್ಯಗಳಿಗೂ ಹೊಸಬರನ್ನೇ ಕರೆತಂದ. ಮೂವತ್ತು ದಿನಗಳಲ್ಲಿ 'ದುರುವಂಗಲ್ ಪದಿನಾರು' ಚಿತ್ರದ ಚಿತ್ರೀಕರಣ ಮುಗಿಸಿದರೆ, ಚಿತ್ರದ post productionಗೆಂದು ಖರ್ಚಾದದ್ದು ಆರು ತಿಂಗಳು. ಈ ಹುಡುಗ ಕಾರ್ತಿಕ್ ನರೇನ್ ತಮಿಳಿನ ಯಾವ ದೊಡ್ಡ ನಿರ್ದೇಶಕನ ಕೈಕೆಳಗೂ ಸಹಾಯಕ ನಿರ್ದೇಶಕನಾಗಿಯಾಗಲೀ, ಸಹನಿರ್ದೇಶಕನಾಗಿಯಾಗಲೀ ದುಡಿಯಲಿಲ್ಲ. ಅವೆಲ್ಲ ಅಸಹಾಯಕತೆಯ ಇನ್ನೊಂದು ಪರಮಾವಧಿ ಎಂದು ತಿಳಿದಿದ್ದ ನರೇನ್ ತನ್ನ ವಯಸ್ಸಿಗೂ ಮೀರಿ ಹೆಣೆದ ಕತೆಗೆ ರಕ್ತಮಾಂಸ ತುಂಬಿ ಜೀವದ ಕಾವು ಕೊಟ್ಟಿದ್ದ.

ಇವತ್ತು ಕಾರ್ತಿಕ್ ನರೇನನ 'ದುರುವಂಗಲ್ ಪದಿನಾರು' ಕೊಟ್ಟ ಥ್ರಿಲ್ಲರ್ ಹೊಡೆತಕ್ಕೆ ಈಟಿಗೆ ತೆರೆಕಂಡ ವಿಜಯ್ ನಟಿಸಿರುವ ದೊಡ್ಡ ಬಜೆಟ್ಟಿನ 'ಭೈರವ' ದುಡ್ಡುಗಳಿಕೆಯಲ್ಲಿ ತಡವರಿಸತೊಡಗಿದೆ. ಒಮ್ಮೊಮ್ಮೆ ಅದೃಷ್ಟ ಅನ್ನುವುದು ಯಾವ ರೂಪದಲ್ಲಾದರೂ ಬಂದುಬಿಡಬಹುದು; ಬಂದು ಕೈಹಿಡಿಯಬಹುದು; 'ನನ್ ಕೈಲಿ ಇಂಜಿನಿಯರಿಂಗ್ ಪೂರ್ತಿಗೊಳಿಸಲು ಸಾಧ್ಯವೇ ಇಲ್ಲ. ಒಂದು ಕತೆ ಬರ್ದಿದೀನಿ ಅದನ್ನಿಟ್ಟುಕೊಂಡು ಸಿನಿಮಾ ಮಾಡ್ಬೇಕು ಅಂತಿದೀನಿ. ನಿಮಗಿದು ಓಕೇನಾ?' ಎಂದು ಕಾರ್ತಿಕ್ ನರೇನ್ ತನ್ನ ತಂದೆತಾಯಿ ಎದುರು ನಿಂತು ಕೇಳಿದ್ದ. 'ಅವತ್ತು ನಮ್ಮಪ್ಪ ಅಮ್ಮ ಇಬ್ರೊಬ್ರು ಮುಖ್ಯಂದು ಸ್ಟಡಿ ಕಂಪ್ಲೀಟ್ ಮಾಡು ಅಂದ್ರೂ ಸಾಕಿತ್ತು ನನ್ನ ಸಿನಿಮಾ ಕನಸೇ ಸತ್ತು ಹೋಗುತ್ತಿತ್ತು. ನಿನಗೆ ಯಾವುದು ಸರಿ ಅನ್ನುತ್ತೋ ಅದನ್ನೇ ಮಾಡು ಅಂದ್ರು ನನ್ನ ಹೆತ್ತವರು. ನನ್ನ ಪಾಲಿಗೆ ಅದೃಷ್ಟ ಅನ್ನುವುದು ಅಪ್ಪಅಮ್ಮನ ರೂಪದಲ್ಲಿ ಬಂತು. ತಮಿಳುನಾಡಲ್ಲಿ ನನಗಿಂತಲೂ ಪ್ರತಿಭಾವಂತರಿದ್ದಾರೆ. ಆದರೆ ನನಗೆ ಸಿಕ್ಕಂಥ ಅದೃಷ್ಟ ಅವರಿಗೆ ಸಿಗಲಾರದೇನೋ' ಎಂದು ಕಾರ್ತಿಕ್ ನರೇನ್ 'ದುರುವಂಗಲ್ ಪದಿನಾರು' ಕೊಟ್ಟ ಯಶಸ್ಸಿನ ಅಬ್ಬರಕ್ಕೆ ಕಳೆದುಹೋಗದೆ ನಿರುಮ್ಮಳವಾಗಿ ಹೇಳಿ ಸುಮ್ಮನಾಗುತ್ತಾನೆ.

■ ಚಂದ್ರಶೇಖರ್ ಐಜೂರ್

ನೋಟು ರದ್ದತಿ, ಭ್ರಷ್ಟಾಚಾರ ಮತ್ತು ಮೋದಿ ಸರ್ಕಾರದ ಬೂಟಾಟಿಕೆ



ನೋಟು ರದ್ದತಿಯ ಸತ್ಪರಿಣಾಮಗಳ ಕುರಿತು ಜನತೆಯ ಮುಂದಿರಿಸಲಾದ ಭವ್ಯ ಚಿತ್ರಣಗಳು ಮತ್ತು ಭರವಸೆಗಳೆಲ್ಲವೂ ನೀರ ಮೇಲಣ ಗುಳ್ಳೆಯಂತೆ ಅತ್ಯಲ್ಪ ಕಾಲದಲ್ಲಿ ಒಡೆದುಹೋಗಿವೆ. ಬಸ್ವಾನ ಬೂಸಿಗಳು ಒಂದೊಂದಾಗಿ ಬಯಲಿಗೆ ಬರತೊಡಗಿವೆ. ನೋಟು ರದ್ದತಿ ಮಾಡಲು ನಿರ್ಧರಿಸಿದವರು ಯಾರೆಂಬ ವಿಷಯವನ್ನು ತೆಗೆದುಕೊಂಡರೆ ಅದು ಆರ್‌ಬಿಐನ ಸಲಹೆ ಎಂದು ಕೇಂದ್ರ ಸರ್ಕಾರ ವಾದಿಸುತ್ತಲೆ ಬಂದಿತ್ತು. ಆದರೆ ಆದೇಶ ಸರ್ಕಾರದಿಂದಲೆ ಬಂದಿರುವುದಾಗಿ ಈಗ ಖುದ್ದು ಆರ್‌ಬಿಐ ಒಪ್ಪಿಕೊಂಡಿದೆ. ವಾಸ್ತವದಲ್ಲಿ ಆದೇಶ ನೇರವಾಗಿ ಮೋದಿಯಿಂದಲೆ ಬಂದಿದೆ. ಇದನ್ನು ಸಾರ್ವಜನಿಕವಾಗಿ ಹೇಳುವ ಹಾಗಿಲ್ಲವಲ್ಲ, ಹಾಗಾಗಿ ಸರ್ಕಾರದಿಂದ ಬಂದಿದೆ ಎನ್ನುತ್ತಿದೆ ಆರ್‌ಬಿಐ. ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಅಮಾರ್ತ್ಯ ಸೆನ್ ಕೂಡಾ ಹೆಚ್ಚುಕಡಿಮೆ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಇಂಡಿಯಾ ಟುಡೇ' ಟಿವಿ ವಾಹಿನಿಯ ಕರಣ್ ಥಾಪರ್‌ಗೆ ನೀಡಿದ ಸಂದರ್ಶನದ ವೇಳೆ "ನೋಟು ರದ್ದತಿಯ ನಿರ್ಧಾರ ತೆಗೆದುಕೊಂಡಿರುವುದು ಸರ್ಕಾರ ಅಲ್ಲ, ಮೋದಿ ಮತ್ತಾತನ ಪರಮಾಪ್ತರ ಒಂದು ಗುಂಪು" ಎಂದಾತ ಹೇಳಿದ್ದಾರೆ. ನೋಟು ರದ್ದತಿಯನ್ನು ಮತ್ತೊಮ್ಮೆ ಕಟುವಾಗಿ ಟೀಕಿಸಿರುವ ಸೆನ್, ಅದೊಂದು ಬಹುದೊಡ್ಡ ಪ್ರಮಾದ ಎಂದಿದ್ದಾರೆ. ಆದರೂ ಮೋದಿಯಲ್ಲಿ ಜನರನ್ನು ನಂಬಿಸಬಲ್ಲ ಮಾಂತ್ರಿಕತೆ ಇರುವುದರಿಂದಲೆ ಅವನಿಗೆ ಜನಬೆಂಬಲ ಹೆಚ್ಚುತ್ತಿದೆ ಎಂಬುದು ಅವರ ಅಭಿಪ್ರಾಯವಾಗಿದೆ. ಆದರೂ ಸೆನ್ ಪ್ರಕಾರ ಮೋದಿಯ ಕಥೆ ಇಂದು ನೆಪೋಲಿಯನ್ ಥರ ಆಗಿದೆಯಂತೆ. ಅದೇನೆಂದರೆ "ನೆಪೋಲಿಯನ್ ಕೂಡಾ ತನ್ನ ಪ್ರಚಾರಯಂತ್ರದ ಮೂಲಕ ತನ್ನ ಸಾಧನೆಗಳನ್ನು ಮಿತಿಮೀರಿ ದೊಡ್ಡದು ಮಾಡಿಸಿದ್ದಲ್ಲದೆ ಸೋಲಿಲ್ಲದ ನಾಯಕ ಎಂಬ ಇಮೇಜು ಬೆಳೆಸಿಕೊಂಡಿದ್ದ. ಹೀಗಿರುವಾಗ ಒಮ್ಮೆ ರಷ್ಯಾದ ಮೇಲೆ ದಂಡೆತ್ತಿ ಹೋದಾಗ ಸೋಲು ಅನುಭವಿಸಿ ಸ್ವದೇಶಕ್ಕೆ ವಾಪಸ್ಸಾದ. ಆದರೆ ಆತ ಹೇಳಿದ್ದು ಮಾತ್ರ ತಾನು ರಷ್ಯಾದ ಹಿಮಾಚ್ಛಾದಿತ ಪರ್ವತಗಳನ್ನು ನೋಡುವುದಕ್ಕೋಸ್ಕರ ಪ್ರವಾಸ ಹೋಗಿದ್ದೆ ಎಂದು"!

ನೋಟು ರದ್ದತಿಯಿಂದ ತತ್ತರಿಸಿರುವ ಕೈಗಾರಿಕಾ ವಲಯ

ಮೋದಿ ಸರ್ಕಾರದ ನೋಟು ರದ್ದತಿ ಭಾರತದ ಬಡ, ದಮನಿತ, ರೈತ, ಕಾರ್ಮಿಕ, ಮಹಿಳಾ ವರ್ಗಗಳ ಜತೆ ಕೈಗಾರಿಕಾ ಕ್ಷೇತ್ರವನ್ನೂ ತೀವ್ರವಾಗಿ ಬಾಧಿಸಿದೆ. ದೇಶದ ಅತಿ ದೊಡ್ಡ ಕೈಗಾರಿಕಾ ಒಕ್ಕೂಟವಾದ ಅಖಿಲ ಭಾರತ ಉತ್ಪಾದಕರ ಸಂಘ (AIMO) ನೋಟು ರದ್ದತಿಯನ್ನು ವಿಫಲ ಯೋಜನೆ ಎಂದು ಕರೆದಿದೆ. "ಇದೊಂದು ತುರ್ತು ಪರಿಸ್ಥಿತಿ. ಸರ್ಕಾರ ಕಣ್ಣು ಮುಚ್ಚಿಕೊಂಡಿದೆ. ಸರ್ಕಾರದಲ್ಲಿರುವವರೆಲ್ಲ ಒಂದೊ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ ಅಥವಾ ತಮ್ಮ ಬಾಸ್‌ಗಳ ಬೆನ್ನು ತಟ್ಟುತ್ತಿದ್ದಾರೆ" ಎಂದು ಟೀಕಾಪ್ರಹಾರ ಮಾಡಿದೆ. ನೋಟು ರದ್ದತಿ ಪ್ರಾರಂಭವಾದಂದಿನಿಂದಲೂ ಸಂಘ ಕೈಗಾರಿಕಾ ವಲಯದ ಚಟುವಟಿಕೆಗಳ ಮೇಲೆ ಕಣ್ಣಿರಿಸುತ್ತಾ ಬಂದಿದೆ. ಸುಮಾರು 13 ಸಾವಿರ ನೇರ ಸದಸ್ಯರನ್ನೂ, 3 ಲಕ್ಷ ಪರೋಕ್ಷ ಸದಸ್ಯರನ್ನೂ ಹೊಂದಿರುವ ಸಂಘ ಇದುವರೆಗೆ ಮೂರು ಅಧ್ಯಯನಗಳನ್ನು ಕೈಗೊಂಡಿದ್ದು ಡಿಸೆಂಬರ್ 12ರ ಅಧ್ಯಯನ ಅವುಗಳಲ್ಲಿ ಇತ್ತೀಚಿನದು. ಇದರ ಪ್ರಕಾರ ದೇಶದಾದ್ಯಂತ ಹೆಚ್ಚುಕಡಿಮೆ ಎಲ್ಲಾ ಕೈಗಾರಿಕಾ ಚಟುವಟಿಕೆಗಳು ಸ್ಥಗಿತಗೊಂಡಿವೆ; ಅದರಲ್ಲೂ ಸಣ್ಣ ಮತ್ತು ಮಧ್ಯಮ ದರ್ಜೆಯ ಘಟಕಗಳು ಅತ್ಯಧಿಕ ಸಂಕಷ್ಟದಲ್ಲಿವೆ; ಅತ್ಯಧಿಕ ದುಷ್ಪರಿಣಾಮ ಅನುಭವಿಸುತ್ತಿರುವ ರಾಜ್ಯಗಳೆಂದರೆ ಮಹಾರಾಷ್ಟ್ರ ಮತ್ತು ತಮಿಳುನಾಡು. ವರದಿಯಲ್ಲಿ ಒಟ್ಟು ಹಿಂಜರಿಕೆಗೆ ಕಾರಣಗಳೇನೆಂದು ಪಟ್ಟಿ ಮಾಡಲಾಗಿದೆ. ಉದಾಹರಣೆಗೆ ಶೂನ್ಯ ನಗದು ಒಳಹರಿವು, ನಗದು ಹಿಂಪಡೆಯುವುದಕ್ಕೆ ಮಿತಿ ಹೇರಿಕೆ, ಸಿಬ್ಬಂದಿ ವರ್ಗದ ರಜಾ, ರೂಪಾಯಿಯ ಅಂತಾರಾಷ್ಟ್ರೀಯ ಮೌಲ್ಯದಲ್ಲಿ ಕುಸಿತ, ನಿಧಿ ಸಂಗ್ರಹಕ್ಕೆ ತಗ್ಗಿದ ಆಯ್ಕೆಗಳು, ಬ್ಯಾಂಕುಗಳಿಂದ ಪ್ರಸ್ತಾಪಗಳ ಪರಿಶೀಲನೆ ನಡೆಯದಿರುವುದು, ರಿಯಲ್ ಎಸ್ಟೇಟ್ ಉದ್ದಿಮೆಯಲ್ಲಿ ಅಸ್ತವ್ಯಸ್ತತೆ, ವಿದೇಶಿಯರು ಭಯ ಪಡುತ್ತಿರುವುದು ಇತ್ಯಾದಿ.


ಡಿಸೆಂಬರ್ 12ರ ಅಧ್ಯಯನದ ಕೆಲವು ಮುಖ್ಯಾಂಶಗಳು ಹೀಗಿವೆ:

ಉದ್ಯಮ ವಲಯ	ಚಟುವಟಿಕೆ	ನೌಕರಿ ಕಡಿತ	ಆದಾಯ ಇಳಿಕೆ
ಕಿರು ಮತ್ತು ಚಿಕಣಿ ಉದ್ಯಮಗಳು	-	35%	50%
ಮಧ್ಯಮ ಮತ್ತು ದೊಡ್ಡ ಉದ್ಯಮಗಳು			
	ಮೂಲಸೌಕರ್ಯ ಯೋಜನೆಗಳು	35%	45%
	ರಫ್ತು	30%	40%
	ಉತ್ಪಾದನೆ	5%	20%

ಗಮನಾರ್ಹವಾಗಿ ಸಂಘದ ಮೂರೂ ವರದಿಗಳಿಗೆ ಮೋದಿ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಹೊರಬಿದ್ದಿಲ್ಲ.

ಮೋದಿ ಸರ್ಕಾರದ ಬೂಟಾಟಿಕೆ

ಭ್ರಷ್ಟಾಚಾರ, ಕಾಳಧನ, ಖೊಟ್ಟಿಧನ ಮತ್ತು ಉಗ್ರವಾದಗಳ ನಿರ್ಮೂಲನಕ್ಕಾಗಿ ಎನ್ನಲಾದ ಮೋದಿ ಸರ್ಕಾರದ "ಯುದ್ಧ" ಉರುಫ್ "ಸರ್ಜಿಕಲ್ ದಾಳಿ" ಉರುಫ್ "ಮಹಾಯಾಗ" ಬರೀ ಬೂಟಾಟಿಕೆ ಹೊರತು ಬೇರೇನೂ ಅಲ್ಲವೆಂದು ತೋರಿಸುವ ಎರಡು ಪ್ರಮುಖ ನಿದರ್ಶನಗಳು ಇಲ್ಲಿವೆ.



1. ಮೊದಲನೆಯದು ಜನವರಿ 10ರಂದು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಹೊರಬಿದ್ದಿರುವ ಮಾಹಿತಿಗಳು ಹೇಳುವ ಕಥೆ. ಇದು ಮೋದಿ ಸರ್ಕಾರದ ತಥಾಕಥಿತ "ಯುದ್ಧ"ದ ಟೊಳ್ಳುತನವನ್ನು ಸಂಪೂರ್ಣವಾಗಿ ಬಯಲಿಗೆಳೆಯುತ್ತದೆ. ರಿಸರ್ವ್ ಬ್ಯಾಂಕ್ ವರದಿ ಪ್ರಕಾರ ಭಾರತದಲ್ಲಿ ಉತ್ಪಾದನೆಯಾಗುವ ಕಾಳಧನದಲ್ಲಿ ದೊಡ್ಡ ಮೊತ್ತವೊಂದು ಕಡಲಾಚೆಯ ನೇರ ಹೂಡಿಕೆ (ಒಡಿಐ) ಹೆಸರಲ್ಲಿ ಮಾರೀಷಿಯಸ್, ಸಿಂಗಾಪುರ, ಸೈಪ್ರಸ್‌ಗಳಂಥಾ ದೇಶಗಳಿಗೆ ವರ್ಗಾವಣೆಯಾಗುತ್ತದೆ. ಅಲ್ಲಿನ ಸ್ಥಳೀಯ ಕಂಪೆನಿಗಳಲ್ಲಿ ಹೂಡಿಕೆಯಾಗುವ ಈ ದುಡ್ಡು ನಂತರ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಎಂಬ ಹೊಸ ಹೆಸರಿನೊಂದಿಗೆ ಭಾರತದೊಳಕ್ಕೆ ಮರುಪ್ರವೇಶಿಸಿ ಅದೇ ಕಂಪೆನಿಗಳ ಭಾರತೀಯ ಶಾಖೆಗಳಲ್ಲಿ ಜಮೆಯಾಗುತ್ತದೆ. ಕಪ್ಪು ಹಣವನ್ನು ಬಿಳಿಯಾಗಿಸುವ ದೊಡ್ಡವರ ಈ ದಂಧೆ ಹಲವು ವರ್ಷಗಳಿಂದ ನಡೆಯುತ್ತಿದೆ.


ಈ ರೀತಿಯ ದಂಧೆಗಳು ಮತ್ತು ಬೇನಾಮಿ ಆಸ್ತಿ ಖರೀದಿಗಳನ್ನು ತಡೆಯುವುದಕ್ಕಾಗೆಂದೆ ಮೇಲ್ಕಂಡ ದೇಶಗಳೊಂದಿಗೆ ತಾನು ಒಡಂಬಡಿಕೆಗಳನ್ನು ಮಾಡಿಕೊಂಡಿರುವುದಾಗಿ ಮೋದಿ ಸರ್ಕಾರ ಕೊಚ್ಚಿಕೊಳ್ಳುತ್ತಿದೆ. ಇದು ನಿಜ ಆಗಿದ್ದರೆ ಈ ಒಡಿಐ, ಎಫ್‌ಡಿಐಗಳ ಪ್ರಮಾಣದಲ್ಲಿ ದೊಡ್ಡ ಮಟ್ಟದ ಇಳಿತ ಆಗಬೇಕಿತ್ತು. ಆದರೆ ಇದಕ್ಕೆ ತದ್ವಿರುದ್ಧವಾದ ಬೆಳವಣಿಗೆ ಆಗಿದೆ ಎನ್ನುತ್ತಿವೆ ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ದತ್ತಾಂಶಗಳು! 2014-15ರ ಸಾಲಿಗೆ ಹೋಲಿಸಿದರೆ 2015-16ರಲ್ಲಿ ಸಿಂಗಾಪುರ, ಸೈಪ್ರಸ್‌ಗಳಿಂದ ಎಫ್‌ಡಿಐನಲ್ಲಿ ಹೆಚ್ಚಳ ಆಗಿದ್ದರೆ ಮಾರೀಷಿಯಸ್‌ನಿಂದ ಎಫ್‌ಡಿಐ ಹೆಚ್ಚುಕಮ್ಮಿ ಮೊದಲಿನಷ್ಟೆ ಇರುವುದಾಗಿ ತಿಳಿದುಬರುತ್ತದೆ! ಅಷ್ಟು ಮಾತ್ರವಲ್ಲ, ಎಫ್‌ಡಿಐನ ಶೇಕಡಾ 92ರಷ್ಟು ಷೇರುಗಳಲ್ಲಿ ಹೂಡಿಕೆಯಾಗಿದೆ ಹೊರತು ಸಾಲ ರೂಪದಲ್ಲಿ ಇಲ್ಲ. ಷೇರುಗಳಲ್ಲಿ ಹೂಡಿಕೆ ಎಂಬುದು ಸಂಶಯಾಸ್ಪದ ವ್ಯವಹಾರವಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಭ್ರಷ್ಟಾಚಾರ ನಿರ್ಮೂಲನ ಮಾಡುವೆವೆಂದು ಚುನಾವಣೆ ಗೆದ್ದು ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಉಳ್ಳವರ ಕಪ್ಪುಬಿಳುಪಿನ ದಂಧೆಗಳನ್ನು ಅಬಾಧಿತವಾಗಿ ಮುಂದುವರಿಯಲು ಬಿಟ್ಟಿದೆ!

2. ಎರಡನೆ ಉದಾಹರಣೆ ಗುಜರಾತ್ ಮುಖ್ಯಮಂತ್ರಿ ಮತ್ತು ಇತರ ಹಲವಾರು ರಾಜಕಾರಣಿಗಳಿಗೆ ಕೋಟಿಗಟ್ಟಲೆ ಲಂಚ ಸಂದಾಯ ಆಗಿರುವುದನ್ನು ಅರುಹುವ ಸಹಾರಾ ಬಿರ್ಲಾ ಪೇಪರ್ಸ್ ಹಗರಣ. 2013-14ರಲ್ಲಿ ಬಿರ್ಲಾ ಮತ್ತು ಸಹಾರಾ ಕಂಪೆನಿಗಳಿಂದ ಗುಜರಾತ್ ಸಿ.ಎಂ. ಮತ್ತಿತರ ರಾಜಕಾರಣಿಗಳಿಗೆ ಲಂಚ ಪಾವತಿಯಾಗಿರುವುದಕ್ಕೆ ಸಂಬಂಧಿಸಿದಂತೆ ಕಾಮನ್ ಕಾಸ್ ಎಂಬ ಎನ್‌ಜಿಒ ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿತ್ತು. ಅದು, ತನ್ನ ಆರೋಪಗಳಿಗೆ ಪುರಾವೆಯಾಗಿ ಆದಾಯ ತೆರಿಗೆ ಅಧಿಕಾರಿಗಳು ಸದರಿ ಕಾರ್ಪೊರೇಟುಗಳ ಕಚೇರಿಗಳಿಂದ ವಶಪಡಿಸಿಕೊಂಡಿದ್ದ ಕೆಲವೊಂದು ಎಕ್ಸೆಲ್ ಶೀಟುಗಳು, ಈ-ಮೇಲ್‌ಗಳು ಮತ್ತು ಇತರ ದಾಖಲೆಗಳನ್ನು ಹಾಜರುಪಡಿಸಿತ್ತು. ಕಾಮನ್ ಕಾಸ್ ಪರವಾಗಿ ವಾದಿಸಿದ ಲಾಯರ್ ಪ್ರಶಾಂತ್ ಭೂಷಣ್, ನ್ಯಾಯಾಲಯ ಎಫ್‌ಐಆರ್ ದಾಖಲಿಸುವಂತೆ ಪೊಲೀಸರಿಗೆ ಆದೇಶಿಸಬೇಕು ಮತ್ತು ವಿಶೇಷ ತನಿಖಾ ತಂಡದ ಮೂಲಕ ಕೂಲಂಕಷ ತನಿಖೆ ನಡೆಸಬೇಕು ಎಂದು ಕೋರಿದ್ದರು. ಆದರೆ ನ್ಯಾಯಾಲಯ ಮೋದಿ ಸರ್ಕಾರದ ವಾದವನ್ನು ಎತ್ತಿಹಿಡಿಯುತ್ತಾ ಸ್ಪಷ್ಟ ಹಾಗೂ ನಂಬಲರ್ಹ ಪುರಾವೆಗಳು ಬೇಕಾಗಿವೆ ಎಂದು ಹೇಳಿ ಪ್ರಕರಣವನ್ನು ತಳ್ಳಿಹಾಕಿದೆ. ಈ ಸಂದರ್ಭದಲ್ಲಿ ಗಮನಿಸಬೇಕಾದ ಎರಡು ಮುಖ್ಯ ಅಂಶಗಳಿವೆ.

● ಒಂದು, ಸರ್ವೋಚ್ಚ ನ್ಯಾಯಾಲಯ ಇಲ್ಲಿ ಈ ಹಿಂದೆ 2013ರಲ್ಲಿ 'ಲಲಿತ ಕುಮಾರಿ ವರ್ಸಸ್ ಉತ್ತರ ಪ್ರದೇಶ ಸರಕಾರ' ಪ್ರಕರಣದಲ್ಲಿ ಪಂಚ ಸದಸ್ಯರ ಸಾಂವಿಧಾನಿಕ ಪೀಠ ನೀಡಿರುವ ತೀರ್ಪನ್ನು ಕಡೆಗಣಿಸಿದೆ. ಪ್ರಕರಣ ದಾಖಲಿಸುವುದಕ್ಕೆ ಲಭ್ಯ ಮಾಹಿತಿ ನ್ಯಾಯಸಮ್ಮತ ಅಥವಾ ವಿಶ್ವಾಸಾರ್ಹ ಆಗಿರಬೇಕೆಂದಿಲ್ಲ ಎಂಬ ತೀರ್ಪು ಲಲಿತ ಕುಮಾರಿ ಪ್ರಕರಣದಲ್ಲಷ್ಟೆ ಅಲ್ಲದೆ ಇನ್ನೂ ಹಲವಾರು ಪ್ರಕರಣಗಳಲ್ಲಿ ಬಂದಿದೆ. ಅದರ ಪ್ರಕಾರ "ಒಂದು ವೇಳೆ ಲಭ್ಯ ಮಾಹಿತಿಯಲ್ಲಿ ವಿಚಾರಣಾರ್ಹ ಅಪರಾಧ ನಡೆದಿರುವುದಾಗಿ ತಿಳಿದುಬರದಿದ್ದರೆ ತಕ್ಷಣ ಎಫ್‌ಐಆರ್ ದಾಖಲಿಸಬೇಕಾಗಿಲ್ಲ... ಪೊಲೀಸರು ಪ್ರಾಯಶಃ ಒಂದು ವಿಧದ ಪ್ರಾಥಮಿಕ ತನಿಖೆ ನಡೆಸಿದ ನಂತರ ಮುಂದಿನ ಕ್ರಮ ಕೈಗೊಳ್ಳಬಹುದಾಗಿದೆ... ತನಿಖೆಯಲ್ಲಿ ಮಾಹಿತಿ ಸುಳ್ಳೆಂದು ಕಂಡುಬಂದಲ್ಲಿ ದೂರುದಾರನ ವಿರುದ್ಧ ಕಾನೂನುಕ್ರಮ ಜರಗಿಸುವ ಅವಕಾಶ ಇದ್ದೇ ಇದೆ."

ಇದೇ ಮಾನದಂಡವನ್ನು ಖಂಡಿತಾ ಸಹಾರಾ ಬಿರ್ಲಾ ಪ್ರಕರಣಕ್ಕೂ ಅನ್ವಯಿಸಬಹುದಾಗಿತ್ತು. ನ್ಯಾಯಾಲಯಕ್ಕೆ ಸಲ್ಲಿಕೆಯಾದ ದಾಖಲೆಗಳು ವಿಚಾರಣಾರ್ಹ ಅಪರಾಧಗಳು ನಡೆದಿರುವುದನ್ನು ಬಯಲುಗೊಳಿಸುವ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅನುಮಾನ ಇದ್ದಲ್ಲಿ ಅದು ಈ ಕುರಿತು ಪ್ರಾಥಮಿಕ ತನಿಖೆ ನಡೆಸುವಂತೆ ಪೊಲೀಸ್ ಇಲಾಖೆಗೆ ಆದೇಶಿಸಬಹುದಿತ್ತು. ಅಪರಾಧಗಳು ನಡೆದಿವೆ ಎಂದು ತಿಳಿದುಬಂದಲ್ಲಿ ಎಫ್‌ಐಆರ್ ದಾಖಲಿಸುವಂತೆ ಹೇಳಬಹುದಿತ್ತು. ಹಾಗೆ ಮಾಡದಿರುವುದು ಸರ್ವೋಚ್ಚ ನ್ಯಾಯಾಲಯದ ಗೌರವ, ವಿಶ್ವಾಸಾರ್ಹತೆಗಳಿಗೆ ಧಕ್ಕೆ ಉಂಟುಮಾಡಿದೆ.

● ಎರಡನೆ ಕಳವಳಕಾರಿ ಅಂಶವೆಂದರೆ ಸಹಾರಾದ ವಿರುದ್ಧ ಕ್ರಿಮಿನಲ್ ಖಟ್ಲೆ ಜರುಗಿಸದಂತೆ ಆದಾಯ ತೆರಿಗೆ ಫೈಸಲಾತಿ ಆಯೋಗ (Income Tax Settlement Commission) ತಡೆಯಾಜ್ಞೆ ನೀಡಿದೆ ಮಾತ್ರವಲ್ಲ ಅದನ್ನು ಸರ್ವೋಚ್ಚ ನ್ಯಾಯಾಲಯವೂ ಎತ್ತಿಹಿಡಿದಿದೆ. ಇದರ ಹಿನ್ನೆಲೆ ಹೀಗಿದೆ:



ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ತನ್ನ ಕಚೇರಿಯಿಂದ ವಶಪಡಿಸಿಕೊಂಡಿದ್ದ ಕಾಗದಪತ್ರಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದ ಸಹಾರಾ ಆರಂಭದಲ್ಲಿ ಆಯೋಗದ ದ್ವಿತೀಯ ಹೆಚ್ಚುವರಿ ಪೀಠಕ್ಕೆ (Additional Bench II, Lucknow) ದೂರು ಸಲ್ಲಿಸಿತ್ತು. ಅವೆಲ್ಲವೂ ಖೋಟಾ ದಾಖಲೆಪತ್ರಗಳಾಗಿದ್ದು ಓರ್ವ ಹಿರಿಯ ಅಧಿಕಾರಿಯ ಹೆಸರನ್ನು ಕೆಡಿಸುವುದಕ್ಕಾಗಿ ತನ್ನೊಬ್ಬ ನೌಕರನಿಂದ ಸೃಷ್ಟಿಸಲ್ಪಟ್ಟುದೆಂದು ದೂರಿನಲ್ಲಿ ಹೇಳಲಾಗಿತ್ತು. ಹೆಚ್ಚುವರಿ ಪೀಠ ಈ ದೂರನ್ನು ಆಗಸ್ಟ್‌ನಲ್ಲಿ ತಿರಸ್ಕರಿಸಿತ್ತು. ಆಗ ಸಹಾರಾ ಏನು ಮಾಡಿತೆಂದರೆ ಪ್ರಕರಣವನ್ನು ದಿಲ್ಲಿಯಲ್ಲಿರುವ ಆಯೋಗದ ಪ್ರಧಾನ ಪೀಠಕ್ಕೆ ವರ್ಗಾಯಿಸುವಂತೆ ಆಯೋಗದ ಅಧ್ಯಕ್ಷರಲ್ಲಿ ಕೋರಿಕೊಂಡಿತು. ಇದರ ನಂತರದಲ್ಲೊಂದು ಕುತೂಹಲಕಾರಿ ಬೆಳವಣಿಗೆ ನಡೆದಿದೆ. ವಿಚಾರಣೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಕೆಲವೆ ದಿನಗಳ ಬಾಕಿ ಇದ್ದಾಗ ಇದ್ದಕ್ಕಿದ್ದಂತೆ ಆಯೋಗದ ಓರ್ವ ಸದಸ್ಯರಾದ ಬಲ್ದೀಪ್ ಸಿಂಗ್ ಎಂಬವವರನ್ನು ಹಠಾತ್ತಾಗಿ ಚೆನ್ನೈಗೆ ವರ್ಗಾವಣೆ ಮಾಡಲಾಗಿದೆ. ಕೊಲ್ಕತ್ತಾ ವಲಯದ ಪ್ರಧಾನ ಆಯುಕ್ತ ಆಗಿದ್ದ ಸಂದು ನವೆಂಬರ್ 2015ರಲ್ಲಿ ನಿವೃತ್ತಿಯಾದ ಬಳಿಕ ಮಾರ್ಚ್ 2016ರಲ್ಲಿ ಪ್ರಧಾನ ಪೀಠದ ಮೂವರು ಸದಸ್ಯರಲ್ಲೊಬ್ಬರಾಗಿ ನೇಮಕವಾಗಿದ್ದರು. ನೇಮಕಾತಿ ನಿಯಮಗಳ ಪ್ರಕಾರ ಅವರನ್ನು ದಿಲ್ಲಿ ಬಿಟ್ಟು ಹೊರಗೆಲ್ಲೂ ವರ್ಗಾವಣೆ ಮಾಡಕೂಡದೆಂದಿದೆ. ಸ್ವಾಭಾವಿಕವಾಗಿ ಸಂದು ತನ್ನನ್ನು ನಿಯಮಗಳನ್ನು ಬದಿಗೆ ತಳ್ಳಿ ವರ್ಗಾಯಿಸಿರುವ ಕ್ರಮವನ್ನು ದಿಲ್ಲಿ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಅಕ್ಟೋಬರ್ 27ರಂದು ಏಕಸದಸ್ಯ ಪೀಠ ವರ್ಗಾವಣೆಯನ್ನು ತಡೆಹಿಡಿಯಲು ಆದೇಶಿಸಿತು. ಕೇಂದ್ರ ಸರ್ಕಾರ ಇದರ ವಿರುದ್ಧ ದ್ವಿಸದಸ್ಯ ಪೀಠಕ್ಕೆ ದೂರು ಸಲ್ಲಿಸಿದಾಗ ಸಂದು ಅನುಪಸ್ಥಿತಿಯಲ್ಲಿ ವಿಚಾರಣೆ ನಡೆದು ಹಿಂದಿನ ತಡೆಯಾಜ್ಞೆಯನ್ನು ತಡೆಯುವ ಆದೇಶ ಹೊರಬಿದ್ದಿದೆ. ಈ ತೀರ್ಪನ್ನು ಪ್ರಶ್ನಿಸಿ ಸಂದು ಮತ್ತೆ ನ್ಯಾಯಾಲಯದ ಮೆಟ್ಟಲು ಹತ್ತಿದ್ದಾರೆ.


ಆದರೆ ನ್ಯಾಯಾಲಯದ ನೋಟಿಸಿಗೆ ಮೋದಿ ಸರ್ಕಾರ ಇದುವರೆಗೂ ಉತ್ತರಿಸಿಲ್ಲ. ಸಂದು ಅವರನ್ನು ವರ್ಗಾಯಿಸಿದ ನಂತರ ಆಗಸ್ಟ್‌ನಲ್ಲಿ ಸಹಾರಾ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಾಗಿದೆ. ನವೆಂಬರ್ 10ರಂದು ಇದ್ದಕ್ಕಿದ್ದಂತೆ ಕ್ಷಿಪ್ರ ತೀರ್ಪು ನೀಡಿದ ಆಯೋಗ, ಐಟಿ ಇಲಾಖೆ ತಾನು ವಶಪಡಿಸಿಕೊಂಡ ದಾಖಲೆಪತ್ರಗಳ ವಿಶ್ವಾಸಾರ್ಹತೆಯನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿದೆ ಎಂಬ ಸಹಾರಾ ವಾದವನ್ನು ಒಪ್ಪಿದೆಯಲ್ಲದೆ ಸಹಾರಾಗೆ ಕಾನೂನುಕ್ರಮ ಜರುಗುವಿಕೆ ಮತ್ತು ದಂಡಪಾವತಿಯಿಂದ ವಿನಾಯಿತಿ ನೀಡಿದೆ.

ಇದನ್ನೆಲ್ಲ ನೋಡುವಾಗ ದೊಡ್ಡ ದೊಡ್ಡ ರಾಜಕಾರಣಿಗಳನ್ನೊಳಗೊಂಡ ಈ ಇಡೀ ಪ್ರಕರಣದಲ್ಲಿ ಏನೋ ಗೋಲ್‌ಮಾಲ್ ನಡೆದಿರುವ ಅನುಮಾನ ಬರುವುದಿಲ್ಲವೆ?

ಈ ಕಾಳಧನ, ಖೋಟಾನೋಟು, ಭಯೋತ್ಪಾದನೆಗಳ ನಿರ್ಮೂಲನದ ಮಾತುಗಳೆಲ್ಲವೂ ನಾದುರಹಿತ ಉದ್ದಿಮೆಯ ಕಾರ್ಪೊರೇಟುಗಳಿಗೆ ಹಾಸಿರುವ ರತ್ನಗಂಬಳಿಯನ್ನು ಮರೆಮಾಡುವ ಸಲುವಾಗಿವೆ; ಅಸಲಿಗೆ ಎಲ್ಲವೂ ಹೆಚ್ಚುಕಡಿಮೆ ಯಥಾಪ್ರಕಾರ ಮುಂದುವರಿದಿದೆ ಎಂಬ ಸತ್ಯವನ್ನು ಜನ ಎಷ್ಟು ಬೇಗ ಅರಿಯುತ್ತಾರೊ ಅಷ್ಟೂ ಒಳ್ಳೆಯದು.

■ ಸುರೇಶ್ ಭಟ್ ಬಾಕ್ರಬೈಲ್

ಗುಟ್ಟು-ರಟ್ಟಿನ ಬ್ರಾಹ್ಮಣ



ದೊಡ್ಡವರಿಗಾಗಿ ಮಕ್ಕಳ ಕಥೆ

ಒಂದೂರಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದ. ಅವನು ...ಬ್ಬ ವಿಚಿತ್ರ ಮನುಷ್ಯನಾಗಿದ್ದ. ವಿನಪ್ಪ ಆ ವಿಚಿತ್ರ ...ಂದ್ರೆ, ಅವನು ಹೊಟ್ಟೆಗೆ ಏನೂ ತಿನ್ನದಿದ್ದರೂ ...ತಿದಿನ ಅವನ ಹೊಟ್ಟೆ ಆನೆಯ ಹೊಟ್ಟೆಯ ಹಾಗೆ ...ಉಬ್ಬಿಕೊಳ್ಳುತ್ತಿತ್ತು. ಬೆಳಗ್ಗೆ ಬಹಿರ್ದೆಸೆಗೆ ಹೋಗಿ ...ಂದಾಗ ಅವನ ಹೊಟ್ಟೆ ಮಾಮೂಲಿನಂತೆ ...ರುತ್ತಿತ್ತು. ಆದರೆ ರಾತ್ರಿ ಆಗುತ್ತಿದ್ದ ಹಾಗೆ ಅದು ...ತ್ತೆ ಉಬ್ಬಿಕೊಳ್ಳುತ್ತಿತ್ತು. ಅವನನ್ನು ನೋಡಿದ ಊರಿನ ...ನ ಅವನಿಗೇನೋ ರೋಗ ಇದೆ, ಹಾಗಾಗಿ ಅವನಿಗೆ ...ಹೊಟ್ಟೆ ಉಬ್ಬಿಕೊಳ್ಳುತ್ತೆ ಅಂತ ...ಮಾತನಾಡಿಕೊಳ್ಳುತ್ತಿದ್ದರು. ಇಷ್ಟೆಲ್ಲಾ ಇದ್ದರೂ ಅವನು ...ನ್ನ ಮನೆಯಲ್ಲಿ ನಾಲ್ಕು ಪಕ್ಷಿಗಳನ್ನು ಸಾಕಿದ್ದ. ...ಒಂದೊಂದು ಹಕ್ಕಿ ಸೊಂಟದೆತ್ತರದಷ್ಟು ಎತ್ತರ ಇತ್ತು. ...ವೆಲ್ಲಕ್ಕೂ ಒಂದೊಂದು ಹೆಸರಿಟ್ಟಿದ್ದ. ಜಿಯಪ್ಪ ...ಕಪ್ಪ ಏರಪ್ಪ ಮತ್ತು ಐಡಪ್ಪ ಅಂತ ಅವುಗಳ ...ಸರು. ಊರಿನ ಜನರಿಗೆ ಇದನ್ನು ನೋಡಿ ಇನ್ನಷ್ಟು ...ಶ್ಚರ್ಯವಾಯಿತು. "ಆ ಹಾರಪ್ಪಂಗೆ ತಿನ್ನಕ್ಕೆ ಹಿಟ್ಟಿಲ್ಲ. ...ಜೊತೆಗೆ ಆ ನಾಲ್ಕು ಪಕ್ಷಿಗಳು ಯಾಕಪ್ಪ ಬೇಕು ...ಅವನಿಗೆ?" ಎಂದು ಜನ ಆಡಿಕೊಳ್ಳುತ್ತಿದ್ದರು. ಅವನ ...ನಚರಿ ಏನು, ಅವನು ಏನು ಮಾಡುತ್ತಾನೆ, ಎಲ್ಲಿಗೆ ...ಹೋಗುತ್ತಾನೆ, ಅವನ ಮೂಲ ಯಾವುದು, ಅವನ ...ಹಿತರು, ಸಂಬಂಧಿಕರು ಯಾರು ಎಂದು ...ಯಾರೊಬ್ಬರಿಗೂ ತಿಳಿದಿರಲಿಲ್ಲ. ಆ ಬ್ರಾಹ್ಮಣ ಕೂಡ ...ಯಾರ ಜೊತೆಗೂ ಮಾತನಾಡುತ್ತಿರಲಿಲ್ಲ, ಯಾರ ...ಜೊತೆಗೆ ಸ್ನೇಹತನ ಬೆಳೆಸುತ್ತಿರಲಿಲ್ಲ.

ಬೆಳಗ್ಗೆ ಬಹಿರ್ದೆಸೆಗೆ ಹೋದಾಗ ಆ ಬ್ರಾಹ್ಮಣ ...ತ್ತೆ ಜೊತೆ ಆ ನಾಲ್ಕು ಪಕ್ಷಿಗಳನ್ನು ಕರೆದುಕೊಂಡು ...ಹೋಗುತ್ತಿದ್ದ. ಅವುಗಳನ್ನು ದಿನ ಪೂರ್ತಿ ಹಾರಾಡಲು ...ಬಿಟ್ಟು, ತಾನು ಊರೂರು ಸುತ್ತಿ ರಾತ್ರಿಯ ಹೊತ್ತಿಗೆ ...ಮನೆಗೆ ಮರಳುತ್ತಿದ್ದ. ಅವನು ಬರುವ ಹೊತ್ತಿಗೆ ಆ ...ನಾಲ್ಕು ಪಕ್ಷಿಗಳು ಮನೆಗೆ ವಾಪಾಸು ಬಂದು, ಅವನಿಗೆ ...ಒಂದೊಂದು ಚಿನ್ನದ ನಾಣ್ಯಗಳನ್ನು ಕೊಡುತ್ತಿದ್ದವು. ...ಮೇಣ ಆ ಬ್ರಾಹ್ಮಣ ಶ್ರೀಮಂತನಾಗತೊಡಗಿದ. ...ದನ್ನೆಲ್ಲಾ ನೋಡುತ್ತಿದ್ದ ಊರಜನರಿಗೆ ಏನೂ ...ಯದಾಯಿತು. ಎಲ್ಲವೂ ರಹಸ್ಯವಾಗಿ ಕಂಡಿತು.

ಅನೇಕ ದಿನಗಳು ಕಳೆದವು. ಅನೇಕ ...ಗಳುಗಳಾದವು. ಅನೇಕ ವರ್ಷಗಳು ಆದವು. ಈಗ ...ಬ್ರಾಹ್ಮಣ ಊರಿನಲ್ಲೆ ಅತ್ಯಂತ ...ಶ್ರೀಮಂತನೆನಿಸಿಕೊಂಡ. ಎಷ್ಟೊಂದು ಶ್ರೀಮಂತಿಕೆ ...ತೆಂದರೆ ಅವನು ಮನಸ್ಸು ಮಾಡಿದರೆ ಇಡೀ ...ಜ್ಯವನ್ನು ಕೊಂಡುಕೊಳ್ಳುವಷ್ಟು ಹಣ ಮತ್ತು ...ಪತ್ತು ಅವನ ಬಳಿ ಇತ್ತು.

ಒಂದು ದಿನ ರಾಜ್ಯದ ಮಂತ್ರಿ ರಾಜನ ಬಳಿ ಹೋಗಿ ಬಡ ಬ್ರಾಹ್ಮಣ ಶ್ರೀಮಂತನಾದ ಸುದ್ದಿ, ಅವನ ರೋಗ ಮತ್ತು ಅವನ ಬಳಿ ಇರುವ ಪಕ್ಷಿಗಳ ಬಗ್ಗೆ ಸವಿವರವಾಗಿ ತಿಳಿಸಿದ. ರಾಜನಿಗೆ ಆಶ್ಚರ್ಯದ ಜೊತೆಗೆ ಭಯ ಕೂಡ ಆಯಿತು. ಈ ಬ್ರಾಹ್ಮಣನನ್ನು ಹೀಗೆ ಬಿಟ್ಟರೆ ಮುಂದೊಂದು ದಿನ ಇಡೀ ರಾಜ್ಯವನ್ನೆ ಖರೀದಿಸುತ್ತಾನೆ; ಆಗ ತಾನು ರಾಜನ ಸ್ಥಾನವನ್ನು ಕಳೆದುಕೊಳ್ಳುತ್ತೇನೆ ಎಂದು ಹೆದರಿದ. ಸೈನಿಕರನ್ನು ಕಳುಹಿಸಿ ಆ ಬ್ರಾಹ್ಮಣನನ್ನು ಅರಮನೆಗೆ ಕರೆಸಿಕೊಂಡ. ಅಲ್ಲಿಗೆ ಬಂದ ಆ ಬ್ರಾಹ್ಮಣನನ್ನು ಕುರಿತು, "ನಿನ್ನ ಬಗ್ಗೆ ನಾನು ಕೇಳಿದ್ದು ಎಲ್ಲಾ ನಿಜವೆ? ನೀನು ಶ್ರೀಮಂತನಾಗಿದ್ದು ಹೇಗೆ? ಅಷ್ಟೊಂದು ವರ್ಷಗಳಿಂದ ಆ ನಾಲ್ಕು ಪಕ್ಷಿಗಳನ್ನು ಸಾಕುತ್ತಿದ್ದೀಯಲ್ಲ, ಅವುಗಳಿಗೆ ವಯಸ್ಸೇ ಆಗುವುದಿಲ್ಲವೇ? ನಿನಗಿರುವ ಆ ರೋಗ ಏನದು? ಸತ್ಯ ಹೇಳಿದರೆ ನೀನು ಮತ್ತು ಆ ಪಕ್ಷಿಗಳು ಜೀವಂತ ಉಳಿಯುತ್ತವೆ. ಇಲ್ಲದಿದ್ದರೆ ಇವತ್ತೆ ನಿನ್ನ ಕಡೆ ದಿನ" ಎಂದು ಬೆದರಿಸಿದ. ಆ ಬ್ರಾಹ್ಮಣನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ, ನಿಜ ಹೇಳದಿದ್ದರೆ ತನಗೆ ಉಳಿಗಾಲವಿಲ್ಲವೆಂದು ಎಲ್ಲವನ್ನು ಬಾಯಿ ಬಿಡತೊಡಗಿದ.

"ಪ್ರಭು, ನೀವು ಕೇಳಿದ್ದೆಲ್ಲಾ ನಿಜ. ನಾನು ಒಂದು ಕಾಲದಲ್ಲಿ ಕಡು ಬಡವನಾಗಿದ್ದೆ. ಈಗ ಆಗರ್ಭ ಶ್ರೀಮಂತ. ಇದಕ್ಕೆಲ್ಲಾ ಕಾರಣ ನನ್ನ ಹೊಟ್ಟೆ. ನಾನು ಭಿಕ್ಷೆ ಬೇಡುತ್ತಾ ಊರೂರು ಅಲೆಯುತ್ತಿರಬೇಕಾದರೆ ದೊಡ್ಡ ದೊಡ್ಡ ಶ್ರೀಮಂತರು, ಜಮೀನುದಾರರು, ಮಂತ್ರಿಗಳು, ಪುರೋಹಿತರು, ಜ್ಯೋತಿಷಿಗಳು, ವ್ಯಾಪಾರಿಗಳ ಮನೆಯ ಮುಂದೆ ಹಾದುಹೋಗುತ್ತಿದ್ದೆ. ಹಾಗೆ ಹೋಗುತ್ತಿದ್ದಾಗಲೆಲ್ಲಾ ಅವರ ಮನಸ್ಸಿನಲ್ಲಿದ್ದ ಎಲ್ಲಾ ಗುಟ್ಟು ಮತ್ತು ರಹಸ್ಯಗಳು ನನಗೆ ತಿಳಿಯುತ್ತಿತ್ತು. ಆದರೆ ನಾನು ಅದನ್ನು ಬಾಯಿ ಬಿಟ್ಟು, ಬೇರೆಯವರ ಹತ್ತಿರ ಹೇಳುವುದಕ್ಕೆ ಭಯ ಪಡುತ್ತಿದ್ದೆ. ಗುಟ್ಟೆಲ್ಲಾ ನನ್ನೊಳಗೆ ಉಳಿದುಕೊಳ್ಳುತ್ತಿದ್ದರಿಂದ ಹೊಟ್ಟೆತುಂಬಿ, ಉಬ್ಬುತ್ತಿತ್ತು. ಮೊದಮೊದಲು ಇದರಿಂದ ನನಗೆ ವಿಪರೀತ ಹೊಟ್ಟೆನೋವು ಆಗುತ್ತಿತ್ತು. ಹೀಗೆ ಆದರೆ ಕಷ್ಟ ಅಂದುಕೊಂಡು ನಾನು ಒಂದು ಉಪಾಯ ಯೋಚಿಸಿದೆ. ಸಂತೆಯಿಂದ ನಾಲ್ಕು ಮಾಯಾಪಕ್ಷಿಗಳನ್ನು ಖರೀದಿಸಿ, ಅವುಗಳು ನಾನು ಹೇಳಿದ ಹಾಗೆ ಕೇಳುವ ಹಾಗೆ ತರಬೇತಿ ನೀಡಿದೆ. ದಿನಾ ಬೆಳಗ್ಗೆ ನಾನು ಬಹಿರ್ದೆಸೆಗೆ ಹೋದಾಗ ನಾಲ್ಕು ಪಕ್ಷಿಗಳನ್ನು ಜೊತೆಗೆ ಕರೆದುಕೊಂಡು ಹೋಗಿ, ಯಾರಿಗು ಗೊತ್ತಾಗದ ಹಾಗೆ ಪ್ರತಿ ಪಕ್ಷಿಗೂ ಒಂದೊಂದು ಗುಟ್ಟು ಹೇಳುತ್ತಿದ್ದೆ. ಅವು ನಾಲ್ಕು ದಿಕ್ಕಿಗೆ ಹಾರುತ್ತಾ ಹೋಗಿ ನಾನು ಸೂಚಿಸಿದ ವ್ಯಕ್ತಿಗೆ ಗುಟ್ಟನ್ನು ಹೇಳುತ್ತಿದ್ದವು. ಪ್ರತಿಯೊಂದು ಗುಟ್ಟಿಗೆ ಬದಲಾಗಿ ಅವರು ನನ್ನ ಪಕ್ಷಿಗಳಿಗೆ ಒಂದು ಚಿನ್ನದ ನಾಣ್ಯವನ್ನು ಕೊಡುತ್ತಿದ್ದರು. ಹೀಗೆ ಪ್ರತಿ ದಿನ ನನಗೆ ನಾಲ್ಕು ಪಕ್ಷಿಗಳಿಂದ ನಾಲ್ಕು ಚಿನ್ನದ ನಾಣ್ಯಗಳು ಸಿಗುತ್ತಿದ್ದವು. ಕ್ರಮೇಣ ನಾನು ಶ್ರೀಮಂತನಾದೆ."

ರಾಜ ಆ ಬ್ರಾಹ್ಮಣ ಹೇಳಿದ್ದನ್ನೆಲ್ಲಾ ಕೇಳಿದ. ನಂತರ ರಾಜ, "ಈಗಲೂ ನೀನು ಗುಟ್ಟನ್ನು ತಿಳಿದುಕೊಳ್ಳಲು ಊರೂರು ಅಲೆಯುತ್ತೀಯ?" ಎಂದು ಕೇಳಿದ. ಅದಕ್ಕೆ ಬ್ರಾಹ್ಮಣ ಹೇಳಿದ "ಇಲ್ಲ ಪ್ರಭು. ನಾನೀಗ ಆರಾಮವಾಗಿ ಮನೆಯಲ್ಲಿ ಇರುತ್ತೇನೆ. ನನ್ನ ನಾಲ್ಕು ಪಕ್ಷಿಗಳು ಊರೂರು ಹಾರಾಡಿ, ಗುಟ್ಟು, ರಹಸ್ಯವನ್ನು ಸಂಗ್ರಹಿಸಿ ಕೊಡುತ್ತವೆ. ನಾನು ಅವಕ್ಕೆ ತರಬೇತಿ ನೀಡಿದ್ದೇನೆ. ನಾನು ಹೇಳಿದ ಹಾಗೆ ಕೇಳುತ್ತವೆ".


ಇಷ್ಟೆಲ್ಲಾ ಕೇಳಿದ ಮೇಲೆ ರಾಜ, "ಇವನನ್ನು ಹೀಗೆ ಬಿಟ್ಟರೆ ಮುಂದೊಂದು ದಿನ ನಮ್ಮ ರಾಜ್ಯಕ್ಕೆ ಅಪಾಯ ಖಂಡಿತ. ತನ್ನ ಪಕ್ಷಿಗಳನ್ನು ದುರುಪಯೋಗ ಮಾಡಿಕೊಳ್ಳೊದು ಖಂಡಿತ. ಹೇಗಾದರು ಮಾಡಿ ಇವನನ್ನು ನನ್ನ ಬಳಿ ಕೆಲಸಕ್ಕೆ ಇಟ್ಟುಕೊಳ್ಳಬೇಕು. ಇವನಿಂದ ನನ್ನ ಶತ್ರುಗಳ ಬಗ್ಗೆ ತಿಳಿದುಕೊಳ್ಳಬಹುದು" ಎಂದು ಲೆಕ್ಕ ಹಾಕಿದ. ಅವನ ಕಡೆ ನೋಡುತ್ತಾ "ಎಲೈ ಬ್ರಾಹ್ಮಣನೆ, ಇನ್ನು ಮುಂದೆ ನೀನು ನನ್ನ ಬಳಿ ಕೆಲಸಕ್ಕೆ ಇರು. ನಾನು ನಿನಗೆ ಪ್ರತಿ ತಿಂಗಳು ಸಂಬಳ ನೀಡುತ್ತೇನೆ" ಎಂದು ರಾಜ ಹೇಳಿದ. ಅದಕ್ಕೆ ಬ್ರಾಹ್ಮಣ ಮೊದಮೊದಲು ಹಿಂಜರಿದ. ಆದರೆ ರಾಜನ ಆದೇಶವನ್ನು ಪಾಲಿಸದಿದ್ದರೆ ತನ್ನ ಜೀವಕ್ಕೆ ಸಂಚಕಾರ ಎಂದು ತಿಳಿದು ರಾಜನ ಮಾತಿಗೆ ಒಪ್ಪಿದ. ಆದರೆ ಒಂದು ಷರತ್ತನ್ನು ಹಾಕಿದ. ಅದೇನೆಂದರೆ ನಾಲ್ಕು ಪಕ್ಷಿಗಳು ತರುವ ಪ್ರತಿ ಗುಟ್ಟಿಗೆ ಒಂದು ಸಾವಿರ ಚಿನ್ನದ ನಾಣ್ಯಗಳನ್ನು ಬ್ರಾಹ್ಮಣನಿಗೆ ಕೊಡಬೇಕು; ಕೊಡಲು ತಪ್ಪಿದ್ದಲ್ಲಿ ಪಕ್ಷಿಗಳನ್ನು ಕಾಡಿಗೆ ಬಿಟ್ಟುಬಿಡುತ್ತೇನೆ ಎಂದು ಬ್ರಾಹ್ಮಣ ಹೆದರಿಸಿದ. ಮೂರ್ಖ ರಾಜ ಅವನು ಹೇಳಿದ್ದಕ್ಕೆಲ್ಲಾ ಒಪ್ಪಿದ. ಕ್ರಮೇಣ ನಾಲ್ಕು ಪಕ್ಷಿಗಳು ನಾಲ್ಕು ದಿಕ್ಕಿನಿಂದ ತಂದು ಕೊಡುವ ವದಂತಿ, ಗುಟ್ಟು, ರಹಸ್ಯಗಳಿಗೆ ಚಿನ್ನದ ನಾಣ್ಯ ಕೊಟ್ಟು, ಕೊಟ್ಟು ರಾಜನ ಖಜಾನೆ ಖಾಲಿಯಾಯಿತು.

ಮುಂದೆ ಹೇಗೆ ಎಂದು ರಾಜ ಚಿಂತೆಗೀಡಾದ. ಆಗ ಆ ಬ್ರಾಹ್ಮಣ ರಾಜನಿಗೆ ಹೇಳಿದ, "ಪ್ರಭು, ಖಜಾನೆ ತುಂಬೋದು ಬಲು ಸುಲಭ. 'ರಕ್ಷಣಾ ತೆರಿಗೆ', 'ಜಾನುವಾರು ತೆರಿಗೆ', 'ವ್ಯವಸಾಯ ತೆರಿಗೆ'ಗಳನ್ನು ಹೆಚ್ಚು ಮಾಡಿ. ಆಗ ನೋಡಿ. ನಿಮ್ಮ ಖಜಾನೆ ತುಂಬುತ್ತದೆ". ಮೂರ್ಖ ರಾಜ ಬ್ರಾಹ್ಮಣ ಹೇಳಿದ ಹಾಗೆ ಪ್ರಜೆಗಳ ಮೇಲೆ ಹೆಚ್ಚು, ಹೆಚ್ಚು ತೆರಿಗೆ ಹಾಕಿದ. ತೆರಿಗೆ ಕೊಟ್ಟು, ಕೊಟ್ಟು ಪ್ರಜೆಗಳೆಲ್ಲಾ ಕಂಗಾಲಾಗಿ ಹೋದರು. ರಾಜ ಮತ್ತು ಬ್ರಾಹ್ಮಣನಿಗೆ ಪ್ರಜೆಗಳು ಶಾಪ ಹಾಕತೊಡಗಿದರು. ಆದರೆ ಅವರಿಗೆ ಶಾಪ ಹಾಕೋದು ಬಿಟ್ಟರೆ ಇನ್ನೇನೂ ಮಾಡಲಿಕ್ಕಾಗಲಿಲ್ಲ, ಕಾಲಕ್ರಮೇಣ ರಾಜನ ತೆರಿಗೆಯ ಹೊರೆಯನ್ನು ತಾಳಲಾರದೆ ಅವರೆಲ್ಲರೂ ಪರ ರಾಜ್ಯಗಳಿಗೆ ವಲಸೆ ಹೋದರು. ಪ್ರಜೆಗಳಿಲ್ಲದೆ ರಾಜ್ಯ ಬಣಗುಡತೊಡಗಿತು.

* * * *

ಬ್ರಾಹ್ಮಣನಿಗೆ ಕೊಡಲು ಮೂರ್ಖ ರಾಜನ ಬಳಿ ಈಗ ಏನೂ ಉಳಿಯಲಿಲ್ಲ, ರಾಜ ಸಂಪೂರ್ಣ ಹಾಳಾಗಿ ಹೋಗಿ, ಪ್ರಜೆಗಳಿಲ್ಲದ ರಾಜನಾದ. ಬ್ರಾಹ್ಮಣ ಆ ರಾಜ್ಯವನ್ನು ಬಿಟ್ಟು ಈಗ ತನ್ನ ನಾಲ್ಕು ಪಕ್ಷಿಗಳ ಸಮೇತ ಪರ ರಾಜ್ಯದ ರಾಜನ ಬಳಿ ಕೆಲಸಕ್ಕೆ ಇದ್ದಾನೆ.

■ ಡಾ. ವಿಜಯಕುಮಾರ ಎಂ ಬೋರಟ್ಟಿ



ಎಂಜಿ ರೋಡ್ ಇನ್ನು ಎಫ್‌ಜಿ ರೋಡ್



ರಾಷ್ಟ್ರಪಿತ ಮಹಾತ್ಮ ಗಾಂಧಿಯವರನ್ನು ತಮಾಷೆಯ ಹೋಲಿಕೆಗಾಗಿ ಬಳಸಿಕೊಳ್ಳುವವರಿದ್ದಾರೆ. ಅಶ್ಲೀಲವಾಗಿ ಅವರ ಬಗ್ಗೆ ಪದಕಟ್ಟುವವರಿದ್ದಾರೆ. ಬೈಯ್ಯಾಡುವವರಿದ್ದಾರೆ. ಆದರೆ ಇಷ್ಟಾಗಿಯೂ ಗಾಂಧೀಜಿಯ ವಿಚಾರದಲ್ಲಿ ನೇರ ಮುಖಾಮುಖಿಯಾಗುವಾಗ ಇವನ್ನೆಲ್ಲ ಮರೆತು ಗಾಂಧೀಜಿಗೆ ಬೇಷರತ್ ಗೌರವ ಕೊಡುತ್ತಾರೆ. ಇದು ಈ ರಾಷ್ಟ್ರ ಹಾಗು ಮಹಾತ್ಮ ಗಾಂಧಿಗೆ ಇರುವಂತಹ ಭಾವನಾತ್ಮಕ ನಂಟನ್ನು ತೋರಿಸುತ್ತದೆ. ಆದರೆ ಗಾಂಧೀಜಿಯನ್ನು ಜನ್ಮತಃ ದ್ವೇಷಿಸುವ ಹಾಗು ದ್ವೇಷಿಸಲೇಬೇಕಾದಂತಹ ವರ್ಗವೊಂದಿದೆ. ಅದು ಗಾಂಧಿ ಹಂತಕ ಗೋಡ್ಸೆಯನ್ನು ಪೂಜಿಸುವ, ಆತ ಬದುಕಿನಲ್ಲಿ ಮಾಡಿದ ಏಕೈಕ 'ಮಹಾತ್ಕಾರ್ಯ'ಕ್ಕಾಗಿ ಆತನ ದೇಗುಲ ಕಟ್ಟುವ, ಆತನ ಹೆಸರಲ್ಲಿ ರಾಷ್ಟ್ರೀಯ ಪ್ರಶಸ್ತಿ ಸ್ಥಾಪಿಸುವಂತಹ ವರ್ಗ. ಈ ದ್ವೇಷದಲ್ಲಿ ಸಹಜತೆ ಇದೆ. ಇಲ್ಲವಾದಲ್ಲಿ ಅದು ಅವರ ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಿದಂತಾಗುತ್ತದೆ. ಹಾಗಾಗಿ ಇದು ಮಾನ್ಯ ಮಾಡಲೇ ಬೇಕಾದಂತಹ ಸಂಗತಿ.

ಮೊನ್ನೆ ನವೆಂಬರ್ 8ರಂದು ಏಕಾಏಕಿ ಹಳೆ ನೋಟು ಬ್ಯಾನ್ ಮಾಡಿ ಹೊಚ್ಚ ಹೊಸ ನೋಟು ತಂದ ವಿಚಾರ ಅನೇಕರಿಗೆ ಅಚ್ಚರಿ ತಂದಿಟ್ಟರೂ ದೇಶದ ಅನೇಕರಿಗೆ ಒಗಟಾಗಿ ಕಾಡಿದ್ದು 'ಈ ಕ್ಷಿಪ್ರ ಕಾರ್ಯಾಚರಣೆಯ ಹೊಸ ಪ್ರಾಡಕ್ಟ್‌ನಲ್ಲಿ ಅದು ಹೇಗೆ ಗಾಂಧಿ ಚಿತ್ರ ಉಳಿದುಕೊಂಡಿತು?' ಎಂಬ ಪ್ರಶ್ನೆ. ಹೇಗೂ ಜನರಿಗೆ ಶಾಕ್



ಕೊಡುತ್ತಿದ್ದೇವೆ ಅದರ ಜತೆಗೇ ತಮ್ಮ ಮನದಾಳದ ಬಯಕೆಯನ್ನೂ ಜತೆಜತೆಗೇ ಈಡೇರಿಸಿಕೊಳ್ಳಬಹುದಿತ್ತಲ್ಲವೇ? ಅಂದರೆ ಹೊಸ 2000 ನೋಟಿನಲ್ಲಿ ಗಾಂಧಿ ಚಿತ್ರವನ್ನು ಯಾವುದೋ ಸಬೂಬು ಇಲ್ಲಾ ಕೊನೆಗೆ ತೀರಾ ಪ್ರತಿರೋಧ ಬಂದರೆ ಕಣ್ತಪ್ಪಿನ ನೆಪವನ್ನಾದರೂ ನೀಡಿ ಕಣ್ಮರೆ ಮಾಡಬಹುದಿತ್ತಲ್ಲವೇ... ಉಹುಂ ಅದನ್ನೇ ಗಾಂಧೀಜಿಯ ಮಹಾತ್ಮೆ ಎನ್ನೋದು. ಮೊಬೈಲ್ ಟೆಲಿಫೋನ್‌ಗಳು, ಈಮೈಲ್‌ಗಳೆಲ್ಲ ಜನರ ಬಳಿ ಅತಿಯಾಗಿ ಹಾಸುಹೊಕ್ಕ ಬಳಿಕ ಅಂಚೆ ವ್ಯವಹಾರಗಳು, ಪತ್ರಾಚಾರಗಳು ಮೂಲೆಗೆ ತಳ್ಳಲ್ಪಟ್ಟಿವೆ. ಹೀಗಾಗಿ ಯಾರ ಚಿತ್ರದ ಸ್ಟಾಂಪ್ ಬಂದಿದೆ, ಯಾವುದನ್ನ ತೆಗೆದಿದ್ದಾರೆ ಎಂಬ ವಿಚಾರ ಸಾಮಾನ್ಯ ಜನರ ಅರಿವಿನಿಂದ ಹೊರಗೇ ಇದೆ. ಹಾಗಾಗಿ ಅತ್ಯಂತ ಹೆಚ್ಚು ಪ್ರಚಲಿತದಲ್ಲಿದ್ದ ಮಹಾತ್ಮ ಗಾಂಧಿಯ ಜತೆಜತೆಗೇ ಇಂದಿರಾ ಗಾಂಧಿ, ರಾಜೀವ್ ಗಾಂಧಿಯ ಅಂಚೆಚೀಟಿಗೆ ಖೊಕ್ ಕೊಟ್ಟರೂ ಅದು ದೊಡ್ಡ ರಾದ್ಧಾಂತವಾಗಲಿಲ್ಲ. ಆದರೆ ನೋಟು ಹಾಗಲ್ಲ, ದಿನಾ ಪ್ರತಿಯೊಬ್ಬರ ಕಣ್ಣೆದುರು ಬರುವಂತಹ ವಿಚಾರ ಇದಾಗಿದ್ದರಿಂದ ಇಲ್ಲಿ ಎಡವುವುದು ಸುಲಭದ ಮಾತಲ್ಲ. ಹಾಗಾಗಿ ಮನಸ್ಸಿದ್ದರೂ ಕೂಡ (ಕೆಲವೆಡೆ ಗಾಂಧಿರಹಿತ ಐನೂರರ ನೋಟು ಚಲಾವಣೆಯಾದ ಸುದ್ದಿ ಬಂದಿತ್ತು) ಗಾಂಧಿಯನ್ನು ಕಿತ್ತೆಸೆಯುವ ದುಸ್ಸಾಹಸಕ್ಕೆ ಗೋಡ್ಸೆ ಭಕ್ತರು ಕೈಹಾಕಲಿಲ್ಲ. ಯಾಕೆಂದರೆ ಇದು ರಾಷ್ಟ್ರೀಯ ವಿಚಾರವಲ್ಲ ಅಂತರಾಷ್ಟ್ರೀಯವಾಗಿ ಚರ್ಚೆಗೆ ಗ್ರಾಸವಾಗುವಂತಹ (ಅತ್ಯಂತ ಹೆಚ್ಚು ದೇಶಗಳು ತಮ್ಮ ಅಂಚೆಚೀಟಿಗಳಲ್ಲಿ ಮುದ್ರಿಸಿ ಗೌರವಿಸಿದ ವ್ಯಕ್ತಿಯೆಂದರೆ ಅದು ಮಹಾತ್ಮ ಗಾಂಧಿ) ಅಪಾಯವನ್ನು ಗ್ರಹಿಸಿಕೊಂಡು ತಮ್ಮ ಮನದಾಸೆಯನ್ನು ಮುಂದೂಡಿಕೊಳ್ಳಲೇ ಬೇಕಾಯಿತು. ಆದರೆ...

ಅಲ್ಲಿ ಮಾಡಲಾಗದ್ದನ್ನು ಕೆಲವರು ಮತ್ತೆಲ್ಲೋ ಮಾಡಹೊರಟರು. ಅದೆಂದರೆ ಖಾದಿ ವಿಚಾರದಲ್ಲಿ. ಗಾಂಧಿ ಗ್ರಾಮ ಸ್ವರಾಜ್ಯ ಹಾಗು ಸ್ವಾವಲಂಬನೆಯಲ್ಲಿ ನಂಬಿಕೆ ಇಟ್ಟಂತವರು. ಹಿಂದೆ ತಕಲಿಯಲ್ಲೋ, ಚರಕದಲ್ಲೋ ನೂಲನ್ನು ನೈದು ಬೇಕಾದ ಪಂಚೆ ಇತ್ಯಾದಿಗಳನ್ನು ಜನರೇ ತಯಾರಿಸಿಕೊಳ್ಳುತ್ತಿದ್ದರು. ಐಷಾರಾಮಿ ಬದುಕಿಗೆ ವಿರುದ್ಧವಿದ್ದ ಗಾಂಧೀಜಿಯ ತತ್ವಸಿದ್ಧಾಂತಗಳು ಒಂದು ರೀತಿಯಲ್ಲಿ ಆಧ್ಯಾತ್ಮಿಕತೆಗೆ ಹತ್ತಿರವಿದ್ದಂತಿದ್ದವು. 'ಅಸಂಗ್ರಹ' ಅರ್ಥಾತ್ ಕೂಡಿಡದಿರುವಿಕೆ ಅವರ ಸಿದ್ಧಾಂತಗಳಲ್ಲಿ ಒಂದಾಗಿತ್ತು. ಸರಳವಾಗಿ ಹಾಗು ಸ್ವಾವಲಂಬಿಯಾಗಿ ಜೀವಿಸು; ಇದು ಭ್ರಷ್ಟಾಚಾರ ಹಾಗು ಈರ್ಷೆಯೇ ಮೊದಲಾದ ಅನೇಕ ಸಮಸ್ಯೆಗಳ ಹುಟ್ಟನ್ನು ನಿಯಂತ್ರಿಸುತ್ತದೆ ಎನ್ನುವುದು ಅವರ ನಿಲುವಾಗಿತ್ತು. ಹಾಗಾಗಿಯೇ ಅವರು ಅದರ ರೂಪಕವಾಗಿ ಗ್ರಾಮೀಣವಾಗಿ ತಯಾರಿಸುತ್ತಿದ್ದ ಖಾದಿ ಹಾಗು ಚರಕವನ್ನು ಸಾಂಕೇತಿಕವಾಗಿ ಕೈಗೆತ್ತಿಕೊಂಡರು. ಇಂತಹ ಖಾದಿಗೆ ಇಂದು ಕಳಂಕ ಮೆತ್ತಿಕೊಂಡಿದೆ.

ಕಾಲೇಜು ಹುಡುಗಿಯರು ಹುಡುಗರು ಅಥವ ಯುವಜನಾಂಗ ಅತ್ಯಂತ ಹೆಚ್ಚು ಇಷ್ಟ ಪಡುವ ಜೀನ್ಸ್ ಬಟ್ಟೆ ಮೂಲತಃ ಗಣಿ ಕಾರ್ಮಿಕರಿಗೆಂದು ತಯಾರಾದಂತಹ ಬಟ್ಟೆ. ಆದರೆ ನಂತರ ಅದು ಬದಲಾದದ್ದು ಆಧುನಿಕ ಫ್ಯಾಷನ್ ಬಟ್ಟೆಯಾಗಿ. ಅದೇ ರೀತಿ ಮಹಾತ್ಮ ಗಾಂಧಿಯವರಿಂದಲೇ ಪ್ರಭಾವಿತರಾಗಿ ಬಹಳ ಹಿಂದೆಯೇ ಇಂಗ್ಲೆಂಡಿನಿಂದ ಭಾರತಕ್ಕೆ ಬಂದಂತಹ ಇಂಜಿನಿಯರ್ ಒಬ್ಬರು ಬಡವರಿಗಾಗಿ ಸರಳವಾದ ಕಡಿಮೆ ಖರ್ಚಿನ ಮನೆಯನ್ನು ವಿನ್ಯಾಸಗೊಳಿಸಿದ್ದರು. ಅವರೇ ಲಾರಿ ಬೇಕರ್. ಭಾರತೀಯರನ್ನೇ ವಿವಾಹವಾಗಿ ಕೇರಳದಲ್ಲಿ ನೆಲೆಸಿದ್ದ ಇವರ ವಿನ್ಯಾಸ ಅಂದರೆ ಲಾರಿ ಬೇಕರ್ ಶೈಲಿಯ ಮನೆ ಇದೀಗ ಆಗರ್ಭ ಶ್ರೀಮಂತರಷ್ಟೇ ಕಟ್ಟುವಂತಹ ಶೈಲಿಯಾಗಿ ಬದಲಾಗಿ ಹೋಗಿದೆ. ಇದೇ ವಿಚಾರ ಖಾದಿ ಬಟ್ಟೆಗೂ ಅನ್ವಯವಾಗುತ್ತದೆ. ಕೈಗಾರಿಕೀಕರಣ, ಆಮದು, ಜಾಗತೀಕರ... ಇತ್ಯಾದಿಗಳ ಕಾರಣಕ್ಕೆ ಬಟ್ಟೆ ಎನ್ನುವುದು ಮೊದಲಿನಂ... ಅಲಭ್ಯ ಅಥವ ದುಬಾರಿ ವಿಚಾರವಾಗಿ ಉಳಿದಿಲ್ಲ. ಹಾಗಾ... ಖಾದಿಯಂತೂ ಈಗ ಯಾರಿಗೂ ಬೇಡವೇ ಬೇಡ... ರಾಜಕಾರಣಿಗಳು, ಕೆಲ ಕವಿಗಳು, ಅಪರೂಪದಲ್ಲಿ ಹಿರಿಯರ... ಬಳಸುವುದನ್ನು ಬಿಟ್ಟರೆ ಇತರ ನವನವೀನ ಬಟ್ಟೆಗ... ಭರಾಟೆಯಲ್ಲಿ ಕೊಂಚ ದುಬಾರಿಯೂ ಆಗಿರುವ ಖಾ... ಆಕರ್ಷಣೆಯನ್ನು ಕಳೆದುಕೊಂಡಿದೆ. ಈ ಕಾರಣಕ್ಕೇ ಪ್ರ... ವರ್ಷ ಖಾದಿ ಉದ್ಯಮಕ್ಕೆಂದೇ, ಸರಕಾರ ವಿಶೇ... ಸವಲತ್ತುಗಳನ್ನು ನೀಡಿ ಉತ್ತೇಜಿಸುತ್ತದೆ. ಈ ಬದಲಾವ... ಕೇವಲ ಕಾಲದ ಹೊಡೆತದ ಪರಿಣಾಮವೇ ಹೊರತು... ಖಾದಿ ಅಥವ ಆ ಉದ್ಯಮದ ಹಿನ್ನೆಡೆಯಲ್ಲ. ಇ... ಗಾಂಧೀಜಿ ಬಿಟ್ಟು ಮತ್ತೊಬ್ಬ ಬಂದರೂ ಕಾಲದ ... ಪ್ರಭಾವವನ್ನು ಕದಲಿಸಲು ಸಾಧ್ಯವಿಲ್ಲವೆಂಬುವುದು ಬೇ... ಮಾತು. ಆದರೆ ಭಾವನಾತ್ಮಕ ವಿಚಾರ ಎನ್ನುವುದಿದೆಯಲ್ಲ...

ಹೌದು, ರಾಷ್ಟ್ರೀಯವಾಗಿ ಈ ಚರಕ ಹಾಗು ಖಾದಿಗ... ದೇಶಕ್ಕೆ ಸಂಪತ್ತನ್ನು ಕ್ರೋಢೀಕರಿಸಿ ಕೊಡುತ್ತ... ಎನ್ನುವುದಕ್ಕಿಂತಲೂ ಭಾವನಾತ್ಮಕವಾಗಿ ಒಗ್ಗೂಡಿಸುತ್ತ... ಎನ್ನುವುದು ಗಮನಾರ್ಹ. ಯಾವುದೋ ರಾಷ್ಟ್ರೀಯ... ವಿಚಾರದ ಮೇಲೆ ಚರಕದ ಚಿತ್ರವನ್ನು ಹಾಕಿದರೆ ಇ... ಹಳೇ ಕಾಲದ ವಸ್ತುವನ್ನು ಹಾಕಿ ದೇಶದ ಮಾ... ಕಳೆಯುವಿರಾ? ಎಂದು ಯಾರೂ ಕೂಡ ಪ್ರಶ್ನಿಸರು... ಯಾಕೆಂದರೆ, ಆ ಚರಕ ಕೊಡುವ ಸಾಂಕೇತಿಕ ಅರ್ಥಗಳ... ಬೇರೆ ಇರುತ್ತವೆ. ಅದೇ ರೀತಿ ಈ ಚರಕವನ್ನು ಚಳವಳಿಯ... ಸಾಧನವನ್ನಾಗಿಸಿ ಜನಮನ ಗೆದ್ದ ಹೊಟ್ಟೆ ಬೆನ್ನಿಗಂಟಿ... ಗಾಂಧೀಜಿಯ ಬದಲು ಐವತ್ತಾರು ಇಂಚಿನೆದೆಯ ಬಲ್ಲಿ... ಮತ್ತೊಬ್ಬಾತನನ್ನು ತಂದು ಕೂರಿಸಿದರೆ ಅದು ಯಾ... ಸಕಾರಾತ್ಮಕ ಸಾಂಕೇತಿಕ ಅರ್ಥವನ್ನೂ ನೀಡದು. ಅಸಲಿ... ಆಧುನಿಕ ಕಾಲದ ವ್ಯಕ್ತಿಯೊಬ್ಬ ಇಂದು ಬಳಕೆಯಲ್ಲೇ ಇಲ್ಲದ ಚರಕದಲ್ಲಿ ನೂಲುವ ಕಲ್ಪನೆಯೇ ಅತ್ಯಂ... ಹಾಸ್ಯಾಸ್ಪದವಾದದ್ದು.

ಅಂದಹಾಗೆ ಭಾರೀ ಚರ್ಚೆಗೆ ಗ್ರಾಸವಾಗಿರುವ ನೋಟ... ವಿಚಾರವನ್ನು ಜನಮಾನಸದಿಂದ ತಿರುಗಿಸುವ ಸಲುವಾ... ಈ ಖಾದಿ ನಾಟಕವನ್ನು ಹೊಸೆಯಲಾಗಿದೆ ಎನ್ನು... ವಾದವೂ ಇದೆ. ಅಲ್ಲಿ ಉಮಾಭಾರತಿಯಂತವರು ಗಾಂಧೀ... ರಾಷ್ಟ್ರಪಿತನೇ ಅಲ್ಲ ಎನ್ನುತ್ತಾರೆ. ಮತ್ತೊಬ್ಬ ನೋಟಿನಿಂದಲ... ಗಾಂಧೀಜಿಯ ಎತ್ತಂಗಡಿ ಖಂಡಿತ ಎನ್ನುತ್ತಾನೆ. ಇದೆಲ್ಲವನ್ನ... ಕೇಳಿ ಆ ಬಗ್ಗೆ ಚಕಾರವೆತ್ತದೇ ಮುಗುಮ್ಮಾಗಿ ಎಲ್ಲವನ್ನ... ಗಮನಿಸುವ ಆ ವ್ಯಕ್ತಿಗೆ ಮಾತ್ರ ಮಹಾತ್ಮ ಗಾಂಧಿಗಿಂತಲ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಅಂಬಾನಿಯ ಬಾವಿಗೆ ಮುಗ್ಧ ಭಾರತೀಯರನ್ನು ನೂಕಲಾಗುತ್ತಿದೆ

ನಮ್ಮ ಪಾದರಕ್ಷೆಗಳು ಸವೆಯುತ್ತವೆ. ನಾವು ಧರಿಸುವ ಬಟ್ಟೆ ಹಾಗೂ ಆಭರಣಗಳೂ ಎಷ್ಟು ಹೆಚ್ಚು ಉಪಯೋಗಿಸುತ್ತೇವೆಯೋ ಅಷ್ಟು ಹೆಚ್ಚು ಸವೆಯುತ್ತವೆ. ಹೆಂಗಸರ ಹತ್ತು ಗ್ರಾಂನ ಆಭರಣ ಕಾಲಾಂತರದಲ್ಲಿ ಸವೆದು ಒಂಬತ್ತು ಗ್ರಾಂ ಆಗಬಹುದು. ಆದರೆ ನಗದು ಹಣ ಮಾತ್ರ ಎಷ್ಟೇ ಕಾಲ ಸಂದರೂ ಎಷ್ಟೇ ಕೈ ಬದಲಾಯಿಸಿದರೂ ಸವೆಯುವುದಿಲ್ಲ. ಅಂದರೆ ನೂರರ ಒಂದು ನೋಟು ಹತ್ತು ಕೈ ಬದಲಾಯಿಸಿದರೂ ಅದರ ಮೌಲ್ಯ ನೂರು ಆಗಿಯೇ ಇರುತ್ತದೆ. ಆ ನೋಟು ಹಳತಾಗಬಹುದು, ಅಂಚುಗಳು ಹರಿಯಬಹುದು ಆದರೆ ಅದರ ಆಂತರಿಕ ಮೌಲ್ಯ ಮಾತ್ರ ನೂರೇ ರೂಪಾಯಿ ಆಗಿರುತ್ತದೆ.

ಆದರೆ ಇದೇ ಹಣವನ್ನು ನಗದಾಗಿ ಉಪಯೋಗಿಸುವ ಬದಲು ಡಿಜಿಟಲ್ ವಹಿವಾಟು ಮೂಲಕ ಬಳಸಿದರೆ ಕೈಯಿಂದ ಕೈಗೆ ಅದು ಹೋಗುವಾಗ ಅದರ ಮೌಲ್ಯ ಕಡಿಮೆಯಾಗುತ್ತಾ ಹೋಗುತ್ತದೆ. ಕೊನೆಗೆ ಅದು 50-60 ಕೈ ಬದಲಾಯಿಸುವಾಗ ಆ ನೂರರ ಮೌಲ್ಯ ಸವೆದು ಒಂದು ರೂಪಾಯಿಗೆ ಇಳಿದು ಉಳಿದ 99 ರೂಪಾಯಿ ಬ್ಯಾಂಕು ಅಥವಾ ಡಿಜಿಟಲ್ ಪೇಮೆಂಟ್ ಕಂಪನಿಗಳ ಕಿಸೆ ಸೇರಿರುತ್ತದೆ. ಅದು ಹೇಗೆಂದರೆ– ನಾವು 100 ರೂಪಾಯಿಯ ವಸ್ತುಗಳನ್ನು ಅಂಗಡಿಯಿಂದ ಖರೀದಿಸಿದಾಗ ಕಾರ್ಡ್ ಮೂಲಕ ಪೇಮೆಂಟ್ ಮಾಡಿದರೆ ರೂ.2.50 ಕಮಿಷನ್ ಅಂಬಾನಿಯ ಜಿಯೋ-ಪೇಟಿಎಮ್ ಕಂಪನಿಗೆ ಪಾವತಿಯಾಗುತ್ತದೆ ಹಾಗೂ ಅಂಗಡಿಯವನ ಖಾತೆಗೆ ಕೇವಲ 97.50 ಮಾತ್ರ ಜಮೆಯಾಗುತ್ತದೆ. ಈ ಅಂಗಡಿಯವನು ತನ್ನ ಹೋಲ್-ಸೇಲ್ ಸಾಮಾನು ವಿತರಕನಿಗೆ ಕಾರ್ಡ್ ಮೂಲಕ ರೂ. 97.50 ಕೊಡುತ್ತಾನೆ. ಆಗ ಮತ್ತೆ ಅಂಬಾನಿಗೆ ರೂ.2.45 ಕಮಿಷನ್ ಸಿಗುತ್ತದೆ. ಅಂದರೆ ವಿತರಕನಿಗೆ 95.05 ಮಾತ್ರ ಸಿಕ್ಕಂತಾಗುತ್ತದೆ. ಹೀಗೆ ಕೇವಲ ಎರಡೇ ಕೈಬದಲಾಯಿಸಿದಾಗ ನೂರು ರೂಪಾಯಿಯ ಮೌಲ್ಯ ರೂ. 95ಗೆ ಇಳಿಯುತ್ತದೆ ಹಾಗೂ ಅಂಬಾನಿಯ ಕಿಸೆಗೆ ಐದು ರೂಪಾಯಿ ಸೇರುತ್ತದೆ. ಅದರಲ್ಲಿ ಅಂಬಾನಿಯ ಜಿಯೋ ಕಂಪನಿಯ ಚೀನಾದ ಪಾಲುದಾರನಿಗೆ 50% ಅಂದರೆ ರೂ.2.50 ಹೋಗುತ್ತದೆ. ಈ ರೀತಿ ನಿಮ್ಮ ನೂರು ರೂಪಾಯಿ 50-60 ಜನರ ಕೈ ಬದಲಿಸಿದಾಗ ಪೂರ್ಣ ರೂ. 100/- ಅಂಬಾನಿಯ ಕೈಸೇರಿ ನಿಮ್ಮ ನೂರು ರೂಪಾಯಿಯ ಮೌಲ್ಯ ಕೇವಲ ಶೂನ್ಯ ಆಗಿರುತ್ತದೆ.

ಈ ರೀತಿ ಮೋದಿಯ ಅವಧಿ ಮುಗಿಯುವಾಗ ಭಾರತೀಯ ಜನರೆಲ್ಲಾ ಅಂಬಾನಿ ಮತ್ತು ಚೀನಾದ ಪೇಟಿಎಂ ಗುಲಾಮರಾಗಿರುತ್ತಾರೆ. ಬಿಜೆಪಿಯವರು ಮತ್ತು ಮೋದಿಯ ಭಕ್ತರು ನಗದುರಹಿತ ವಹಿವಾಟು ಅರ್ಥಾತ್ ಡಿಜಿಟಲ್ ಪಾವತಿಯ ಈ ರಕ್ತಹೀರುವ ಜಿಗಣೆ ರೂಪ ಹೇಳುವುದೇ ಇಲ್ಲ. ಈ ರೀತಿ ಅಂಬಾನಿಯ ಬಾವಿಗೆ ಮುಗ್ಧ ಭಾರತೀಯರನ್ನು ನೂಕಲಾಗುತ್ತದೆ. ಡಿಜಿಟಲ್ ಭಾರತದ ಮೂಲಕ ನಮ್ಮ ದೇಶ ಅಮೆರಿಕ ಅಥವಾ ಚೀನಾದ ಗುಲಾಮನಾಗುತ್ತಿದೆ. ಅದಕ್ಕಾಗಿಯೇ ಇದನ್ನು ವಿರೋಧಿಸಿದ್ದ ರಿಸರ್ವ್ ಬ್ಯಾಂಕಿನ ಹಿಂದಿನ ಗವರ್ನರ್ ರಘುರಾಮ್ ರಾಜನ್ನರ ಅವಧಿ ಮುಂದುವರಿಸದೇ ಅವರನ್ನು ಮನೆಗೆ ಕಳುಹಿಸಿ ಮೋದಿ ಗ್ಯಾಂಗ್ ಅಂಬಾನಿಯ ಕಂಪನಿಯಲ್ಲಿ ನೌಕರನಾಗಿದ್ದ ಊರ್ಜಿತ್ ಪಟೇಲರನ್ನು ರಿಸರ್ವ್ ಬ್ಯಾಂಕ್ ಗವರ್ನರ್ ಆಗಿ ಮಾಡಿದ್ದು. ಜತೆಗೆ ಜನವರಿ 20 ರಿಂದ ರಿಸರ್ವ್ ಬ್ಯಾಂಕಿನ ಉಪ-ಗವರ್ನರ್ ಹುದ್ದೆಗೆ ಸಹ ಇನ್ನೊಬ್ಬ ಗುಜರಾತಿಯನ್ನು ಹೇರಲಾಗಿದೆ. ಅವರೇ ವಿರಲ್ ಆಚಾರ್ಯ (ಇವರನ್ನು ಹೆಚ್ಚಿನ ಇಂಗ್ಲಿಷ್ ಪತ್ರಿಕೆಗಳು ವೈರಲ್ ಆಚಾರ್ಯ... ಎಂದು ಕರೆಯುತ್ತವೆ). ಈ ವೈರಲ್ ಸಹಾ ಗುಜರಾತಿ ಬ್ರಾಹ್ಮಣನಾಗಿದ್ದು ಇವರು ಮುಂಬೈಯಲ್ಲಿ ಹುಟ್ಟಿ ಬೆಳೆದಿದ್ದು ಹಾಗೂ ಅಲ್ಲಿಯೇ ಐಐಟಿ ಮಾಡಿದ್ದು. ಇವರ ತಂದೆ ದಕ್ಷಿಣ ಮುಂಬೈಯಲ್ಲಿ ಆರೆಸ್ಸೆಸ್ ಸದಸ್ಯರಾಗಿದ್ದರಂತೆ. ಹಾಗಾಗಿ ಸುಮಾರು ತೊಂಬತ್ತು ಜನ ಅರ್ಹರಲ್ಲಿ ಈ ವಿರಳರನ್ನೇ ರಿಸರ್ವ್ ಬ್ಯಾಂಕಿನ ಡೆಪ್ಯೂಟಿ ಗವರ್ನರ್ ಹುದ್ದೆಗೆ ಮೋದಿ-ಅಮಿತ್ ಷಾ ಆರಿಸಿದ್ದು...

ಭಾರತದ ರಿಸರ್ವ್ ಬ್ಯಾಂಕಿನ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ರಿಸರ್ವ್ ಬ್ಯಾಂಕಿನ ಗವರ್ನರ್ ಮತ್ತು ಉಪ-ಗವರ್ನರ್ ಇಬ್ಬರೂ ಒಂದೇ ಭಾಷೆಯವರು ಅಂದರೆ ಗುಜರಾತಿಗಳಾಗಿರುವುದು! ಸಿಬಿಐ ಮುಖ್ಯಸ್ಥ ಈಗಾಗಲೇ ಒಬ್ಬ ಗುಜರಾತಿ.

ಪುಣ್ಯಕ್ಕೆ ಗುಜರಾತಿಗಳು ತುಂಬಾ ಪುಕ್ಕಲರಾದುದರಿಂದ ಭಾರತೀಯ ಸೇನಾಪಡೆಯಲ್ಲಿ ಗುಜರಾತಿಗಳು ತುಂಬಾ ವಿರಳ. ಇಲ್ಲದಿದ್ದರೆ ನಮ್ಮ ಸೇನಾಪಡೆಯ ಮೂರೂ ಮುಖ್ಯಸ್ಥರು ಮೋದಿಯ ರಾಜ್ಯದ ಗುಜರಾತಿಗಳೇ ಆಗಿರುತ್ತಿದ್ದರು. ಆಶ್ಚರ್ಯದ ವಿಷಯವೆಂದರೆ ರಿಸರ್ವ್ ಬ್ಯಾಂಕಿನ ಇಬ್ಬರು ಗವರ್ನರುಗಳಿಗೂ ಭಾರತದ ಹಳ್ಳಿಗಳ ಪರಿಚಯವೇ ಇಲ್ಲ. ಇವರಿಬ್ಬರೂ ಜೋಳದ ದಂಟು ಮತ್ತು ಕಬ್ಬಿನ ಜಲ್ಲೆ ಇವುಗಳಲ್ಲಿ ಭೇದ ಗುರುತಿಸಲಾರರು. ಗೋಧಿಯ ಪೈರು ಹಾಗೂ ಭತ್ತದ ಪೈರು ಯಾವುದೆಂದು ಗುರುತಿಸಲಾರರು. ಹಾಗಾಗಿ ಅವರಿಬ್ಬರಿಗೂ ನಮ್ಮ ಆರು ಲಕ್ಷ ಹಳ್ಳಿಗಳ ಸಂಕೀರ್ಣ ಆರ್ಥಿಕ ವ್ಯವಸ್ಥೆ ಹಾಗೂ ನೆಲಮಟ್ಟದ ಸಮಸ್ಯೆಗಳ ಅರಿವೇ ಇಲ್ಲ. ಹಳ್ಳಿಗಳಲ್ಲಿ ಇರುವವರಲ್ಲಿ ಹೆಚ್ಚಿನವರು ಹಿಂದುಳಿದ ಜಾತಿಯವರು ತಾನೇ. ಹಾಗಿರುವಾಗ ನಗರದಲ್ಲಿ ಹುಟ್ಟಿ ಬೆಳೆದ ಮೇಲ್ಜಾತಿಯ ಆರೆಸ್ಸೆಸಿಗರಿಗೆ ಹಳ್ಳಿಗರ ಚಿಂತೆಯೇಕೆ ಉಂಟಾದೀತು?



– ಕೇಶವರಾಮ ಅಡಪ, ಕಿನ್ನಿಗೋಳಿ (ದ.ಕ)



...ಚ್ಚು ರಾಹುಲ್ ಗಾಂಧಿಯದ್ದೇ ದೊಡ್ಡ ಚಿಂತೆ. ಆತ ...ನಲ್ಲಿ ನಿಂತರೂ ಚಿಂತೆ, ಆರೋಪ ಮಾಡಿದರೂ ಚಿಂತೆ. ...ಜಪೇಯಿ ಪ್ರಧಾನಿಯಾದ ಬಳಿಕ ಅನೇಕ ಅಟಲ್ ...ನಗರಗಳು ತಲೆಯೆತ್ತಿದ್ದವು. ಅದೇ ರೀತಿ ಗೋಲ್ವಾಲ್ಕರ್, ...ಗಡೆವಾರ್, ಶ್ಯಾಂಪ್ರಸಾದ್ ಮುಖರ್ಜಿ ದಿನಾಚರಣೆಗಳೆಲ್ಲ ...ತ್ಯಕ್ಷ ಯಾ ಪರೋಕ್ಷವಾಗಿ ಚಿಗುರಿಕೊಂಡವು. ಇನ್ನು ...ಮುಂದೆ ಗಾಂಧಿ ಮೈದಾನ, ಗಾಂಧಿನಗರ, ಮಹಾತ್ಮ ...ಗಾಂಧಿ ರಸ್ತೆಗಳೆಲ್ಲ ಮಾಯವಾಗಿ ಫೇಕು ನಗರ, ಎಫ್‌ಜಿ ...ರೋಡಾಗಿ (ಫೇಕು ಗುಜರಾತಿ) ಬದಲಾದರೆ ಅಚ್ಚರಿ ...ಯೇನಿಲ್ಲ. ಯಾಕೆಂದರೆ, ಗಾಂಧಿಯಂತೆ ಸರಳವ್ಯಕ್ತಿಯೆಂದು ...ರಾಜಕೀಯ ಮುಖ ಏನೇ ಇದ್ದಿರಲಿ) ಇತಿಹಾಸದಲ್ಲಿ ...ಅಖಲಾದ ಅರ್ಧ ಶತಮಾನಗಳಷ್ಟು ಕಾಲ ದೆಹಲಿಯಲ್ಲಿ ...ಕುಳಿತು ದೇಶವನ್ನಾಳಿದ ಚಕ್ರವರ್ತಿ ಔರಂಗಜೇಬನ ಹೆಸರಲ್ಲಿದ್ದ ...ದೆಹಲಿಯ ರಸ್ತೆಯನ್ನೇ ಅಳಿಸಿ ಬದಲಾಯಿಸಲಿಲ್ಲವೇ? ...ಪ್ರಕ್ರಿಯೆಗಳಿಗೆಲ್ಲ ಆದಾಗಲೇ ಚಾಲನೆ ಸಿಕ್ಕಿಯಾಗಿದೆ. ...ಂದರೆ ಮುಂದಿದೆ ಗೋಲ್ವಾಲ್ಕರ್ ಯುಗ ಅಂದಾಯ್ತು.

- ಓದುಗ, ಬೆಂಗಳೂರು

ತಾಯಿಯ ಪ್ರೀತಿಯೂ ಪಬ್ಲಿಸಿಟಿಯ ವಿಷಯವೇ?

ಕಳೆದ ವಾರ ವೈಬ್ರಂಟ್ ಗುಜರಾತ್ ಸಮಾವೇಶಕ್ಕೆ ...ಮೋದಿಯವರು ಗಾಂಧಿನಗರಕ್ಕೆ ಹೋಗಿದ್ದಾಗ ತನ್ನ ಕೊನೆಯ ...ತಮ್ಮನೊಂದಿಗೆ ವಾಸಿಸುವ ತಾಯಿಯನ್ನು ಭೇಟಿಯಾಗಿ ...ನಂತರ ಅವರು ಟ್ವೀಟ್ ಮಾಡಿದ್ದು ಹೀಗೆ: "ಇಂದು ...ಯೋಗಾಭ್ಯಾಸ ಮಾಡದೇ, ತಾಯಿಯನ್ನು ಭೇಟಿಯಾಗಲು ...ಹೋದೆ. ಅವರ ಜತೆ ಬೆಳಗಿನ ಉಪಾಹಾರ ಸೇವಿಸಿದೆ. ...ಅವರೊಂದಿಗೆ ಕಳೆದ ಸಮಯ ಅನನ್ಯವಾಗಿತ್ತು."

ಮೋದಿಯವರು ಇಂತಹ ಖಾಸಗಿ ವಿಷಯಗಳನ್ನು ...ಟ್ವಿಟರ್‌ನಲ್ಲಿ ಹೇಳಿಕೊಳ್ಳುವ ಅಗತ್ಯವೇನಿತ್ತು? ಅಂದರೆ ...ಮೋದಿ ಇದೆಲ್ಲಾ ಕೇವಲ ಪ್ರಚಾರಕ್ಕಾಗಿ ಮಾಡಿದ್ದೇ ವಿನಃ ...ತಾಯಿಯ ಮೇಲಿನ ಮಮತೆಯಿಂದ ಮಾಡಿದ್ದಲ್ಲ ಎಂದು ...ಮತ್ತೊಮ್ಮೆ ಸಾಬೀತಾಯಿತು.

ತಾಯಿಯನ್ನು ವೈಯಕ್ತಿಕ ನೆಲೆಯಲ್ಲಿ ಭೇಟಿಯಾಗು...ವಾಗಲೂ ಮೋದಿಯ ಹಿಂದೆ ಒಂದು ಡಜನ್ ಟಿವಿಯ ...ರು ಹಾಗೂ ಎರಡು ಡಜನ್ ಪತ್ರಕರ್ತರು ಯಾಕೆ ...ಬರಬೇಕಿತ್ತು? ಜೀವನ ಇಡೀ ತಾಯಿ ತನ್ನ ಕೊನೆಯ ...ಮಗ ಪ್ರಹ್ಲಾದ್ ಭಾಯಿಯ ಮನೆಯಲ್ಲಿಯೇ ...ಇರಬೇಕಿರುವುದು ಯಾವ ಕಾರಣಕ್ಕೆ? ದಿನವೊಂದಕ್ಕೆ ಐದು ...ಸಾವಿರ ರೂಪಾಯಿಯ ಮಶ್ರೂಮ್ ತಿನ್ನುವ, ಕೇವಲ ...ಗೋಡಂಬಿ ಬಾದಾಮಿಗೆ ದಿನವೊಂದಕ್ಕೆ ಹತ್ತು ಸಾವಿರ ...ಖರ್ಚು ಮಾಡುವ ನರೇಂದ್ರ ಮೋದಿ ತನ್ನ ತಾಯಿ ...ಕೊನೆಯ ಮಗನ ಮನೆಯಲ್ಲಿ ದಾಲ್ ರೋಟಿ ತಿನ್ನುತ್ತಾ ...ಇರಬೇಕಾಗಿ ಬಂದಿರುವುದು ಯಾಕೆ?

ಈಗ ತಾಯಿಯ ಪ್ರೀತಿಯನ್ನೂ ಪ್ರಚಾರದ ವಸ್ತುವನ್ನಾಗಿ ...ಮಾಡಿರುವ ಮೋದಿ ಹಿಂದೊಮ್ಮೆ ಒಬ್ಬ ಸಾಮಾನ್ಯ ವ್ಯಕ್ತಿ ...ಯಾಗಿದ್ದಾಗ ಅವರು ತನ್ನ ತಂದೆತಾಯಿಯೊಂದಿಗೆ ವೈಮನಸ್ಸು ...ಹೊಂದಿ ಪ್ರತ್ಯೇಕವಾಗಿ ವಾಸಿಸುತ್ತಿದ್ದದ್ದು ಯಾಕೆ? ಆಗ ...ಅವರ ತಂದೆ ತೀರಿಕೊಂಡಾಗ ಅದೇ ಊರಿನಲ್ಲಿದ್ದ ಮೋದಿ ... ತಾಯಿ ಕರೆದರೂ ಮರಣದ ಮನೆಗೆ ಹೋಗಲಿಲ್ಲ; ... ತಂದೆಯ ಶವದ ಬಾಯಿಗೆ ತುಳಸಿ ನೀರು ಬಿಡುವ ...ಂದೂ ಮಗನ ಕೊಟ್ಟ ಕೊನೆಯ ಕರ್ತವ್ಯವನ್ನೂ ...ನೆರವೇರಿಸಲಿಲ್ಲ. ತನ್ನ ತಂದೆ ಹಾಗೂ ಅಣ್ಣಂದಿರೊಂದಿಗೆ ... ವೈಮನಸ್ಸನ್ನು ತಂದೆಯ ಮರಣದನಂತರವೂ ...ಮುಂದುವರಿಸಿದ್ದು ಇದೇ ಮೋದಿ. ಆದರೂ ಇವರನ್ನು ...ಂದೂ ಪರಂಪರೆಯ ರಕ್ಷಕ ಎನ್ನುತ್ತಾರೆ!

ಚಿಕ್ಕಂದಿನಿಂದಲೂ ತನ್ನ ಹೆತ್ತವರೊಂದಿಗೆ ಹಾಗೂ ...ಸಹೋದರ ಸಹೋದರಿಯೊಂದಿಗೆ ವೈರ ಕಟ್ಟಿಕೊಂಡಿದ್ದ ...ಂದ್ರ ಮೋದಿ ಅವರೆಲ್ಲಾ ಬಡವರಾಗಿಯೇ ಇರಬೇಕೆಂದು ...ದು ಮನಸ್ಸು ಹೊಂದಿದ್ದರು. ಅದಕ್ಕಾಗಿ ತಾವು 14 ...ವರ್ಷ ಮುಖ್ಯಮಂತ್ರಿ, ಆಗಿದ್ದರೂ ಸಹೋದರರಿಗೆ ಕಾಸೂ ಸಿಗದ ಚೌಕಟ್ಟಿನೊಳಗೂ ಸಹಾಯ ಮಾಡಲಿಲ್ಲ. ಈ ಸೇಡು ಬುದ್ಧಿಯನ್ನೇ ಮೋದಿಯ ಪ್ರಚಾರಕರು ತಿರುಚಿ "ನೋಡಿ ಇತರರೆಲ್ಲಾ ತಮ್ಮ ಅಧಿಕಾರ ದುರುಪಯೋಗ ಮಾಡಿ ತಮ್ಮ ತಮ್ಮ ಸಂಬಂಧಿಕರಿಗೆ ಕೋಟ್ಯಂತರದ ಆಸ್ತಿ ಮಾಡಿಸಿ ಕೊಟ್ಟಿದ್ದಾರೆ. ಆದರೆ ಮೋದಿ ಮಾತ್ರ ತನ್ನ ಬಡ ಸಂಬಂಧಿಕರಿಗೆ ಯಾವುದೇ ಸಹಾಯ ಮಾಡಲಿಲ್ಲ. ಅಷ್ಟೊಂದು ಪ್ರಾಮಾಣಿಕರು ನರೇಂದ್ರ ಮೋದಿ" ಎಂದು ಪ್ರಚಾರ ಮಾಡಿದರು.

ಮೋದಿಯು ಕೌಟುಂಬಿಕ ಸೇಡು ಬುದ್ಧಿಯಿಂದ ತನ್ನ ಸಹೋದರಿ ಸಹೋದರರಿಗೆ ಸಹಾಯ ಮಾಡದಿದ್ದರೂ ತನ್ನ ಚೇಲಾ ಉದ್ಯಮಿಗಳಾದ ಅಂಬಾನಿ, ಅದಾನಿಗಳಿಗೆ ಬ್ರಹ್ಮಾಂಡ ಸಹಾಯ ಮಾಡಿ ಬಿಲಿಯನ್‌ಗಟ್ಟಲೆ ಲಾಭ ಮಾಡಿಕೊಟ್ಟಿದ್ದಾರೆ. ಈ ಚೇಲಾ ಉದ್ಯಮಿಗಳೇ ತಾನೇ ಮುಂದಿನ ತಿಂಗಳು ನಡೆಯಲಿರುವ ಉತ್ತರ ಪ್ರದೇಶ ಮತ್ತು ಪಂಜಾಬ್ ಚುನಾವಣೆಗೆ ಸಾವಿರ ಕೋಟಿ ರೂಪಾಯಿ ಚುನಾವಣಾ ನಿಧಿ ಕೊಟ್ಟಿರುವುದು. ಒಂದು ವೇಳೆ ಮೋದಿ ತನ್ನ ಕುಟುಂಬಿಕರಿಗೆ ಸಹಾಯ ಮಾಡಿದ್ದರೆ ಅವರು ಅಂಬಾನಿ, ಅದಾಣಿ ಕೊಟ್ಟಷ್ಟು ಚುನಾವಣಾ ಫಂಡ್ ಮೋದಿಗೆ ಕೊಡಲು ಸಾಧ್ಯವಿತ್ತೇ? ಇಂತಹ ದೂರದೃಷ್ಟಿಯುಳ್ಳ ಅಪ್ಪಟ ವ್ಯಾಪಾರಿ ಬುದ್ಧಿಗೆ ಮೋದಿ ಭಕ್ತರು ಪ್ರಾಮಾಣಿಕತೆ ಎನ್ನುತ್ತಿದ್ದಾರೆ!

- ಜೆ. ರವಿಕಿರಣ, ಮೈಸೂರು

ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ ಸೇವೆ ಸಿಗಲಿ

ಜನವರಿ 11ರ ಸಂಚಿಕೆಯಲ್ಲಿ ತಾವು ಹೇಳಿರುವಂತೆ ಆಮಿರ್ ಖಾನ್ ತಯಾರಿಸಿರುವ 'ದಂಗಲ್' ಚಲನಚಿತ್ರ ತುಂಬ ಅದ್ಭುತವಾಗಿದ್ದು ಪ್ರತಿಯೊಬ್ಬರೂ ನೋಡಬಹುದಾದ ಚಿತ್ರ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅದರಲ್ಲಿ ಎರಡು ಮಾತಿಲ್ಲ. ಕ್ರೀಡಾಸ್ಪರ್ಧೆಗಳಲ್ಲಿ (ಹೆಣ್ಣು ಮಕ್ಕಳು) ಸಾರ್ವಭೌಮತ್ವ ಸಾಧಿಸುವುದು ಈ ಚಿತ್ರದ ಕಥಾವಸ್ತು. ಇದೇ ಉದ್ದೇಶಕ್ಕಾಗಿ ನಮ್ಮ ಸರ್ಕಾರಗಳು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುತ್ತವೆ. ಆದರೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಕ್ರೀಡಾಪಟುಗಳ ಸಾಧನೆಯನ್ನು ನೋಡಿದರೆ ತುಂಬ ನಾಚಿಕೆಯಾಗುತ್ತದೆ ಎಂದರೆ ತಪ್ಪಾಗದು. ಇಡೀ ವಿಶ್ವದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ರಾಷ್ಟ್ರಗಳಲ್ಲಿ 2ನೇ ಸ್ಥಾನದಲ್ಲಿರುವ ನಮ್ಮ ರಾಷ್ಟ್ರ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಕೇವಲ ಒಂದೋ ಎರಡೋ ಪದಕಗಳನ್ನು ಗೆದ್ದು, ಪದಕಗಳನ್ನು ಗೆದ್ದ ರಾಷ್ಟ್ರಗಳ ಪಟ್ಟಿಯ ತಳದಲ್ಲಿ, ಸಣ್ಣಪುಟ್ಟ ರಾಷ್ಟ್ರಗಳ ಕೆಳಗೆ ಕಾಣಿಸುವುದು ನಾವು ನಾಚಿಕೆಪಟ್ಟುಕೊಳ್ಳಬೇಕಾದ ಸಂಗತಿಯಲ್ಲವೇ? ಇದಕ್ಕೆ ಕಾರಣ



ತಳಮಟ್ಟದಲ್ಲಿ ಕ್ರೀಡೆಗಳ ಅಭಿವೃದ್ಧಿ ಆಗದಿರುವುದು!!

ಕ್ರೀಡೆಗಳಲ್ಲಿ ಪದಕಗಳನ್ನು ಗೆಲ್ಲುವುದು ದೇಶದಲ್ಲಿನ ಜನತೆಯ ಆರೋಗ್ಯ ಸೂಚಕ. ನಮ್ಮ ಜನರಿಗೆ ಹೊಟ್ಟೆತುಂಬ ಊಟವೇ ಸಿಗುವುದಿಲ್ಲ!! ಇನ್ನು ಅವರಿಗೆ ಆರೋಗ್ಯಭಾಗ್ಯ ದೇಹಕ್ಕೆ ಸದೃಢತೆಯ ಭಾಗ್ಯ ಸಿಕ್ಕಿದ ನಂತರ ತಾನೇ ಅವರು ಕ್ರೀಡಾಪಟುಗಳಾಗುವುದು... ಸ್ಪರ್ಧಿಸುವುದು... ಪದಕ ಗೆಲ್ಲುವುದು...???

ಆದ್ದರಿಂದ ಸರ್ಕಾರಗಳು ಪದಕ ಗೆಲ್ಲಿಸಲು ಮಾಡುವ ಖರ್ಚನ್ನು ಸಂಪೂರ್ಣವಾಗಿ ನಿಲ್ಲಿಸಿ, ದೇಶದಲ್ಲಿನ ಪ್ರತಿಯೊಬ್ಬರೂ ಆರೋಗ್ಯವಂತರೂ, ವಿದ್ಯಾವಂತರೂ ಆಗುವಂತೆ ಎಲ್ಲರಿಗೂ ಉಚಿತ ವಿದ್ಯಾಭ್ಯಾಸ ಮತ್ತು ಉಚಿತ ಆರೋಗ್ಯ ಸೌಲಭ್ಯಗಳನ್ನು ಒದಗಿಸಬೇಕು. ಅದಕ್ಕಾಗಿ ಎಷ್ಟು ಹಣ ಖರ್ಚಾದರೂ ಸರಿ; ಇತರೆ ಯೋಜನೆಗಳನ್ನು ಕೈಬಿಟ್ಟರೂ ಸರಿ. ಉಚಿತ ಹಾಗೂ ಶ್ರೇಷ್ಠ ಗುಣಮಟ್ಟದ ವಿದ್ಯಾಭ್ಯಾಸ ಮತ್ತು ಆರೋಗ್ಯ ಸೌಲಭ್ಯಗಳು ಪ್ರತಿಯೊಬ್ಬರಿಗೂ ಸಿಗಬೇಕು!!! ಆಗ ದೇಶ ತಂತಾನೆ ಮುಂದುವರಿಯುತ್ತದೆ. ಅಂತರ್‌ರಾಷ್ಟ್ರೀಯ ಮಟ್ಟದ ಕ್ರೀಡೆಗಳನ್ನೊಳಗೊಂಡಂತೆ ಎಲ್ಲಾ ರಂಗಗಳಲ್ಲೂ ದೇಶ ಪ್ರಗತಿ ಸಾಧಿಸುತ್ತದೆ. ಸ್ತ್ರೀಯರ ಪ್ರಗತಿ ಕೂಡ ಸ್ವಾಭಾವಿಕವಾಗಿಯೇ ಆಗುತ್ತದೆ. ಅದನ್ನು ಯಾರೂ ತಡೆಯಲಾಗುವುದಿಲ್ಲ.

- ವೀರಬ್ಯಾತಯ್ಯ, ಬೆಂಗಳೂರು

ಮೋದಿಗೆ ಕಳ್ಳರ ಸಂಘದ ಬೆಂಬಲ

ಸಣ್ಣ ಕಳ್ಳನನ್ನು ಹಿಡಿದು ಶಿಕ್ಷಿಸಲಾಗುತ್ತದೆ ಹಾಗೂ ದೊಡ್ಡ ಕಳ್ಳನಿಗೆ ಬಹುಮಾನ ಕೊಡಲಾಗುತ್ತದೆ ಎಂಬುದು ಮುಖೇಶ್ ಅಂಬಾನಿ ಓಎನ್‌ಜಿಸಿಯ ಕೃಷ್ಣ-ಗೋದಾವರಿ ನಿಕ್ಷೇಪದಿಂದ 50,000 ಕೋಟಿ ಮೌಲ್ಯದ ಗ್ಯಾಸ್ ಕಳ್ಳತನ ಮಾಡಿರುವ ಪ್ರಕರಣದಲ್ಲಿ ಸಾಬೀತಾಗಿದೆ. ಅಂಬಾನಿಯ




ಗ್ಯಾಸ್ ಕಳ್ಳತನದ ತನಿಖೆಗೆ ನೇಮಿಸಿದ್ದ ಎರಡೂ ಸಮಿತಿಗಳು ಮುಖೇಶ್ ಅಂಬಾನಿಯ ಕಂಪನಿಯು ಬೇಕೆಂದೇ ವಾರೆಯಾಗಿ ಬಾವಿ ಕೊರೆದು ಐವತ್ತು ಸಾವಿರ ಕೋಟಿ ರೂಪಾಯಿ ಮೌಲ್ಯದ ಓಎನ್‌ಜಿಸಿಯ ಗ್ಯಾಸ್ ಕದ್ದಿದೆ ಎಂದು ತೀರ್ಪು ಕೊಟ್ಟಿವೆ. ಆದರೆ ನಮ್ಮ ಮೋದಿ ಸರಕಾರವು ಅಂಬಾನಿಯ ತೈಲ ಕಂಪನಿಯ ಮೇಲೆ ಕೇವಲ 10,000 ಕೋಟಿ ದಂಡ ಹಾಕಿ ಉಳಿದ 40 ಸಾವಿರ ಕೋಟಿಯನ್ನು ಅಂಬಾನಿ ತಾನೇ ಇಟ್ಟುಕೊಳ್ಳಲು ಅನುಮತಿ ಕೊಟ್ಟು ಈ ಬೃಹತ್ ಮೊತ್ತದ ಕಳ್ಳತನವನ್ನು ಕಾನೂನುಬದ್ಧವಾಗಿ ಅನುಭವಿಸಲು ಅನುಮತಿ ಕೊಟ್ಟಿದೆ. ಈ 40 ಸಾವಿರ ಕೋಟಿಯಲ್ಲಿ ಮೋದಿಯ ಪಕ್ಷಕ್ಕೆ ಕನಿಷ್ಠ 20 ಸಾವಿರ ಕೋಟಿ ನೇರ ಅಥವಾ ಪರೋಕ್ಷವಾಗಿ ಪಾರ್ಟಿ ಫಂಡ್ ಸಂದಾಯ ಆಗಿರುವುದು ಖಂಡಿತ. ಹಾಗಾಗಿ ಇನ್ನು ಮುಂದೆ ಇದೇ ನಿಯಮವನ್ನು ಎಲ್ಲಾ ಸಣ್ಣ ಪುಟ್ಟ ಕಳ್ಳತನಕ್ಕೂ ಅನ್ವಯಿಸಬೇಕು. ಅಂದರೆ ಒಬ್ಬ ಕಳ್ಳ ಒಂದು ಮನೆಯಿಂದ ಐದು ಗ್ರಾಂ ಚಿನ್ನ ಕದ್ದರೆ ಅವನಿಂದ ಪೊಲೀಸರು ಕೇವಲ ಒಂದು ಗ್ರಾಂ ಚಿನ್ನ ಮಾತ್ರ ವಸೂಲು ಮಾಡಿ ಉಳಿದ ನಾಲ್ಕು ಗ್ರಾಂ ಚಿನ್ನವನ್ನು ಕಳ್ಳನೇ ಅಧಿಕೃತವಾಗಿ ಇಟ್ಟುಕೊಳ್ಳಲು ಲಿಖಿತ ಅನುಮತಿ ಕೊಡಬೇಕು. ಅಂಬಾನಿ ಆಗಿರಲಿ ಅಥವಾ ನಮ್ಮ ಊರಿನ ಜುಜುಬಿ ಕಳ್ಳ ಗುಂಬಾನಿ ಆಗಿರಲಿ, ಎಲ್ಲ ಕಳ್ಳರನ್ನೂ ಹೀಗೆ ಸಮಾನ ನೆಲೆಯಲ್ಲಿ ಕಾಣಬೇಕು ಎಂದು ಕಳ್ಳರ ಸಂಘವು ಮೋದಿ ಸರಕಾರದ ಮುಂದೆ ಬೇಡಿಕೆ ಇಟ್ಟಿದೆಯಂತೆ.

ಅದೇ ಪ್ರಕಾರ ಕಳ್ಳರ ಸಂಘವು ಮೋದಿಯವರನ್ನು ಬೆಂಬಲಿಸುತ್ತಾ 'ಎಲ್ಲಾ ವಿಷಯಗಳಲ್ಲಿ ಮೋದಿ ಸರಕಾರವನ್ನು ದೂರುವುದು ಸರಿಯಲ್ಲ. ಕಾರಣ ಹೆಚ್ಚಿನ ಯೋಜನೆ ಅವರು ತುಂಬಾ ತುಂಬಾ ದೂರ ದೃಷ್ಟಿ ಇಟ್ಟುಕೊಂಡು ದೇಶದ ಒಳಿತಿಗಾಗಿ ಮಾಡಿದ್ದು' ಎನ್ನುತ್ತಿದೆ. ಕಚ್ಚಾತೈಲ ದರ ಕುಸಿದಿದ್ದರೂ ಪೆಟ್ರೋಲ್-ಡೀಸೆಲ್ ದರ ತೀವ್ರವಾಗಿ ಏರಿಸಲು ಕಾರಣ ಅದರಿಂದ ರಸ್ತೆಯಲ್ಲಿ ವಾಹನಗಳ ಓಡಾಟ ಇಲ್ಲದಾಗಿ, ಅಪಘಾತಗಳು ಬಹಳ ಕಡಿಮೆಯಾಗುತ್ತವೆ ಎಂಬುದಕ್ಕಾಗಿ. ದಿನಬಳಕೆಯ ಆಹಾರದ ಬೆಲೆ ಮೋದಿ ಏರಿಸಲು ಕಾರಣ ಜನರು ಮಿತ ಆಹಾರ ಸೇವಿಸಿ ಬೊಜ್ಜು ಇಳಿಸಿ ಆರೋಗ್ಯವಂತರಾಗಿರಬೇಕು ಎಂಬ ಕಾರಣಕ್ಕಾಗಿ. ಗಡಿ ಕಾಯುವ ಸೈನಿಕರಿಗೆ ಕಳಪೆ ಆಹಾರ ಕೊಡುತ್ತಿರುವುದು ಅವರಲ್ಲಿ ಕೊಲೆಸ್ಟ್ರಾಲ್ ಕಡಿಮೆಯಾಗಿ ಸೈನಿಕರು ಸೋಮಾರಿತನ ಕಳೆದುಕೊಂಡು ಫಿಟ್ ಆಗಿ ಸರಿಯಾಗಿ ಗಡಿ ಕಾಯಬೇಕೆಂಬ ಕಾರಣಕ್ಕಾಗಿ. ಒಂದುವೇಳೆ ಉತ್ತಮ ಆಹಾರ ಕೊಟ್ಟರೆ ಸೈನಿಕರಲ್ಲಿ ಬೊಜ್ಜು ಬೆಳೆದು ಅವರು ಗಡಿ ಕಾಯುವಾಗ ನಿದ್ದೆ ಮಾಡಿದರೆ ಪಾಕ ಭಯೋತ್ಪಾದಕರು ನುಸುಳುವುದು ಸುಲಭವಾಗುತ್ತದೆ, ಅದಕ್ಕಾಗಿ ಕಳಪೆ ಆಹಾರ ಕೊಟ್ಟು, ಸೈನಿಕರನ್ನು ಯಾವಾಗಲೂ ಫಿಟ್ ಹಾಗೂ ಎಚ್ಚರದಿಂದ ಇಟ್ಟಿರುವುದು.

ನೋಟು ರದ್ದತಿ ಮಾಡಿದ್ದು ಸಹ ಕಾಳಧನ, ನಕಲಿ-ನೋಟು, ಭಯೋತ್ಪಾದನೆ, ನಕ್ಸಲೀಸಂ ಇವನ್ನು ನಿವಾರಿಸಲು ಅಲ್ಲವೇ ಅಲ್ಲ. ನೋಟು ರದ್ದತಿ ಮಾಡುವ ಮುಖ್ಯ ಉದ್ದೇಶ ಅಂಬಾನಿ ಹಾಗೂ ಇತರ ದೊಡ್ಡ ಉದ್ಯಮಿಗಳನ್ನು ಡಿಜಿಟಲ್ ಲೈಫ್ ಮೂಲಕ ಉದ್ಧರಿಸುವುದು, ಎಲ್ಲಾ ಸಣ್ಣ ಸಣ್ಣ ದಿನಸಿ ಅಂಗಡಿಗಳನ್ನು ಮುಚ್ಚಿಸಿ ಕೇವಲ ಮಾಲ್‌ಗಳು ಮಾತ್ರ ಉಳಿಯುವಂತೆ ಮಾಡುವುದು, ಇದರಿಂದ ದೇಶದಲ್ಲಿ ಉದ್ಯಮಗಳು ಹೆಚ್ಚಾಗಿ ಹೆಚ್ಚು ಹೆಚ್ಚು ಜನರಿಗೆ ನೌಕರಿ ದೊರೆಯುತ್ತದೆ. ಅಷ್ಟೇ ಅಲ್ಲ, ಇಡೀ ದೇಶದ ಜನರೆಲ್ಲಾ ತುಂಬಾ ಸೋಮಾರಿಗಳಾಗಿ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದುದರಿಂದ ಅವರನ್ನು ಬ್ಯಾಂಕುಗಳ ಲೈನಿನಲ್ಲಿ ನಿಲ್ಲಿಸಿ ಅವರಲ್ಲಿಯ ಬೊಜ್ಜು ಹಾಗೂ ಸೋಮಾರಿತನ ತೊಲಗಿಸಿ ಇಡೀ 130 ಕೋಟಿ ಜನರನ್ನು ಆರೋಗ್ಯವಂತರನ್ನಾಗಿಸುವುದೇ ನೋಟು ರದ್ದತಿಯ ಮುಖ್ಯ ಗುರಿಯಾಗಿತ್ತು, ಜತೆಗೆ ಜನರೆಲ್ಲ ರಾತ್ರಿಯೇ ಹೋಗಿ ಬ್ಯಾಂಕ್ ಲೈನಿನಲ್ಲಿ ಜಾಗ ಹಿಡಿದು ಕೂಡುತ್ತಿದ್ದುದರಿಂದ ಅವರ ಮನೆಯಲ್ಲಿ ಹೊಸ ಮಕ್ಕಳ ಜನನ ಸಂಖ್ಯೆಯು ತುಂಬಾ ಕುಸಿದು ಜನಸಂಖ್ಯೆ ನಿಯಂತ್ರಣಕ್ಕೂ ನೋಟು ರದ್ದತಿ ತುಂಬಾ ದೊಡ್ಡ ಕಾಣಿಕೆ ಕೊಟ್ಟಿದೆ ಎಂದು ಕಳ್ಳರ ಸಂಘ ಹೇಳಿದೆ.

ನೋಟು ರದ್ದತಿಯ ಇನ್ನೊಂದು ಮುಖ್ಯ ಗುರಿಯೆಂದರೆ ಕಾಳಧನವನ್ನು ಮಠ-ಆಶ್ರಮ-ದೇವಸ್ಥಾನಗಳತ್ತ ತಿರುಗಿಸಿ ಧರ್ಮದ ಪೋಷಣೆ ಮಾಡುವುದು. ನೋಟು ರದ್ದತಿಯಿಂದ ಬಹಳಷ್ಟು ಮಠಗಳು ಮತ್ತು ಆಶ್ರಮಗಳು ಕಮಿಷನ್ ಮೇಲೆ ಹಳೆ ನೋಟು ಬದಲಾಯಿಸಿ ರಾತ್ರೋರಾತ್ರಿ ಕೋಟ್ಯಾಧೀಶರಾದವು. ಹೀಗೆ ಮೋದಿಯ ನೋಟು ರದ್ದತಿಗೆ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಉದ್ದೇಶಗಳಿದ್ದವು. ಇಂತಹ ಘನ ಉದ್ದೇಶಗಳನ್ನು ಕಡೆಗಣಿಸಿ ಮೋದಿಯನ್ನು ಜರಿಯುವುದು ಸರಿಯಲ್ಲ ಎಂದು ಕಳ್ಳರ ಸಂಘವು ಅಭಿಪ್ರಾಯಪಟ್ಟಿದೆ.

ಗಾಂಧೀಜಿಯ ಬಳಿ ಕಣ್ಣು ಕಿವಿ ಬಾಯಿ ಮುಚ್ಚಿಕೊಂಡಿರುವ ಮೂರು ಬುದ್ಧಿವಂತ ಮಂಗಗಳಿದ್ದವು. ಈಗ ಅಭಿನವ ಗಾಂಧೀಜಿಯಾದ ಮೋದಿಜಿಯ ಬಳಿಯೂ ತಿಕ ಮುಚ್ಚಿಕೊಂಡಿರುವ ಮಂಗಗಳಿವೆ, ಅದೂ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತ-ಕುರಿಗಳ ರೂಪದಲ್ಲಿ. 'ಅಬ್ ಕಿ ಬಾರ್ ಮೋದಿ ಫರಾರ್' ಎಂದು ಇವೇ ಭಕ್ತ ಬಜರಂಗಿ ಮಂಗಗಳೇ ಉತ್ತರ ಪ್ರದೇಶದಲ್ಲಿ ಕೂಗುತ್ತಿವೆಯಂತೆ. ಯಾವುದೇ ಪೂರ್ವ ಸಿದ್ಧತೆ ಇಲ್ಲದೇ ಮೋದಿಯವರ ನೋಟು ರದ್ದತಿ ಹಾಗೂ ನಗದು-ರಹಿತ ವಹಿವಾಟಿನ



ಬೋಧನೆಯೆಂದರೆ ನೀರಿಲ್ಲದೇ ಕಕ್ಕಸಿಗೆ ಹೋಗಿ ನಂತರ ರದ್ದಿ ಪೇಪರಿನಿಂದ ಒರೆಸಿಕೊಂಡು ಆಮೇಲೆ ಜನರಿಗೆ ನೀರು-ರಹಿತ ಕಕ್ಕಸು ಹಾಗೂ ರದ್ದಿ ಪತ್ರಿಕೆಯ ಮಹತ್ವ ವಿವರಿಸಿದಂತೆ ಆಗಿದೆ ಅಷ್ಟೇ ಎಂದು ಮೋದಿ ವಿರೋಧಿಗಳು ಅನ್ನುವುದು ಸರಿಯಲ್ಲ, ಕಾರಣ ಇದರಿಂದ ರದ್ದಿಗೆ ಬೇಡಿಕೆ ವಿಪರೀತ ಹೆಚ್ಚುವುದನ್ನು ನಾವು ಗಮನಿಸಬೇಕು ಮತ್ತು ರದ್ದಿವಾಲಗಳನ್ನು ಬೆಂಬಲಿಸಬೇಕು ಎಂದು ಕಳ್ಳರ ಸಂಘ ಮೋದಿ ಪರ ನಗದು-ರಹಿತ ಹೇಳಿಕೆ ಕೊಟ್ಟಿದೆಯಂತೆ.

1978 ರಲ್ಲಿ ದೆಹಲಿ ವಿಶ್ವವಿದ್ಯಾಲಯದಿಂದ ಎಲ್ಲಾ ಪದವಿ ವಿದ್ಯಾರ್ಥಿಗಳಿಗೂ ಕೈ ಬರಹದ ಸರ್ಟಿಫಿಕೇಟ್ ಲಭಿಸಿದ್ದರೆ ಡಿಜಿಟಲ್ ಪ್ರಿಂಟೆಡ್ ಸರ್ಟಿಫಿಕೇಟ್ ಪಡೆದ ಏಕೈಕ ವಿದ್ಯಾರ್ಥಿ ಎಂದರೆ ನಮ್ಮ ನರೇಂದ್ರ ಮೋದಿ. ಹಾಗಾಗಿ ಇಂತಹ ಭಯಂಕರ ಪ್ರತಿಭಾವಂತ ವ್ಯಕ್ತಿಯ ಡಿಜಿಟಲ್ ಪೇಮೆಂಟ್ ಯೋಜನೆಯನ್ನು ಭಾರತದ ಕಳ್ಳಿಗರೆಲ್ಲಾ ಅರ್ಥಮಾಡಿಕೊಳ್ಳಬೇಕು. ಜೈ ಅಂಬಾನಿ ಭವಾನಿ ಮೋದಿಜಿಟಲ್.

- ವಿಠ್ಠಲ ಡಿ.ಎಸ್. ಮಡಿಕೇರಿ

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 01-02-2017 RNI No. KARKAN2005/

ಎಲ್ಲಿದ್ದೀರಾ ಗುರೂ?



'ಎದ್ದೇಳು ಮಂಜುನಾಥ' ಎನ್ನುತ್ತಾ ಮಂಜುನಾಥನನ್ನೇ ಎಬ್ಬಿಸಿದ್ದ ನಿರ್ದೇಶಕ ಗುರುಪ್ರಸಾದ್ ಈ ಬಾರಿ ತಾವೇ ನಿದ್ದೆಗೆ ಜಾರಿದ್ದಾರೆ. ಹಾಗಾಗಿ ಅವರ ನಿರ್ದೇಶನದಲ್ಲಿ ತಯಾರಾಗುತ್ತಿರುವ 'ಎರಡನೇ ಸಲ' ಸಿನಿಮಾಗೆ ಭರ್ತಿ ಮೂರು ವರ್ಷ ತುಂಬಿದೆ.

'ಡೈರೆಕ್ಟರ್ ಸ್ಪೆಷಲ್' ಸಿನಿಮಾದ ನಂತರ ನಿರ್ದೇಶಕರು ಧನಂಜಯ್ ಮತ್ತು ಸಂಗೀತಾ ಭಟ್‌ಗಾಗಿ ಸಿನಿಮಾವೊಂದನ್ನು ಕೈಗೆತ್ತಿಕೊಂಡರು. ಅದಕ್ಕೆ 'ಎರಡನೇ ಸಲ' ಎಂದೂ ಹೆಸರಿಟ್ಟರು. ಅಲ್ಲಿಂದ ಶುರುವಾದ ಸಿನಿಯಾನ ಈಗ ಆಡಿಯೋ ಬಿಡುಗಡೆ ಹಂತಕ್ಕೆ ಬಂದು ನಿಂತಿದೆ. ಎರಡು ಗಂಟೆಯ ಸಿನಿಮಾ ಮಾಡಲು ನಿರ್ದೇಶಕರು ಬರೋಬ್ಬರಿ ಮೂವತ್ತಾರು ತಿಂಗಳ ತೆಗೆದುಕೊಂಡಿದ್ದಾರೆ. ಜತೆಗೆ ಈ ಸಿನಿಮಾವನ್ನು ಅರ್ಧಕ್ಕೆ ಬಿಟ್ಟು ನಡೆದಿದ್ದಾರೆ.

ಮೊನ್ನೆಯಷ್ಟೇ ಚಿತ್ರದ ಆಡಿಯೋ ಬಿಡುಗಡೆ ಆಯಿತು. ಅಲ್ಲಿ ಗುರು ಕಾಣಲಿಲ್ಲ. ನಿರ್ಮಾಪಕ ಯೋಗೀಶ್ ಅವರನ್ನು ಕೇಳಿದರೆ "ನಮಗೂ ನಾಟ್‌ರಿಚೇಬಲ್" ಅಂತಾರೆ. ಗುರುಪ್ರಸಾದ್ ಅವರ ಮೊಬೈಲ್ ಕೂಡ ವ್ಯಾಪ್ತಿ ಪ್ರದೇಶದ ಹೊರಗಿದೆ. ಅಲ್ಲಿಗೆ ತಮ್ಮ ಸಿನಿಮಾದ ಬಗ್ಗೆ ಅವರಿಗೇ ಪ್ರೀತಿ ಇಲ್ಲ ಅನ್ನುವುದು ಸಾಬೀತಾಗಿದೆ. ತಾವು ಸಿನಿಮಾವನ್ನೇ ನಂಬಿದವರು ಅನ್ನುವ ಗುರುಪ್ರಸಾದ್ ತನ್ನದೇ ಸಿನಿಮಾ ಬಗ್ಗೆ ಮುನಿಸಿಕೊಂಡಿದ್ದಾರೆ ಅನ್ನುತ್ತಿವೆ ಮೂಲಗಳು. ಮೂರು ವರ್ಷಗಳ ಕಾಲ ಸಿನಿಮಾದ ಶೂಟಿಂಗ್‌ನಲ್ಲೇ ಕಳೆದಿದ್ದಕ್ಕೆ ನಿರ್ಮಾಪಕರಿಗೆ ಬೇಸರವಾಗಿದೆಯಂತೆ. ಈ ಆಮೆ ವೇಗವನ್ನು ಬದಿಗಿಟ್ಟು ಸಿನಿಮಾ ಮಾಡಿ ಎಂದು ಜೋರು ಮಾಡಿದ್ದಕ್ಕೆ ಗುರು ಮುನಿಸಿಕೊಂಡಿದ್ದಾರೆ. ಚಿತ್ರದ ಮೊದಲ ಕಾಪಿಯನ್ನು ನಿರ್ಮಾಪಕರ ಕೈಗಿಟ್ಟು ಕಾಣೆಯಾಗಿದ್ದಾರೆ.

ನಿಖಿಲ್ ಚಿತ್ರಕ್ಕೆ ಕೃಷ್ಣ ನಿರ್ದೇಶಕ

'ಜಾಗ್ವಾರ್' ಸಿನಿಮಾ ಶೂಟಿಂಗ್ ನಡೆಯುವಾಗಲೇ ನಿಖಿಲ್ ಮೂರು ಚಿತ್ರಗಳಿಗೆ ಸಹಿ ಮಾಡಿದ್ದಾರೆ ಅನ್ನುವ ಮಾತು ಕೇಳಿಬಂತು. ಅಲ್ಲದೇ ತೆಲುಗಿನಲ್ಲೂ ಅವರು ಸಿನಿಮಾ ಮಾಡಲಿದ್ದಾರೆಂದು ಹೇಳಲಾಗಿತ್ತು, ಅವರ ಎರಡನೇ ಚಿತ್ರಕ್ಕೆ ತೆಲುಗಿನ ಖ್ಯಾತ ನಿರ್ದೇಶಕರು ಆಕ್ಷನ್ ಕಟ್ ಹೇಳಲಿದ್ದಾರೆಂದೂ ಸುದ್ದಿ ಆಯಿತು. ಈಗ ಎಲ್ಲವೂ ತಲೆಕೆಳಗಾಗಿವೆ. ನಿಖಿಲ್ ನಟನೆಯ ಎರಡನೇ ಚಿತ್ರಕ್ಕೆ ಕನ್ನಡದ ನಿರ್ದೇಶಕರೇ ನಿರ್ದೇಶನ ಮಾಡುತ್ತಿದ್ದಾರೆ. 'ಗಜಕೇಸರಿ' ಮತ್ತು 'ಹೆಬ್ಬುಲಿ' ಖ್ಯಾತಿಯ ನಿರ್ದೇಶಕ ಮುಂಗಾರು ಕೃಷ್ಣ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲಿದ್ದಾರೆ. ನಿರ್ದೇಶಕರು ಹೇಳಿದ ಕತೆಯನ್ನು ಕುಮಾರಸ್ವಾಮಿ ಮತ್ತು ನಿಖಿಲ್ ಇಬ್ಬರೂ ಒಪ್ಪಿಕೊಂಡಿದ್ದಾರಂತೆ.

'ಜಾಗ್ವಾರ್' ಸಿನಿಮಾ ಮುಗಿಯುತ್ತಿದ್ದಂತೆಯೇ ನಿಖಿಲ್ ಮತ್ತೆ ವಿದೇಶಕ್ಕೆ ಹಾರಿದ್ದಾರೆ. ಸಿನಿಮಾ ಸಂಬಂಧಿ ತರಬೇತಿಯನ್ನೂ ಅವರು ಪಡೆಯುತ್ತಿದ್ದಾರೆ. ಈ ಬಾರಿ ಯೂತ್ಸ್‌ಗೆ ಇಷ್ಟವಾಗುವಂತಹ ಲುಕ್‌ನಲ್ಲಿ ಅವರು ಕಾಣಲಿದ್ದಾರಂತೆ.



ಕೃಷ್ಣ ನಿರ್ದೇಶನದ ಸಿನಿಮಾ ಮುಗಿಯುತ್ತಿದ್ದಂತೆಯೇ ಮತ್ತೊಂದು ಸಿನಿಮಾ ಸೆಟ್ಟೇರಲಿದ್ದು, ಅದು ಕೂಡ ಕನ್ನಡದ ನಿರ್ದೇಶಕರ ಪಾಲಾಗಿದೆ. 'ಬಹದ್ದೂರ್' ಚಿತ್ರದ ನಿರ್ದೇಶಕ ಚೇತನ್ ಅವರ ಕತೆ ಓಕೆ ಆಗಿದ್ದು ಅದಕ್ಕಿನ್ನು ದಿನಾಂಕ ನಿಗದಿ ಆಗಿಲ್ಲ.

ಬುರುಡೆ ಬಿಡದಂತೆ ಪ್ರೇಮ್‌ಗೆ ಸೂಚನೆ

ನಿರ್ದೇಶಕ ಪ್ರೇಮ್‌ಗೆ ಬುರುಡೆ ಬಿಡದಂತೆ ಸುದೀಪ್ ಮತ್ತು ಶಿವರಾಜ್‌ಕುಮಾರ್ ಖಡಕ್ ಸಂದೇಶ ರವಾನಿಸಿದ್ದಾರಂತೆ. ಹೀಗೊಂದು ಮಾತು ಸ್ಯಾಂಡಲ್‌ವುಡ್‌ನಲ್ಲಿ ಹರಿದಾಡುತ್ತಿದೆ. ಪ್ರಚಾರದ ವಿಷಯದಲ್ಲಿ ಪ್ರೇಮ್ ಯಾವ ಮಟ್ಟಕ್ಕೆ ಬೇಕಾದರೂ ಇಳಿಯುತ್ತಾರೆ. ಯಾರ ಹೆಸರನ್ನು ಬೇಕಾದರೂ ಅವರು ಬಳಸಿಕೊಳ್ಳುತ್ತಾರೆ. ಹಾಗಾಗಿ ತಮ್ಮ ಚಿತ್ರಕ್ಕೆ ಯಾವುದೇ ನೆಗೆಟಿವ್ ಪಬ್ಲಿಸಿಟಿ ಬೇಡ ಎಂದು ಇಬ್ಬರೂ ಕಲಾವಿದರು ಹೇಳಿದ್ದಾರಂತೆ.

ಪ್ರೇಮ್ ಮೇಲೆ ಸುದೀಪ್ ಮತ್ತು ಶಿವರಾಜ್‌ಕುಮಾರ್ ಕೋಪಗೊಳ್ಳಲು ಕಾರಣವೂ ಇದೆ. 'ದಿ ವಿಲನ್' ಚಿತ್ರಕ್ಕೆ ಬ್ರಿಟಿಷ್ ರೂಪದರ್ಶಿ, ಬಾಲಿವುಡ್ ತಾರೆ ಅಮಿ ಜಾಕ್ಸನ್ ನಾಯಕಿ ಎಂದು ಮೊದಲು ಪ್ರೇಮ್ ಬುರುಡೆ ಬಿಟ್ಟಿದ್ದರು. ಅದು ದೊಡ್ಡ ಮಟ್ಟದಲ್ಲೂ ಸುದ್ದಿ ಆಗಿತ್ತು, ಅಮಿ ಅವರನ್ನು ಅಪ್ರೋಚ್ ಮಾಡದೇ ಪ್ರೇಮ್ ಸುದ್ದಿ ಮಾಡುತ್ತಿರುವುದು ಕಲಾವಿದರಿಗೆ ಬೇಸರ ತರಿಸಿತ್ತು.

ಅಂದಹಾಗೆ 'ದಿ ವಿಲನ್' ಚಿತ್ರ ಡಿಸೆಂಬರ್ ಕೊನೆಯ ವಾರದಲ್ಲಿ ಸೆಟ್ಟೇರಬೇಕಿತ್ತು, ಇನ್ನೂ ಮೇಕಪ್ ಟೆಸ್ಟ್‌ನಲ್ಲೇ ಪ್ರೇಮ್ ಕಾಲಹರಣ ಮಾಡುತ್ತಿದ್ದಾರೆ. ಫೆಬ್ರವರಿಯಲ್ಲೂ ಶೂಟಿಂಗ್ ಶುರುವಾಗುವುದು ಅನುಮಾನ ಎನ್ನಲಾಗುತ್ತಿದೆ. ಈ ಮಧ್ಯೆ ಶಿವರಾಜ್‌ಕುಮಾರ್ ಮತ್ತು ಸುದೀಪ್ ಅವರ ಕಾಲ್‌ಶೀಟ್ ಒಟ್ಟಿಗೆ ಸಿಗದೇ ಇರುವುದೂ ಚಿತ್ರೀಕರಣ ಮುಂದೂಡಲು ಕಾರಣವಾಗಿದೆ. ಶೂಟಿಂಗ್ ಶುರುವಾಗುವ ತನಕ ಇನ್ನೆಷ್ಟು ನಾಯಕಿಯರ ಹೆಸರು ಕೇಳಿಬರುತ್ತದೆಯೋ ಪ್ರೇಮ್ ಅವರನ್ನೇ ಕೇಳಬೇಕು.



ಅಮಿ ಜಾಕ್ಸನ್

ನಿರ್ಮಾಪಕನಾದ ಪುನೀತ್




ಪುನೀತ್ ರಾಜ್‌ಕುಮಾ[...] ಸಿನಿಮಾಗಳಲ್ಲಿ ಹಣ ಹೂಡಲ[...] ಅನ್ನುವ ಸುದ್ದಿ ಎರಡು ವರ್ಷಗ[...] ಹರಿದಾಡುತ್ತಲೇ ಇತ್ತು. ಎ[...] ಅಂದುಕೊಂಡಂತೆ ಆಗಿದ್ದರೆ [...] ನಟನೆಯ 'ನಟರಾಜ ಸರ್ವೀಸ್' [...] ಪುನೀತ್ ನಿರ್ಮಾಪಕರಾಗಬೇ[...] ಆದು ಆಗಲಿಲ್ಲ, ಈಗ ಪುನೀ[...] ನಿರ್ಮಾಣಕ್ಕೆ ಇಳಿದಿದ್ದಾರೆ. 'ಗೋಧಿ [...] ಸಾಧಾರಣ ಮೈಕಟ್ಟು' ಚಿ[...] ನಿರ್ದೇಶಕ ಹೇಮಂತ್ ರಾವ್ [...] ಸಿನಿಮಾವನ್ನು ತಾವೇ ನಿರ್ಮಿಸುವು[...] ಹೇಳಿದ್ದಾರೆ. ಅಲ್ಲಿಗೆ ಅಧಿಕೃತವಾಗಿ ಪುನೀತ್ ನಿರ್ಮಾಣಕ್ಕೆ ಇಳಿದಂತಾ[...] ಹಾಗಂತ ಎಲ್ಲ ಹಣವನ್ನೂ ಪುನೀತ್ ಅಷ್ಟೇ ಹಾಕುತ್ತಿಲ್ಲ, ಹೊಂ[...] ಕ್ರಿಯೇಷನ್‌ನ ಕಾರ್ತಿಕ್ ಕೂಡ ಜತೆಯಾಗಿದ್ದಾರೆ. 'ಗೋಧಿ ಬಣ್ಣ ಸಾಧಾ[...] ಮೈಕಟ್ಟು' ಸಿನಿಮಾವನ್ನು ಪುನೀತ್ ತುಂಬಾ ಮೆಚ್ಚಿಕೊಂಡಿದ್ದರಂತೆ. ಅ[...] ಈ ಚಿತ್ರದ ನಿರ್ದೇಶಕರು ಪುನೀತ್ ಅವರ 'ಪೃಥ್ವಿ' ಸಿನಿಮಾ[...] ಅಸೋಸಿಯೇಟ್ ನಿರ್ದೇಶಕರಾಗಿ ಕೆಲಸ ಮಾಡಿದ್ದರಂತೆ. ಈ ಎ[...] ಕಾರಣದಿಂದಾಗಿ ಹಣ ಹಾಕಲು ಒಪ್ಪಿಕೊಂಡಿದ್ದಾರೆ.

ಮೊದಲ ಸಿನಿಮಾದಲ್ಲಿ ಅಪ್ಪ ಮತ್ತು ಮಗನ ಬಾಂಧವ್ಯವನ್ನು ತೆರೆದಿ[...] ನಿರ್ದೇಶಕರು, ಈ ಬಾರಿ ಪೊಲೀಸ್ ಆಫೀಸರ್ ಬದುಕಿನ ಕುರಿ[...] ಸಿನಿಮಾ ಮಾಡಲಿದ್ದಾರೆ. ಪೊಲೀಸ್ ಆಫೀಸರ್ ಬದುಕಿನಲ್ಲಿ ಏನೆಲ್ಲ ಘಟನೆ[...] ಬರುತ್ತವೆಯೋ, ಅದಕ್ಕೆ ಕಮರ್ಷಿಯಲ್ ಅಂಶಗಳನ್ನು ಬೆರೆಸಿಕೊಂಡು [...] ಬರೆದಿದ್ದಾರಂತೆ. ಚಿತ್ರಕ್ಕೆ ಚರಣ್ ರಾಜ್ ಸಂಗೀತ ನೀಡುತ್ತಿದ್ದು, ತಾರಾಗ[...] ಆಯ್ಕೆ ನಡೆಯಬೇಕಿದೆ.

ಪ್ರಜ್ವಲ್‌ಗೆ ಕೈಕೊಟ್ಟ ಠಾಕ[...]

ನಿರ್ದೇಶಕ ಗುರು ದೇಶಪಾಂಡೆ ಸಿನಿಮಾವೆಂದರೆ ನಟರು ಭ[...] ಪಡುವಂತಾಗಿದೆ. ರೀಮೇಕ್ ಕತೆ ಒಪ್ಪಿಸಿ ಸಿನಿಮಾ ಮಾಡುವುದಾಗಿ ಹೇ[...] ಗುರು, ಆನಂತರ ಆ ಚಿತ್ರಗಳನ್ನು ಡ್ರಾಪ್ ಮಾಡುತ್ತಾರೆ ಅನ್ನುವ ಆರೋ[...] ಅವರ ಮೇಲಿದೆ. ಅದಕ್ಕೆ ಕೆಲವು ಉದಾಹರಣೆಗಳನ್ನೂ ನಾಯಕರು ನೀಡುತ್ತಾ[...] ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಸತೀಶ್ ನೀನಾಸಂಗಾಗಿ ದೇಶಪಾ[...] 'ಪಡ್ಡೆಹುಲಿ' ಎಂಬ ಸಿನಿಮಾ ಮಾಡಬೇಕಿತ್ತು, ಪತ್ರಿಕೆಗಳಲ್ಲಿ ಈ ಕುರಿ[...] ಜಾಹೀರಾತನ್ನೂ ಅವರು ನೀಡಿದ್ದರು. ಈಗದು ಡ್ರಾಪ್ ಆಗಿದೆ. ಆನಂ[...] ಇದೇ ನಿರ್ದೇಶಕರು ಮತ್ತೊಂದು ಜಾಹೀರಾತನ್ನು ನೀಡಿದರು. ಅ[...] 'ಠಾಕ್ರೆ' ಸಿನಿಮಾಗೆ ಸಂಬಂಧಿಸಿದ್ದು, ಪ್ರಜ್ವಲ್ ದೇವರಾಜ್ ಮುಖ್ಯಭೂಮಿ[...] ಯಲ್ಲಿ 'ಠಾಕ್ರೆ' ಸಿನಿಮಾ ಮಾಡುವುದಾಗಿ ಹೇಳಿದ್ದರು. ಈ ಚಿತ್ರದಲ್ಲಿ ರವಿಚಂದ್ರ[...] ಕೂಡ ಇದ್ದಾರೆ ಅನ್ನುವುದನ್ನೂ ಅವರು ಹೇಳಿಕೊಂಡಿದ್ದರು. ಈಗ ಆ [...] ಕೂಡ ಆಗುತ್ತಿಲ್ಲ, ಈ ಮಧ್ಯೆ ಮತ್ತೊಂದು ಸಿನಿಮಾ ಮಾಡು ವುದಾಗಿ ಗು[...] ಹೇಳಿಕೊಂಡಿದ್ದಾರೆ.

ಈ ಚಿತ್ರದಲ್ಲೂ ಪ್ರಜ್ವಲ್ ನಾಯಕನಂತೆ. ರವಿಚಂದ್ರನ್ ಕೂಡ ಇರಲಿದ್ದಾರಂತೆ. ಆದರೆ, ಅದು 'ಠಾಕ್ರೆ' ಸಿನಿಮಾವಲ್ಲವಂತೆ. ಥ್ರಿಲ್ಲಿಕತೆಯನ್ನು ಇವರಿಗಾಗಿ ಹುಡುಕಿದ್ದೇನೆ ಅನ್ನುವ ನಿರ್ದೇಶಕರು, ಈ ಚಿತ್ರವನ್ನಾದರೂ ಮಾಡುತ್ತಾರಾ, ಇಲ್ಲವಾ, ಕಾದು ನೋಡಬೇಕು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com